
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



'ಪೆನ್ ಪ್ರಶಸ್ತಿ' ವಿಜೇತ

ಪಿ.ಮಹಮ್ಮದ್

ಸಂಪುಟ 12 | ಸಂಚಿಕೆ 37 | ಸೆಪ್ಟೆಂಬರ್ 10-16, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಪಾರ್ಲಿಮೆಂಟ್ ಚಲೋ

5 ಸೆಪ್ಟೆಂಬರ್ 2018, ನವದೆಹಲಿ

CITU - AIKS - AIAWU

ಸಂಸತ್ತಿನೆದುರು ಲಕ್ಷಾಂತರ ರೈತ-ಕಾರ್ಮಿಕರ ಚಾರಿತ್ರಿಕ ಐಕ್ಯ ಕಾರ್ಯಾಚರಣೆ

ಮಹಿಳೆಯರ ಪಣ



ಮೈತ್ರಿ ಸರ್ಕಾರದ ವಿರೋಧವೂ ಅಲ್ಲ ಬಿಜೆಪಿಯ ಪರವೂ ಅಲ್ಲ



'ಸಹಿಷ್ಣುತೆಗಾಗಿ ಸಾಹಿತ್ಯ ಸಮಾವೇಶ' ಪರ್ಯಾಯ ತೋರಿತೇ?



ಸರ್ವಾಧಿಕಾರಿ ಶಾಹಿಗೆ ಬಹು-ಆಯಾಮಗಳ ಪ್ರತಿರೋಧ

ಸೆ.10- ಪ್ರತಿಭಟನಾ ಹರತಾಳಕ್ಕೆ ಎಡಪಕ್ಷಗಳ ಕರೆ



ಮೋದಿ.. ಮೋದಿ.. ಮೋದಿ.. ಯಾರದು ಮುಂದಿನ ಸರದಿ ?

ಸೆಪ್ಟಂಬರ್ 5: ಮೋದಿ ಆಳ್ವಿಕೆಗೆ ದೊಡ್ಡ ಸವಾಲೊಡ್ಡಿದೆ ದುಡಿಯುವ ವರ್ಗಗಳ ಚಾರಿತ್ರಿಕ ಐಕ್ಯ ಕಾರ್ಯಾಚರಣೆ



ದೇಶದ ಮೂಲೆ-ಮೂಲೆಗಳಿಂದ ನೂರಾರು, ಸಾವಿರಾರು ಕಿ.ಮೀ. ದೂರದಿಂದ ಬಂದ ಮೂರು ಲಕ್ಷದಷ್ಟು ಕಾರ್ಮಿಕರು, ನೌಕರರು, ರೈತರು, ಕೃಷಿ ಕೂಲಿಕಾರರು ಸೆಪ್ಟಂಬರ್ 5, 2018ನ್ನು ದೇಶದ ದುಡಿಯುವ ವರ್ಗಗಳ ಹೋರಾಟದ ಇತಿಹಾಸದಲ್ಲಿ ಹೊಸದೊಂದು ಐತಿಹಾಸಿಕ ದಿನವಾಗಿ ದಾಖಲಿಸಿದರು.

ಅವರು 'ಜನಶಕ್ತಿ'ಯ ಹಿಂದಿನ ಸಂಚಿಕೆಯಲ್ಲಿ ಹೇಳಿರುವಂತೆ 0.1ಶೇ. ಶ್ರೀಮಂತರ ಪರವಾದ ಧೋರಣೆಗಳ ವಿರುದ್ಧ, 99.9ಶೇ. ಜನಸಾಮಾನ್ಯರ-ಪರ ಧೋರಣೆಗಳಿಗಾಗಿ ಎಲ್ಲರ ನಡಿಗೆ-ದಿಲ್ಲಿಯ ಕಡೆಗೆ ಎಂಬ ದೇಶದ ಕೋಟ್ಯಂತರ ಕಾರ್ಮಿಕರು, ರೈತರು ಮತ್ತು ಕೃಷಿ ಕೂಲಿಕಾರರ ನಡುವೆ ಕೆಲಸ ಮಾಡುತ್ತಿರುವ ಸಿಐಟಿಯು, ಎಐಕೆಎಸ್(ಅಖಿಲ ಭಾರತ ಕಿಸಾನ್ ಸಭಾ) ಮತ್ತು ಎಐಎಡಬ್ಲ್ಯುಯು (ಅಖಿಲ ಭಾರತ ಕೃಷಿಕೂಲಿಕಾರರ ಸಂಘ) ನೀಡಿರುವ ಕರೆಗೆ ಓಗೊಟ್ಟು ದೇಶದ ರಾಜಧಾನಿಗೆ ಬಂದಿದ್ದರು.

ಕೇರಳ ಮತ್ತು ಕರ್ನಾಟಕದಲ್ಲಿ, ನಂತರ ಅಸ್ಸಾಂನಲ್ಲಿ ತೀವ್ರ ನೆರೆ ಹಾವಳಿಗಳು, ದೇಶದ ಇತರೆಡೆಗಳಲ್ಲಿ ಸತತ ಮಳೆ ದಿಲ್ಲಿಗೆ ಬರಬೇಕೆಂದಿದ್ದ ಕೆಲವರಿಗೆ ಅಡ್ಡಿಯುಂಟು ಮಾಡಿದ್ದರೂ ಒಟ್ಟಾರೆಯಾಗಿ ಈ ದುಡಿಯುವ ಜನಗಳ ಹುರುಪನ್ನು ಇಳಿಸಲಿಲ್ಲ. ದಿಲ್ಲಿಯಲ್ಲಿ ಮಳೆಯಿಂದಾಗಿ ಸಿಐಟಿಯು ದಿಲ್ಲಿಗೆ ಬರುವವರಿಗೆ ಕಲ್ಪಿಸಬೇಕೆಂದಿದ್ದ ಸೌಕರ್ಯಗಳನ್ನು ಪೂರ್ಣ ಪ್ರಮಾಣದಲ್ಲಿ ಕಲ್ಪಿಸಲಾಗಲಿಲ್ಲ. ಆದರೂ ಇದು ಪ್ರತಿಭಟನಾಕಾರರಿಗೆ ದೊಡ್ಡ ಅಡಚಣೆಯೇನೆಂದೇನೂ ಅನಿಸಲಿಲ್ಲ. ಒಬ್ಬ ಬುಡಕಟ್ಟು ಪ್ರತಿಭಟನಾಕಾರ ಹೇಳಿದಂತೆ "ನಮ್ಮ ಸಮಸ್ಯೆಗಳು ಈ ಮಳೆಗಿಂತ ಎಷ್ಟೋ ದೊಡ್ಡವು. ಆದ್ದರಿಂದ ನಾವು ಬಂದಿದ್ದೇವೆ.".

ತೊಂದರೆ ಉಂಟು ಮಾಡಿದ್ದು ಮಳೆಯಷ್ಟೇ ಅಲ್ಲ. ಹಲವು ರಾಜ್ಯಗಳಲ್ಲಿ ಆಡಳಿತ ಮತ್ತು ಪೋಲೀಸರು ಕೂಡ ಅಡ್ಡಿಯುಂಟುಮಾಡಿದರು. ರ್‍ಯಾಲಿಯಲ್ಲಿ ಭಾಗವಹಿಸದಂತೆ ಮಾಡಲು ಹೆದರಿಕೆ-ಬೆದರಿಕೆಗಳನ್ನೂ ಪ್ರಯೋಗಿಸಿದರು. ಮಣಿಪುರದಲ್ಲಿ ಈ ರ್‍ಯಾಲಿಗೆ ರೈತರು, ಕಾರ್ಮಿಕರು ಹೋಗುತ್ತಿದ್ದಾರೆ ಎಂದು ಹೇಳಿಕೆ ಕೊಟ್ಟದ್ದಕ್ಕೆ ಮುಖಂಡರನ್ನು ಎರಡು ಗಂಟೆಗಳ ಕಾಲ ಪೋಲೀಸ್ ಠಾಣೆಯಲ್ಲಿ ಕೂಡಿಸಿಟ್ಟರು ಎಂದು ಸಿಐಟಿಯು ಅಧ್ಯಕ್ಷೆ ಡಾ. ಹೇಮಲತಾ ಹೇಳಿದ್ದಾರೆ. ಸುಳ್ಳು ಮತ್ತು ದಿಕ್ಕು ತಪ್ಪಿಸುವ ವರದಿಗಳನ್ನು, ವಿಶೇಷವಾಗಿ ಸ್ಕೀಂ ಕಾರ್ಮಿಕರು ಭಾಗವಹಿಸದಂತೆ ಮಾಡಲು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿಸಲಾಯಿತು. ಅದೇ ದಿನಕ್ಕೆ ಅಧಿಕೃತ ಸಭೆಗಳನ್ನು ಏರ್ಪಡಿಸಿ ಹಾಜರಾಗದಿದ್ದರೆ ಶಿಸ್ತುಕ್ರಮದ ಬೆದರಿಕೆ ಹಾಕಲಾಯಿತು.

ಆದರೂ ಲಕ್ಷಾಂತರ ದುಡಿಯುವ ಜನ ದಿಲ್ಲಿಗೆ ಬಂದರು. ಮೋಡ ಕವಿದ ವಾತಾವರಣವನ್ನೂ ಲೆಕ್ಕಿಸದೆ ಅವರು ರಾಮಲೀಲಾ ಮೈದಾನದಿಂದ ಅಲ್ಲಿನ ರಾಜರಸ್ತೆಗಳಲ್ಲಿ ತಮ್ಮ ಅಸಮಾಧಾನ, ಆಕ್ರೋಶ ಮತ್ತು ದೃಢ ನಿರ್ಧಾರಗಳಿಗೆ ದನಿ ನೀಡುವ

ಪುಟ 10ಕ್ಕೆ --ರ್‍ಯಾಲಿಯ ದೃಶ್ಯಗಳು ಪುಟ 8-9

ಸೆಪ್ಟಂಬರ್ 10: ಅಖಿಲ ಭಾರತ ಪ್ರತಿಭಟನಾ ಹರತಾಳ: ಎಡಪಕ್ಷಗಳ ಕರೆ

ಐದು ಎಡಪಕ್ಷಗಳು-ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್)-ಲಿಬರೇಷನ್, ಎಸ್‌ಯುಸಿಐ(ಐ) ಮತ್ತು ಆರ್‌ಎಸ್‌ಪಿ ಈ ಮೋದಿ ಸರಕಾರ ಜನಗಳ ಮೇಲೆ ಅಭೂತಪೂರ್ವ ಆರ್ಥಿಕ ಹೊರೆಗಳನ್ನು ಹೇರುತ್ತಿರುವುದರೊಂದಿಗೇ ದುಷ್ಟ ಕೋಮುವಾದಿ-ಸರ್ವಾಧಿಕಾರಶಾಹಿ ದಾಳಿಗಳನ್ನೂ ಮಾಡುತ್ತಿರುವ ಪರಿಸ್ಥಿತಿಯನ್ನು ಪ್ರತಿಭಟಿಸಲು ಸೆಪ್ಟಂಬರ್ 10ರಂದು ಒಂದು ರಾಷ್ಟ್ರವ್ಯಾಪಿ ಹರತಾಳಕ್ಕೆ ಕರೆ ಕೊಡಲು ನಿರ್ಧರಿಸಿವೆ.

ನಾಗಾಲೋಟ ಹೂಡಿರುವ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ಕೋಟ್ಯಂತರ ಭಾರತೀಯ ಬದುಕುಗಳನ್ನು ಕುಂಠಿತಗೊಳಿಸುತ್ತಿವೆ. ಅದಾಗಲೇ ಹೆಚ್ಚುತ್ತಿರುವ ಕೃಷಿ ಬಿಕ್ಕಟ್ಟಿನಿಂದ ನರಳುತ್ತಿರುವ ರೈತರು ತಮ್ಮ ಉತ್ಪಾದನಾ ಖರ್ಚುಗಳು ಮತ್ತಷ್ಟು ಹೆಚ್ಚುತ್ತಿರುವುದನ್ನು ಕಾಣುತ್ತಿದ್ದಾರೆ. ಈ ಬೆಲೆಯೇರಿಕೆಗಳು ಸರ್ವತೋಮುಖ ಹಣದುಬ್ಬರದ ಪರಿಣಾಮ ಉಂಟು ಮಾಡಲಿವೆ. ಇದು ಮತ್ತಷ್ಟು ಆರ್ಥಿಕ ನಿಧಾನಗತಿಯನ್ನು ತರುವುದರಿಂದಾಗಿ ಉದ್ಯೋಗಗಳು ನಿರ್ಮಾಣವಾಗುವುದಿರಲಿ, ಅವನ್ನು ಕಡಿತಗೊಳಿಸುತ್ತದೆ.

ರೂಪಾಯಿಯ ಮೌಲ್ಯದಲ್ಲಿ ಹಿಂದೆಂದೂ ಕಾಣದ ಇಳಿಕೆ ಮೋದಿ ಸರಕಾರ ಉಂಟು ಮಾಡಿರುವ ಆಳವಾದ ಆರ್ಥಿಕ ಬಿಕ್ಕಟ್ಟನ್ನು ಬಿಂಬಿಸುತ್ತದೆ ಎಂದು ಎಡಪಕ್ಷಗಳು ಅಭಿಪ್ರಾಯ ಪಟ್ಟಿವೆ.

ದೇಶಾದ್ಯಂತ ರೈತಾಪಿ ಜನಗಳು ಸರಕಾರ ಆಶ್ವಾಸನೆಯಿತ್ತಿರುವಂತೆ ಫಲದಾಯಕ ಬೆಲೆಗಳನ್ನು ಮತ್ತು ಸಾಲಮನ್ನಾ ಮಾಡಿ ಎಂದು ಆಗ್ರಹಿಸುತ್ತಿದ್ದರೆ, ಮೋದಿ ಸರಕಾರ ಅದನ್ನು ನಿರ್ಲಕ್ಷಿಸುತ್ತಿದೆ. ಇನ್ನೊಂದೆಡೆಯಲ್ಲಿ ಇದೇ ಸರಕಾರ ಕಾರ್ಪೊರೇಟ್‌ಗಳು ಕಳೆದ ನಾಲ್ಕು ವರ್ಷಗಳಲ್ಲಿ ತೆಗೆದುಕೊಂಡ ಸುಮಾರು 4 ಲಕ್ಷ ಕೋಟಿ ರೂ.ಗಳನ್ನು ಮನ್ನಾ ಮಾಡಿ ಅವರಿಗೆ ಬಕ್ಷೀಸು ಕೊಡುತ್ತಿದೆ. ಈ ಕಾರ್ಪೊರೇಟ್‌ಗಳು ನಮ್ಮ ಬ್ಯಾಂಕುಗಳಿಂದ ಪಡೆದ ಅಪಾರ ಪ್ರಮಾಣದ ಸಾಲಗಳು ನಂತರ ಎನ್‌ಪಿಎ ಗಳಾಗಿ ಬ್ಯಾಂಕಿಂಗ್ ವ್ಯವಸ್ಥೆಯನ್ನೇ ಹಿಂಡಿ ಹಿಪ್ಪೆ ಮಾಡುತ್ತಿವೆ ಎಂದಿರುವ ಎಡಪಕ್ಷಗಳು ಇಂತಹ ಚಮಚಾ ಬಂಡವಾಳಶಾಹಿ ವಿವಿಧ ವ್ಯವಹಾರಗಳಲ್ಲಿ ಕಾಣ ಬರುತ್ತಿವೆ ಎಂದಿವೆ. ಉದಾ: ಈಗ ವೇಗವಾಗಿ ಅನಾವರಣಗೊಳ್ಳುತ್ತಿರುವ ರಫಾಲ್ ಯುದ್ಧವಿಮಾನ ಖರೀದಿ ಹಗರಣ. ಈ ಬಗ್ಗೆ ತನಿಖೆ ನಡೆಸಲು ಹಟತೊಟ್ಟು ನಿರಾಕರಿಸುತ್ತಿರುವುದು ಹಗರಣವನ್ನು ಮತ್ತಷ್ಟು ದೃಢ ಪಡಿಸುತ್ತದೆ.

ಕೊಟ್ಟಿರುವ ಆಶ್ವಾಸನೆಯಂತೆ ಕಪ್ಪು ಹಣವನ್ನು ವಸೂಲಿ ಮಾಡುವ ಬದಲು, ಅದನ್ನು ಕಾನೂನುಬದ್ಧಗೊಳಿಸಲಾಗುತ್ತಿದೆ. ಇಂತಹ ಭಾರೀ ವಿಫಲತೆಗಳಿಂದ ಜನಗಳ ಗಮನವನ್ನು ಬೇರೆಡೆಗೆ ತಿರುಗಿಸಲು ಸರ್ವ ಪ್ರಯತ್ನ ನಡೆಸಲಾಗುತ್ತಿದೆ. ದ್ವೇಷ ಹಿಂಸಾಚಾರ ಮತ್ತು ಲಂಗುಲಗಾಮಿಲ್ಲದೆ ಕಾರ್ಯಕರ್ತರನ್ನು ಬಂಧಿಸಲಾಗುತ್ತಿದೆ. ಆದರೆ ಈ ಪ್ರಯತ್ನಗಳು ಯಶಸ್ವಿಯಾಗುವುದಿಲ್ಲ ಎಂದು ಎಡಪಕ್ಷಗಳು ಹೇಳಿವೆ.

ಇಂತಹ ಸನ್ನಿವೇಶದಲ್ಲಿ ಈ ಪ್ರತಿಭಟನೆಯಲ್ಲಿ ದೊಡ್ಡ ರೀತಿಯಲ್ಲಿ ಸೇರಿಕೊಂಡು ಮೋದಿ ಸರಕಾರ ಮತ್ತು ಅದರ ಧೋರಣೆಗಳನ್ನು ಜನತೆ ತಿರಸ್ಕರಿಸುತ್ತಿದ್ದಾರೆ ಎಂದು ಪ್ರದರ್ಶಿಸಬೇಕು ಎಂದು ಎಡಪಕ್ಷಗಳು ಜನತೆಗೆ ಕರೆ ನೀಡಿವೆ.

ಸೆಪ್ಟಂಬರ್ 4: ಸಂಸತ್ತಿನ ಎದುರು ಮಹಿಳೆಯರ ಪಣ

ಹಿಂಸಾಚಾರ, ಭಯ, ಹಸಿವು, ನಿರುದ್ಯೋಗದ ವಿರುದ್ಧ ಹೋರಾಟ

ದೇಶದ 23 ರಾಜ್ಯಗಳಿಂದ ಬಂದ ಸುಮಾರು ಹತ್ತುಸಾವಿರ ಮಹಿಳೆಯರು ಸೆಪ್ಟಂಬರ್ 4 ರಂದು ರಾಜಧಾನಿಯ ಬೀದಿಗಳಲ್ಲಿ ಸುರಿಯುತ್ತಿದ್ದ ಮಳೆಯನ್ನೂ ಲೆಕ್ಕಿಸದೆ ಮೆರವಣಿಗೆ ನಡೆಸಿ ಸಂಸತ್ತಿನ ಎದುರು ಮೋದಿ ಸರಕಾರಕ್ಕೆ ತೀವ್ರ ಪ್ರತಿರೋಧದ ಸವಾಲೊಡ್ಡಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ)ದ ಕರೆಯ ಮೇರೆಗೆ ಸೇರಿದ ದೇಶದ ಮಹಿಳೆಯರ ಈ ಬೃಹತ್ ಅಖಿಲ ಭಾರತ ಸಭೆ ನರೇಂದ್ರ ಮೋದಿಯವರ ನೇತೃತ್ವದ ಬಿಜೆಪಿ ಸರಕಾರದ ಅಡಿಯಲ್ಲಿ ಮಹಿಳೆಯರ ವಿರುದ್ಧ ಕೋಮುವಾದಿ ಮತ್ತು ಇತರ ವಿಧಗಳ ಹಿಂಸಾಚಾರದಲ್ಲಿ ಅಭೂತಪೂರ್ವ ಹೆಚ್ಚಳ, ಶಿಷ್ಟ ಉದ್ಯೋಗ ಮತ್ತು ಆಹಾರದ ಹಕ್ಕನ್ನು ನಿರಾಕರಿಸುತ್ತಿರುವುದರ ವಿರುದ್ಧ ದೇಶದ ಗಮನ ಸೆಳೆದಿದೆ. "ಮೋದಿ ಸರ್ಕಾರ್ ಹೋಶ್ ಮೇ ಆವೊ, ಹೋಶ್‌ಮೇ ತುಮ್‌ಕೋ ಆನಾ ಹೋಗಾ, ವರ್ನಾ ತುಮ್ಕೊ ಜಾನಾ ಹೋಗಾ"(ಮೋದಿ ಸರಕಾರ ಎಚ್ಚೆತ್ತಿಕೊಳ್ಳಿ, ನೀವು ಎಚ್ಚೆತ್ತುಕೊಳ್ಳಲೇ ಬೇಕು, ಇಲ್ಲವೇ ಹೊರಟು ಹೋಗಬೇಕು) ಎಂಬ ಘೋಷಣೆಗಳು ರಾಜಧಾನಿಯ ಕೇಂದ್ರ ಬೀದಿಗಳಲ್ಲಿ, ಸಂಸತ್ತಿನ ಎದುರು ಮೊಳಗಿದವು.

ಈ ಬೃಹತ್ ರ್‍ಯಾಲಿಯ ಕೊನೆಯಲ್ಲಿ ಅಂಗೀಕರಿಸಿದ ನಿರ್ಣಯ ಈ ಪರಿಸ್ಥಿಯನ್ನು ಎದುರಿಸಿ ನಿಲ್ಲುವ ಪಣ ತೊಟ್ಟಿತು. ದೇಶದ ಕೋಟ್ಯಂತರ ಮಹಿಳೆಯರು ಬಿಜೆಪಿ-ಆರೆಸ್ಸೆಸ್ ಪ್ರೋತ್ಸಾಹಿಸುತ್ತಿರುವ ಭಯದ ಸಂಸ್ಕೃತಿ ತಮ್ಮ ಬಾಯಿ ಮುಚ್ಚಿಸಲಾರದು, ಮೋದಿ ಸರಕಾರದ ವಿಶ್ವಾಸಘಾತವನ್ನು ಬಯಲಿಗೆಳೆಯುತ್ತೇವೆ, ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಸಮಾನತೆ ಮತ್ತು ಮೂಲಭೂತ ಹಕ್ಕುಗಳನ್ನು ಎತ್ತಿ ಹಿಡಿಯುತ್ತೇವೆ ಎಂದು ಸಾರಿದೆ.

ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಮುಖಂಡರು ಮಾತ್ರವಲ್ಲ, ಕಾರ್ಯಕರ್ತೆಯರೂ ಹೇಗೆ ಈ ಸಂಘ ಪರಿವಾರ ಬೆಂಬಲಿಸುತತ್ತಿರುವ ಈ ಸರಕಾರ ಪ್ರತಿಗಾಮಿತನ, ಕೋಮುವಾದ ಮತ್ತು ಕಾರ್ಪೊರೇಟ್ ನವ-ಉದಾರವಾದದ ಮಾರಣಾಂತಿಕ ವಿಷಮಿಶ್ರಣವಾಗಿದೆ ಎಂಬುದರ ಉದಾಹರಣೆಗಳನ್ನು ತಮ್ಮ ಅನುಭವಗಳಿಂದಲೇ ನೀಡಿದರು. ಇದನ್ನು ಹೇಗೆ ತಮ್ಮದೇ ರೀತಿಯಲ್ಲಿ ಎದುರಿಸುತ್ತಿದ್ದೇವೆ, ಪ್ರತಿರೋಧಿಸುತ್ತಿದ್ದೇವೆ ಎಂದೂ ಹೇಳಿದರು.

"ಅಗ್ಲೀ ಬಾರ್ ಮೋದೀಕೀ ಹಾರ್"

"ಉನ್ನಾವ್‌ನಲ್ಲಿ ಒಬ್ಬ ಹುಡುಗಿಯ ಮೇಲೆ ಅತ್ಯಾಚಾರ ನಡೆಸಿ, ಆಕೆಯ ತಂದೆಯನ್ನು ಕೊಂದಿರುವ ಆರೋಪ ಹೊತ್ತಿರುವ ಶಾಸಕನನ್ನು ಇನ್ನೂ ಬಿಜೆಪಿ ಪಕ್ಷದಿಂದ ತೆಗೆದು ಹಾಕಿಲ್ಲ. ಜಮ್ಮುವಿನ ಕಥುವಾದಲ್ಲಿ ಹಲವು ಬಿಜೆಪಿ ಮುಖಂಡರು ಅತ್ಯಾಚಾರದ ಆರೋಪ ಕ್ಕೊಳಗಾಗಿರುವವರ ಬೆಂಬಲಕ್ಕೆ ನಿಂತಿದ್ದಾರೆ. ಇಂತಹ ನಾಚಿಕೆಗೇಡಿನ ಪರಿಸ್ಥಿತಿ ಉಂಟಾಗಿದೆ" ಎಂದು ದೇಶದ ಹಿರಿಯ ಮಹಿಳಾ ಹೋರಾಟಗಾರರೂ, ಎಐಡಿಡಬ್ಲ್ಯುಎ ಪೋಷಕರೂ ಆಗಿರುವ ಬೃಂದಾ ಕಾರಟ್ ಈಗ ಮಹಿಳೆಯರ ಮುಂದಿರುವ ಸವಾಲುಗಳ ಬಗ್ಗೆ ಮಾತಾಡಿದರು. "ಮಹಿಲಾವೋಂಪರ್ ಜಾರಿ ಅತ್ಯಾಚಾರ್, ಅಗಲೀ ಬಾರ್ ಮೋದೀ ಕೀ ಹಾರ್"(ಮಹಿಳೆಯರ ಮೇಲೆ

ಪುಟ 10 ಕ್ಕೆ -ರ್‍ಯಾಲಿಯ ದೃಶ್ಯಗಳು ಪುಟ 9



ಸರ್ವಾಧಿಕಾರಶಾಹಿಗೆ ಜನತೆಯ ಬಹು ಆಯಾಮಗಳ ಪ್ರತಿರೋಧದ ವಾರ



ಪಾರ್ಲಿಮೆಂಟ್ ಚಲೋ

5 ಸೆಪ್ಟೆಂಬರ್ 2018, ನವದೆಹಲಿ

CITU - AIKS - AIAWU

ಈ ವಾರ ಕರ್ನಾಟಕದಲ್ಲಿ ಮೋದಿ ಸರಕಾರ ಪ್ರತಿನಿಧಿಸುವ ಸರ್ವಾಧಿಕಾರಶಾಹಿಗೆ ಜನತೆಯ ಪ್ರತಿರೋಧದ ಮೂರು ಕಾರ್ಯಕ್ರಮಗಳು ನಡೆದ ವಿಶೇಷ ವಾರವಾಗಿತ್ತು. ಮೊದಲನೆಯದು ದೆಹಲಿಯಲ್ಲಿ ನಡೆದರೂ ರಾಜ್ಯದಿಂದ ಸಾವಿರಾರು ಕಾರ್ಮಿಕರು, ರೈತರು, ಕೃಷಿಕೂಲಿಕಾರರು ಭಾಗವಹಿಸಿದ ಸಿಐಟಿಯು, ಅಖಿಲ ಭಾರತ ಕಿಸಾನ್ ಸಭಾ, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆಗಳು ಸೆಪ್ಟೆಂಬರ್ 5ರ 'ಕಿಸಾನ್ ಮಜದೂರ್ ಸಂಘರ್ಷ ರ್‍ಯಾಲಿ'. ಎರಡನೆಯದು 'ಗೌರಿ ಸ್ಮಾರಕ ಟ್ರಸ್ಟ್' ಮತ್ತು 'ಗೌರಿ ಲಂಕೇಶ್ ಬಳಗ' ಸಂಘಟಿಸಿದ್ದ, ಸೆಪ್ಟೆಂಬರ್ 5ರಂದು ಗೌರಿ ಹತ್ಯೆಯ ಮೊದಲ ವಾರ್ಷಿಕದಂದು ಗೌರಿ ಲಂಕೇಶ್ ನೆನಪಿನಲ್ಲಿ ದಿನಪೂರ್ತಿ ಹಲವು ಕಾರ್ಯಕ್ರಮಗಳ ಮೂಲಕ ವಿಶಿಷ್ಟವಾಗಿ ಆಚರಿಸಲಾದ 'ಗೌರಿ ದಿನ'. ಇದು ಡಾ ಕಲಬುರ್ಗಿ ಅವರ ಹತ್ಯೆಯ 3ನೇ ವಾರ್ಷಿಕವಾದ ಅಗಸ್ಟ್ 30ರಿಂದ ಸೆಪ್ಟೆಂಬರ್ 5ರಂದು ಗೌರಿ ಹತ್ಯೆಯ ಮೊದಲ ವಾರ್ಷಿಕದವರೆಗೆ ಆಚರಿಸಲಾದ 'ಅಭಿವ್ಯಕ್ತಿ ಹತ್ಯೆ ವಿರೋಧಿ ಸಪ್ತಾಹ'ದ ಸಮಾರೋಪವೂ ಆಗಿತ್ತು. ಮೂರನೇಯದು ಸೆಪ್ಟೆಂಬರ್ 2ರಂದು ಬೆಂಗಳೂರಿನಲ್ಲಿ ದಕ್ಷಿಣಾಯಣ ಮತ್ತು ಗ್ರಾಮ ಸೇವಾ ಸಂಘ ಸಂಘಟಿಸಿದ್ದ ಅಖಿಲ ಭಾರತ 'ಸಹಿಷ್ಣುತೆಗಾಗಿ ಸಾಹಿತ್ಯ ಸಮಾವೇಶ'. ಕೊನೆಯ ಎರಡೂ ಬೆಂಗಳೂರಿನಲ್ಲಿ ನಡೆದರೂ ಪಾಲುಗೊಳ್ಳುವಿಕೆಯಲ್ಲೂ ಪರಿಕಲ್ಪನೆಯಲ್ಲೂ ಅಖಿಲ ಭಾರತ ಮಟ್ಟದ್ದಾಗಿದ್ದವು. ಸರ್ವಾಧಿಕಾರಶಾಹಿಗೆ ಜನತೆಯ ಹಲವು ಆಯಾಮಗಳ ಪ್ರತಿರೋಧದ ಈ ಮೂರು ಕಾರ್ಯಕ್ರಮಗಳ ವರದಿ ಮತ್ತು ವಿಶ್ಲೇಷಣೆಗಳು ಈ ಸಂಚಿಕೆಯಲ್ಲಿವೆ.

ಸರ್ವಾಧಿಕಾರಶಾಹಿಗೆ ಜನತೆಯ ಯಾವುದೇ ಪ್ರತಿರೋಧದ ಮುಂಚೂಣಿಯಲ್ಲಿರಬೇಕಾದ ಕಾರ್ಮಿಕರು, ರೈತರು ಮತ್ತು ಕೃಷಿ ಕೂಲಿಕಾರರ ಅತಿ ದೊಡ್ಡ ಸಂಘಟನೆಗಳು ಜಂಟಿಯಾಗಿ ಸಂಘಟಿಸಿದ್ದ 'ಕಿಸಾನ್ ಮಜದೂರ್ ಸಂಘರ್ಷ ರ್‍ಯಾಲಿ' ಈ ದುಡಿಯುವ ಜನ ವಿಭಾಗಗಳ 13 ಪ್ರಮುಖ ಹಕ್ಕೊತ್ತಾಯಗಳ ಜಾರಿಗೆ ಒತ್ತಾಯಿಸಲು 'ಪಾರ್ಲಿಮೆಂಟ್ ಚಲೋ' ನಡೆಸಿದರು. 'ಒಳ್ಳೆಯ ದಿನ'ಗಳ ಹರಿಕಾರನಾದ ಮೋದಿಯ ಸರಕಾರಕ್ಕೆ ಅವನ್ನು ಈಡೇರಿಸಲು ಕೊನೆಯ ಎಚ್ಚರಿಕೆ ಕೊಟ್ಟರು. ಇಲ್ಲದಿದ್ದರೆ ಇನ್ನಷ್ಟು ಚಳುವಳಿಗಳನ್ನು ಹರಿಯಬಿಡುವ ಮತ್ತು ಮೋದಿ ಸರಕಾರವನ್ನು 2019ರಲ್ಲಿ ಉರುಳಿಸುವ ಕೊನೆಯ ಎಚ್ಚರಿಕೆಯನ್ನೂ ಕೊಟ್ಟರು. ದುಡಿಯುವ ಜನ ತಮ್ಮ ಹಕ್ಕುಗಳಿಗಾಗಿ ಎದ್ದು ನಿಂತಾಗ ಅವರ ಮೇಲೆ ಆಳುವ ವರ್ಗಗಳು ದಮನಚಕ್ರ ಹರಿಯಬಿಡುವುದು ಸಾಮಾನ್ಯ. ಅವರ ಐಕ್ಯತೆ ಮುರಿಯಲು ಅವರನ್ನು ಜಾತಿ, ಧರ್ಮ, ಭಾಷೆ, ಲಿಂಗಗಳ ಆಧಾರದ ಮೇಲೆ ಒಡೆಯುಲು ಪ್ರಯತ್ನಿಸುವುದು ಇನ್ನೂ ಸಾಮಾನ್ಯ. ಅದರಲ್ಲೂ ದುಡಿಯುವ ಜನತೆಯ ದಟ್ಟ ದರಿದ್ರ ವಿಭಾಗಗಳಾದ ದಲಿತರು, ಆದಿವಾಸಿಗಳು, ಮಹಿಳೆಯರು, ಮುಸ್ಲಿಮರು ಹೋರಾಟಕ್ಕೆ ಮುಂದಾದಾಗಲಂತೂ ಇದು ತಾರಕಕ್ಕೆ ಹೋಗುತ್ತದೆ. ದುಡಿಯುವ ಜನರ ಹೋರಾಟ ಸಂಘಟಿಸುವ ಪಕ್ಷಗಳ, ಸಂಘಟನೆಗಳ, ಗುಂಪುಗಳ, ವ್ಯಕ್ತಿಗಳ ಪ್ರಜಾಪ್ರಭುತ್ವ ಹಕ್ಕುಗಳ ದಮನ ಸದಾ ನಡೆಯುತ್ತಿರುತ್ತದೆ. 99.9% ಜನತೆಯ ಹಿತಾಸಕ್ತಿಗಳನ್ನು ಬಲಿಗೊಟ್ಟು ಅವರನ್ನು ದೋಚಿ ಮೋಸಗೊಳಿಸಿ ಆಳುವ ವರ್ಗಗಳ 0.1% ಜನರ ಹಿತಾಸಕ್ತಿಯನ್ನು ಎತ್ತಿ ಹಿಡಿಯುವ ಮೋದಿ ಸರಕಾರದ ಸರ್ವಾಧಿಕಾರಶಾಹಿಗೆ ನಿರ್ದಿಷ್ಟ ರೂಪವಿದೆ. ಒಂದು ಕಡೆ ಲಿಂಚಿಂಗ್ ಮೂಲಕ ದಟ್ಟ ದರಿದ್ರ ವಿಭಾಗಗಳನ್ನು ಅದು ಬೆದರಿಸುತ್ತದೆ. ದುಡಿಯುವ ಜನರ ಕೆಲವು ವಿಭಾಗಗಳನ್ನು ಸಂಘ ಪರಿವಾರದ ಅಗಣಿತ ಸಂಘಟನೆಗಳ ತೆಕ್ಕೆಗೆ ತಂದು ಲಿಂಚಿಂಗ್ ಗೆ ಬಳಸುತ್ತದೆ. ಅರೆಸ್ಟ್ ಮೂಲಕ ದುಡಿಯುವ ಜನರಿಗೆ ನಾಯಕತ್ವ ಕೊಡುವ ವ್ಯಕ್ತಿ, ಸಂಘಟನೆಗಳನ್ನು ಬೆದರಿಸಲು ಮಣಿಸಲು ಪ್ರಯತ್ನಿಸುತ್ತದೆ. ಆದ್ದರಿಂದ ದುಡಿಯುವ ಜನರನ್ನು ಅವರ ಹಕ್ಕೊತ್ತಾಯಗಳಿಗೆ ಸಂಘಟಿಸುತ್ತಾ ಮಾತ್ರ ಸರ್ವಾಧಿಕಾರಶಾಹಿಯ ಆಟಗಳನ್ನು ಮೋಸಗಳನ್ನು ಸ್ವರೂಪವನ್ನೂ ಬಯಲು ಮಾಡುವುದು ಸಾಧ್ಯ.

ಮೋದಿ ಸರ್ವಾಧಿಕಾರಶಾಹಿಯ ಆಡಳಿತದಲ್ಲಿ ಅದರ ಬಲಪಂಥೀಯ ಸಿದ್ಧಾಂತಕ್ಕೆ ತೀವ್ರ ಸವಾಲು ಹಾಕುವ ಸಿದ್ಧಾಂತ, ಗುಂಪು, ಸಂಘಟನೆ, ವ್ಯಕ್ತಿಗಳ ಮೇಲೆ ಬೆದರಿಕೆ, ನಿಂದೆ, ಹಿಂಸಾಚಾರ, ನೇರ ದಾಳಿ ಮತ್ತು ಕೊಲೆಯನ್ನೂ ಹರಿಯಬಿಡಲಾಗುತ್ತಿದೆ. ಇದರ ಭಾಗವಾಗಿ ನಡೆದ ನಾಲ್ವರು ಚಿಂತಕರ ಸರಣಿಯ ಹತ್ಯೆಗಳಲ್ಲಿ ಕೊನೆಯ ಇಬ್ಬರಾದ ಡಾ.ಕಲಬುರ್ಗಿ ಮತ್ತು ಗೌರಿ ಲಂಕೇಶ್ ಹತ್ಯೆಗೆ ಪ್ರತಿಕ್ರಿಯೆಯಾಗಿ ಬಂದ ಚಳುವಳಿಗಳ ಫಲವಾಗಿ ಹುಟ್ಟಿದ್ದೇ ದಕ್ಷಿಣಾಯಣ ಮತ್ತು ಗೌರಿ ಲಂಕೇಶ್ ಬಳಗ. ಇವೆರಡೂ ಹತ್ಯೆಗಳ ವಿರುದ್ಧ ಉಂಟಾದ ಆಕ್ರೋಶವನ್ನು ಕ್ರೋಢೀಕರಿಸಿ, ಹಂತಕರ ಬಂಧನ ಹಾಗೂ ಅದರ ಹಿಂದಿರುವ ಕಾಣದ ಕೈಗಳನ್ನು ಅನಾವರಣಗೊಳಿಸಲು ಒತ್ತಾಯ ಹೇರುವ ಸಂಘಟನೆಗಳಾಗಿವೆ. ಡಾ.ಕಲಬುರ್ಗಿ ಅವರ ಹತ್ಯೆಯನ್ನು ಸಾಹಿತಿ ಕಲಾವಿದರ ಬುದ್ಧಿಜೀವಿಗಳ ವೈಚಾರಿಕ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹತ್ಯೆಯ ಸತತ ಪ್ರಯತ್ನದ ಭಾಗವಾಗಿ ಕಂಡು ಅದರ ವಿರುದ್ಧ 'ಪ್ರಶಸ್ತಿ ವಾಪಸಿ' ಮತ್ತು ವ್ಯಾಪಕ ಅಖಿಲ ಭಾರತ ಪ್ರತಿರೋಧ ಸಂಘಟಿಸುತ್ತಾ ದಕ್ಷಿಣಾಯಣ ರೂಪುಗಂಡಿತು. ಸರ್ವಾಧಿಕಾರಶಾಹಿಯ ವಿರುದ್ಧ ಸಾಹಿತಿ ಕಲಾವಿದರ ಬುದ್ಧಿಜೀವಿಗಳ ಹಲವು ಅಖಿಲ ಭಾರತ ಸಮಾವೇಶಗಳನ್ನು ಸಂಘಟಿಸಿದೆ. ಫ್ಯಾಸಿಸಂ ಈಗಾಗಲೇ ಭಾರತದಲ್ಲಿ ಬಂದುಬಿಟ್ಟಿದೆ ಎಂಬ ನಿಲುವು ಹೊಂದಿರುವ ದಕ್ಷಿಣಾಯಣ ಕರ್ನಾಟಕ 2017ರ ಏಪ್ರಿಲಿನಲ್ಲಿ ಶಿವಮೊಗ್ಗದಲ್ಲಿ ಫ್ಯಾಸಿಸ್ಟ್–ವಿರೋಧಿ ಸಮಾವೇಶ ಸಂಘಟಿಸಿತು. ಹಲವು ಕಾರ್ಯಾಗಾರಗಳ ಮೂಲಕ ತಳಮಟ್ಟದಲ್ಲಿ ಅದರಲ್ಲೂ ಯುವಜನತೆಯಲ್ಲಿ ಜನಮಾನಸದಲ್ಲಿ ಬೇರೂರಿರುವ ಕೋಮುವಾದಿ–ಫ್ಯಾಸಿಸ್ಟ್ ಚಿಂತನೆಗಳ ವಿರುದ್ಧ ಹಾಗೂ ಸಂವೈಧಾನಿಕ ಆಶಯಗಳಾದ ಸಮಾನತೆ, ಪ್ರಜಾಪ್ರಭುತ್ವ, ಸೆಕ್ಯುಲರಿಸಂ, ಸಾಮಾಜಿಕ ನ್ಯಾಯಗಳನ್ನು ಎತ್ತಿ ಹಿಡಿಯುವ ವ್ಯಾಪಕ ಸಾಹಿತ್ಯಕ–ಸಾಂಸ್ಕೃತಿಕ ಸಂಪನ್ಮೂಲಗಳನ್ನು ಸೃಷ್ಟಿಸಿ ಪ್ರಚಾರ ಮಾಡುವ ಜಾಲ ಕಟ್ಟುವ ಭರವಸೆ ಹುಟ್ಟಿಸಿತ್ತು. ಇದಕ್ಕಾಗಿ ಎಲ್ಲಾ ಕೋಮುವಾದಿ–ಫ್ಯಾಸಿಸ್ಟ್ ವಿರೋಧಿ ವ್ಯಕ್ತಿ, ಗುಂಪುಗಳ ಚಳುವಳಿಯಾಗುವ ವೇದಿಕೆಯಾಗುವ ಪ್ರಯತ್ನ ನಡೆಸಿತ್ತು. ಆದರೆ ಪ್ರಾಯೋಗಿಕವಾಗಿ ಕರ್ನಾಟಕದಲ್ಲಿ ಅದು ಯಶಸ್ವಿಯಾಗಿಲ್ಲ ಮಾತ್ರವಲ್ಲ, ಕಳೆದ ಹಲವು ತಿಂಗಳುಗಳ ಕಾಲ ನಿಷ್ಕ್ರಿಯವಾಗಿತ್ತು.

ಇತ್ತೀಚಿನ ಸರಣಿ ಲಿಂಚಿಂಗ್ ಮತ್ತು ಅರೆಸ್ಟುಗಳಿಂದ ಅನಾವರಣಗೊಂಡ ಅಘೋಷಿತ ತುರ್ತು ಪರಿಸ್ಥಿತಿಯ ಭೀಕರ ಸ್ವರೂಪದ ಹಿನ್ನೆಲೆಯಲ್ಲಿ ದಕ್ಷಿಣಾಯಣ ಸೆಪ್ಟೆಂಬರ್ 2ರಂದು ಪ್ರಸನ್ನ ಅವರ 'ಗ್ರಾಮ ಸೇವಾ ಸಂಘ'ದ ಜತೆ ಅಖಿಲ ಭಾರತ 'ಸಹಿಷ್ಣುತೆಗಾಗಿ ಸಾಹಿತ್ಯ ಸಮಾವೇಶ' ಘೋಷಿಸಿದಾಗ ಕುತೂಹಲಭರಿತ ನಿರೀಕ್ಷೆ ಪುನಃ ಹುಟ್ಟಿತು. ಎಲ್ಲಾ ಸರ್ವಾಧಿಕಾರಶಾಹಿ ವಿರೋಧಿಗಳನ್ನು ಒಂದು ವೇದಿಕೆಯಲ್ಲಿ ಸೇರಿಸಿದ್ದು ಗಮನಾರ್ಹವಾದರೂ ಅಂತಿಮ ಫಲಿತ ನಿರೀಕ್ಷಿತ ಮಟ್ಟ ಮುಟ್ಟಲಿಲ್ಲ. ಸಮಾವೇಶದಲ್ಲಿ ಮಾತುಗಳೇನೋ ಆಕರ್ಷಕವಾಗಿದ್ದರೂ, ಅದು ಕೈಗೊಂಡ ನಿಲುವುಗಳು ಇಂದಿನ ಅಗತ್ಯಗಳಿಗೆ ನಿರ್ದಿಷ್ಟವಲ್ಲದ್ದೂ, ಪೇಲವವಾಗಿಯೂ ಇದ್ದು, ಕೆಲವು ಅಂಶಗಳು ಪ್ರಶ್ನಾರ್ಹವೂ ಆಗಿದ್ದವು. ಉದಾಹರಣೆಗೆ 'ಧರ್ಮ ಹಾಗೂ ರಾಜಕಾರಣಗಳನ್ನು ಹರಿದು ಬೇರ್ಪಡಿಸುವುದಿಲ್ಲ'. ಈ 'ನಿಲುವುಗಳು' ಸಮಾವೇಶದಲ್ಲಿ ಅಷ್ಟೇನೂ ಚರ್ಚಿತವೂ ಆಗಲಿಲ್ಲ, ಪ್ರಜಾತಾಂತ್ರಿಕವಾಗಿ 'ಅಂಗೀಕೃತ'ವೂ ಆಗಿಲ್ಲ. ಅದಕ್ಕಿಂತ ಹೆಚ್ಚಾಗಿ ಪ್ರಶಾಂತ್ ಭೂಷಣ್ ಬಿಟ್ಟರೆ ಯಾರೂ ಒಂದು ಸ್ಪಷ್ಟ ಕಾರ್ಯಯೋಜನೆಯನ್ನು ಮಂಡಿಸಲಿಲ್ಲ. ಪ್ರಶಾಂತ್ ಭೂಷಣ್ ಮಂಡಿಸಿದ ಕಾರ್ಯಕ್ರಮವನ್ನೇ ಚರ್ಚಿಸಿ ಅಂಗೀಕರಿಸುವ ತುರ್ತನ್ನೂ ಸಂಘಟಕರು ತೋರಿಸಲಿಲ್ಲ. ಅಕ್ಟೋಬರ್ 2ರಂದು ದಿನವಿಡೀ ಉಪವಾಸ ಬಿಟ್ಟರೆ ಯಾವುದೇ ಮುಂದಿನ ಹೆಜ್ಜೆ ಸಮಾವೇಶದಲ್ಲಿ ಮೂಡಿ ಬರಲಿಲ್ಲ. ಈ ಸಂಚಿಕೆಯಲ್ಲಿರುವ ಲೇಖನದಲ್ಲಿ "ಈಗಾಗಲೇ ಫ್ಯಾಸಿಸ್ಟ್ ಪ್ರಭುತ್ವದ ವಿರುದ್ಧ ಪ್ರಾಮಾಣಿಕವಾಗಿ ಚಳವಳಿ ಮಾಡುವ ಸಂಘಟನೆಗಳ ಮುಂದಾಳುಗಳನ್ನು ಕರೆಸಿ, ಆಯಾ ಸಂಘಟನೆಗಳ ಪ್ರತಿನಿಧಿಯಾಗಿ ಅವರವರ ಕೆಲಸ ಮತ್ತು ಭವಿಷ್ಯದ ರೂಪುರೇಷೆಗಳನ್ನು ಹಂಚಿಕೊಳ್ಳುವ ವೇದಿಕೆಯಾಗಬೇಕಿತ್ತು. ಬದಲಾಗಿ ಬಿಡಿಬಿಡಿ, ವ್ಯಕ್ತಿಗಳು ಬಿಡಿಬಿಡಿ ಆತಂಕಗಳನ್ನು ಹಂಚಿಕೊಳ್ಳಲು ಬಳಕೆಯಾದಂತೆ ಕಂಡಿತು." ಎಂಬುದು ಸಮಾವೇಶದ ಸಾಧ್ಯತೆಗಳನ್ನೂ ವೈಫಲ್ಯದ ಕಾರಣಗಳನ್ನು ಸರಿಯಾಗಿ ಗುರುತಿಸಿದೆ. ಬಹುಶಃ ಅದರ 'ಸಂಘಟನೆ ಇಲ್ಲದ' (ಅಥವಾ ಅಪಾರದರ್ಶಕ ಸಂಘಟನೆಯ) ವಿಶಿಷ್ಟ ಸ್ವರೂಪವೇ, ಈಗ ಸಕ್ರಿಯವಾಗಿರುವ ಸ್ವತಂತ್ರ ಸಾಹಿತ್ಯಕ–ಸಾಂಸ್ಕೃತಿಕ ಗುಂಪುಗಳು, ಸಂಘಟನೆಗಳನ್ನು ಪ್ರಾತಿನಿಧಿಕವಾಗಿ ಒಳಗೊಂಡು ಕೆಲಸ ಮಾಡಲು ಸಾಧ್ಯವಾಗದಿರುವುದಕ್ಕೆ ಕಾರಣವಿರಬಹುದು. ಇದು ಹಿಂದೆ ಶಿವಮೊಗ್ಗ ಸಮಾವೇಶದಲ್ಲೂ ಕಂಡು ಬಂದಿತ್ತು. ಜತೆಗೆ ಸಮಾವೇಶದ ಮೇಲೆ ಗಾಮ ಸೇವಾ ಸಂಘದ 'ಸ್ಟಾಂಪು' ಹೆಚ್ಚು ಗಾಢವಾಗಿದ್ದು, ಅದರ ಮಧ್ಯಮ ವರ್ಗಕ್ಕೆ ಅಪೀಲ್ ಮಾಡುವ ಮೃದು ಧೋರಣೆ ಮತ್ತು ಎನ್.ಜಿ.ಓ. ಶೈಲಿಯ ಸಂಘಟನಾ ಸ್ವರೂಪವೂ, ಸಮಾವೇಶದ ವೈಫಲ್ಯಕ್ಕೆ ಕಾರಣವಾಗಿದೆ.

ಇದಕ್ಕೆ ಹೋಲಿಸಿದರೆ ಬೆಳಗ್ಗಿನ ಗೌರಿ ಸಮಾಧಿಯ ಬಳಿ 'ಶ್ರದ್ಧಾಂಜಲಿ ಸಭೆ', '


'ಮೋದಿ ಮೋದಿ ಯಾರದು ಮುಂದಿನ ಸರದಿ' ಘೋಷಣೆಯೊಂದಿಗೆ ಗಾಂಧಿ ಪ್ರತಿಮೆಯಿಂದ 'ರಾಜಭವನ ಚಲೋ', ಮತ್ತು ಜ್ಞಾನಜ್ಯೋತಿ ಸಭಾಂಗಣದಲ್ಲಿ 'ಅಭಿವ್ಯಕ್ತಿ ಸ್ವಾತಂತ್ರ್ಯ ಸಮಾವೇಶ', 'ಗೌರಿ ದಿನ'ದ ಕಾರ್ಯಕ್ರಮ ಹೆಚ್ಚು ಅರ್ಥಪೂರ್ಣವಾಗಿಯೂ ಸೃಜನಶೀಲವಾಗಿಯೂ ನಡೆಯಿತು. 'ಅಭಿವ್ಯಕ್ತಿ ಸ್ವಾತಂತ್ರ್ಯ ಸಮಾವೇಶ'ದಲ್ಲಿ ಮಾಡಲಾದ ಪ್ರತಿಜ್ಞೆ ಅರ್ಥಪೂರ್ಣವಾಗಿತ್ತು. 'ಗೌರಿ ದಿನ'ದ ಕಾರ್ಯಕ್ರಮದಲ್ಲಿ ಅಖಿಲ ಭಾರತ ಮತ್ತು ರಾಜ್ಯದ ಗಣ್ಯರ ವ್ಯಾಪಕ ಪಾಲುಗೊಳ್ಳುವಿಕೆ ಇತ್ತು. ಮೋದಿ ಸರ್ವಾಧಿಕಾರಶಾಹಿ ವಿರೋಧಿಗಳ ದೊಡ್ಡ ವಿಭಾಗವನ್ನು ಅಣಿ ನೆರೆಸುವುದರಲ್ಲಿ ಅದು ಸಫಲವಾಗಿತ್ತು. ಅದರಲ್ಲೂ ಲೇಖಕರು, ಕಲಾವಿದರು, ಬುದ್ಧಿಜೀವಿಗಳು, ಪ್ರಗತಿಪರ ವ್ಯಕ್ತಿಗಳು, ಸಾಮಾಜಿಕ ಕಾರ್ಯಕರ್ತರನ್ನು ಒಳಗೊಳ್ಳುವಲ್ಲಿ ಯಶಸ್ವಿಯಾಗಿತ್ತು. 'ಗೌರಿ ದಿನ' ಸಂಘಟಿಸಿದ ಗೌರಿ ಸ್ಮಾರಕ ಟ್ರಸ್ಟ್ ಮತ್ತು ಗೌರಿ ಲಂಕೇಶ್ ಬಳಗ ಸಹ ದಕ್ಷಿಣಾಯಣದಂತೆ ಅಭಿವ್ಯಕ್ತಿ ಸ್ವಾತಂತ್ರ್ಯದ ಹತ್ಯೆಯ ಮತ್ತು ಕೋಮುವಾದಿ–ಫ್ಯಾಸಿಸಂ ಗಳ ವಿರುದ್ಧ ಸಾಂಸ್ಕೃತಿಕ–ಸಾಹಿತ್ಯಕ ವೇದಿಕೆಯಾಗ ಹೊರಟದ್ದು. ಅದು ಸಹ ಇದುವರೆಗೆ ಸಮಾವೇಶಗಳು, ಪತ್ರಿಕೆ (ಮೊದಲು 'ನಾನೂ ಗೌರಿ' ಮತ್ತು ಈಗ 'ನ್ಯಾಯ ಪಥ') ಪ್ರಕಟಣೆ ಹಾಗೂ ಅದಕ್ಕೆ ಸಂಪನ್ಮೂಲ ಕ್ರೋಢೀಕರಣ ಬಿಟ್ಟರೆ ಹೆಚ್ಚಿನ ಪ್ರಾಯೋಗಿಕ ಚಟುವಟಿಕೆಗಳನ್ನು ಎತ್ತಿಕೊಂಡಿಲ್ಲ.

ನಮ್ಮ ಸಮಾಜದಲ್ಲಿ ಕೋಮುವಾದಿ–ಫ್ಯಾಸಿಸ್ಟ್ ಮನೋವೃತ್ತಿ ಮತ್ತು ಮೌಢ್ಯ ವಿಷದಂತೆ ಅದರಲ್ಲೂ ಯುವಜನರಲ್ಲಿ ವ್ಯಾಪಕವಾಗಿ ಹರಡಿದೆ, ಇನ್ನೂ ಹರಡುತ್ತಿದೆ. ಅದನ್ನು ಹಿಮ್ಮೆಟ್ಟಿಸಿ ಪ್ರಜಾಪ್ರಭುತ್ವ, ಸಮಾನತೆ, ಸೌಹಾರ್ದತೆ, ಸೆಕ್ಯುಲರಿಸಂ, ಸಾಮಾಜಿಕ ನ್ಯಾಯದ ವೈಚಾರಿಕ ಮನೋವೃತ್ತಿ ಬಿತ್ತುವುದಕ್ಕೆ ಅಗಾಧ ಬೌದ್ಧಿಕ ಸೃಜನಶೀಲ ಪರಿಣತ ಮಾನವ ಮತ್ತು ಇತರ ಸಂಪನ್ಮೂಲಗಳೂ ಬೇಕು. ಇದು ಯಾವುದೇ ಒಂದು ಗುಂಪು, ಸಂಘಟನೆಯ ಅಳವಿಗೆ ಮೀರಿದ್ದು. ಆದ್ದರಿಂದ ಇಂತಹ ವ್ಯಕ್ತಿ, ಗುಂಪು, ಸಂಘಟನೆಗಳ ಜಾಲ ಅಥವಾ ವೇದಿಕೆಯ ತುರ್ತು ಅಗತ್ಯವಿದೆ. ಕರ್ನಾಟಕದ ಇಂದಿನ ಪರಿಸ್ಥಿತಿಯಲ್ಲಿ ದಕ್ಷಿಣಾಯಣ ಅಥವಾ ಗೌರಿ ಬಳಗ ಇದರಲ್ಲಿ ಪ್ರಮುಖ ಪಾತ್ರ ವಹಿಸಬಹುದಾದಂಥವು. ಆದರೆ ಅವು ತಮ್ಮ ಧೋರಣೆಗಳು ಮತ್ತು ಸಂಘಟನಾ ಸ್ವರೂಪದಿಂದ ಸದ್ಯಕ್ಕೆ ಸೀಮಿತಗೊಂಡಂತೆ ಕಾಣುತ್ತದೆ. ಮಾತ್ರವಲ್ಲ ಸಂಘಟಿತ ಎಡ ರಾಜಕೀಯ ಮತ್ತು ಸಾಮೂಹಿಕ ಸಂಘಟನೆಗಳನ್ನು ವ್ಯವಸ್ಥಿತವಾಗಿ ಮತ್ತು ಪ್ರಜ್ಞಾಪೂರ್ವಕವಾಗಿ ಹೊರಗಿಡುವ ಮತ್ತು ರಾಜಕೀಯ–ರಾಹಿತ್ಯ (ಅಪೊಲಿಟಿಕಲ್) ದ ಅವುಗಳ ಧೋರಣೆ ಸಹ ಇಂತಹ ಮಿತಿ ಹೇರುತ್ತಿವೆ. ಸರ್ವಾಧಿಕಾರಶಾಹಿಗೆ ಅಥವಾ ಕೋಮುವಾದಿ–ಫ್ಯಾಸಿಸಂಗೆ ಜನತೆಯ ಯಾವುದೇ ಪ್ರತಿರೋಧದ ಮುಂಚೂಣಿಯಲ್ಲಿರಬೇಕಾದ ಕಾರ್ಮಿಕರು, ರೈತರು ಮತ್ತು ಕೃಷಿ ಕೂಲಿಕಾರರ ಅತಿ ದೊಡ್ಡ ಸಂಘಟನೆಗಳನ್ನು ಜನಸಮೂಹಗಳನ್ನು ಒಳಗೊಳ್ಳದೆ ಅಂತಹ ಪ್ರತಿರೋಧ ಯಶಸ್ವಿಯಾಗುವುದು ಹೇಗೆ ಸಾಧ್ಯ? ಉದಾಹರಣೆಗೆ ಈ ಎರಡು ಸಮಾವೇಶಗಳು ದೆಹಲಿಯಲ್ಲಿ ನಡೆದ 'ಕಿಸಾನ್ ಮಜದೂರ್ ಸಂಘರ್ಷ ರ್‍ಯಾಲಿ'ಗೆ ಸೌಹಾರ್ದ ಬೆಂಬಲ ಘೋಷಿಸಬಹುದಿತ್ತು. ಮುಂದಿನ ದಿನಗಳಲ್ಲಿ ಈ ಎರಡು ಚಳುವಳಿಗಳ ತೊರೆಗಳು ಸರ್ವಾಧಿಕಾರಶಾಹಿಗೆ ವಿರುದ್ಧ ಪ್ರತಿರೋಧದಲ್ಲಿ ಕೂಡಿ ಹರಿಯುತ್ತವೆ ಎಂದು ಹಾರೈಸಬೇಕಾಗಿದೆ. ●



ಕೇರಳ ಸಂತ್ರಸ್ತರ ಮನೆ ಬೆಳಗಿಸಿದ ಪಾಲಿಕೆ ಸದಸ್ಯ ಎಂ. ದಯಾನಂದ ಶೆಟ್ಟಿ

ವಾಸುದೇವ ಉಚ್ಚಿಲ್



ಕೇರಳ ಪ್ರವಾಹ ಸಂತ್ರಸ್ತರಿಗೆ ಧನ ಹಾಗೂ ವಸ್ತು ರೂಪದಲ್ಲಿ ಬೇರೆ ರಾಜ್ಯಗಳಿಂದಲೂ ಸಾಕಷ್ಟು ನೆರವು ದೊರಕುತ್ತಿರುವುದು ನಮಗೆಲ್ಲ ವರದಿಯಾಗುತ್ತಿರುವರ ವಿಷಯವೇ. ಆದರೆ ತಮ್ಮ ವೃತ್ತಿ ಪರಿಣಿತಿಯನ್ನು ಶ್ರಮದಾನದ ರೂಪದಲ್ಲಿ ಹೊರರಾಜ್ಯದಿಂದ ಹೋಗಿ ಒದಗಿಸುವವರು ವಿರಳವೇ ಆಗಿದ್ದಾರೆ. ಅಂಥ ವಿರಳರಲ್ಲಿ ಒಬ್ಬರು ಸಿಪಿಐ(ಎಂ)ನ ಮಂಗಳೂರಿನ ನಗರಪಾಲಿಕೆ ಸದಸ್ಯ ಹಾಗೂ ಡಿವೈಎಫ್ಐ ಮುಖಂಡ ಎಂ.ದಯಾನಂದ ಶೆಟ್ಟಿ ಅವರು.

ಕೇರಳ ಸಂತ್ರಸ್ತರಿಗಾಗಿ ದ.ಕ. ಜಿಲ್ಲಾ ಸಮಿತಿ ಮಂಗಳೂರಿನಲ್ಲಿ ಬೀದಿ ಸಂಗ್ರಹ ಮಾಡುತ್ತಿದ್ದಾಗ, ಆ ತಂಡದ ಜೊತೆಗೆ ದಯಾನಂದ ಶೆಟ್ಟಿ ಇದ್ದರು. ಇಲೆಕ್ಟ್ರೀಶಿಯನ್ ಹಾಗೂ ವಿದ್ಯುತ್ ಕಾಮಗಾರಿ ಗುತ್ತಿಗೆದಾರನಾದ ತನ್ನ ವೃತ್ತಿಪರಿಣಿತಿಯನ್ನು ಕೆಲ ದಿನ ಕಾಲ ಪ್ರವಾಹ ಸಂತ್ರಸ್ತರಿಗೆ ಸೇವೆಯಾಗಿ ಒದಗಿಸಬೇಕೆಂದು ಅವರ ಮನಸ್ಸಿಗೆ ಬಂದಿತ್ತು. ಅವರು ಸುದ್ದಿ ಮಾಡದೆ ಮಂಜೇಶ್ವರದ ಮಾಜಿ ಶಾಸಕ ಸಿ.ಎಚ್.ಕುಞಂಬು ಅವರೊಂದಿಗೆ ಚರ್ಚಿಸಿದ್ದರು. ಶ್ರಮಸೇವಾಕಾಂಕ್ಷಿಗಳಾದ ವೃತ್ತಿಪರಿಣತರ ತಂಡವೊಂದನ್ನು ಕಾಸರಗೋಡು ಜಿಲ್ಲಾಧಿಕಾರಿಗಳು ಕಳುಹಿಸುವ ಪ್ರಸ್ತಾಪ ಇದೆ ಎಂದು ಕುಞಂಬು ಅವರು ಹೇಳಿ, ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದರು. ಕಾಸರಗೋಡು ಜಿಲ್ಲಾಧಿಕಾರಿಗಳ ಕಚೇರಿಯಿಂದ ನೇರವಾಗಿ ದಯಾನಂದ ಶೆಟ್ಟಿಯವರಿಗೆ ಕರೆ ಬಂತು. ಅವರು ಸಹೋದ್ಯೋಗಿಗಳು 6 ಮಂದಿಯನ್ನು ಸೇರಿಸಿಕೊಂಡು ಕಾಸರಗೋಡಿಗೆ ಹೋದರು. ಕಾಸರಗೋಡು ಜಿಲ್ಲಾಧಿಕಾರಿಗಳು ಅವರನ್ನು ಕಳುಹಿಸಿಕೊಟ್ಟದ್ದು ತ್ರಿಶೂರು ಜಿಲ್ಲೆಗೆ.

ತ್ರಿಶೂರು ಜಿಲ್ಲೆಯ ಅನ್ನಮಡಕ, ಮಾಲಾ, ಕೂಲೂರು, ಪೊಯ್ಯಿ ಗ್ರಾಮ ಪಂಚಾಯತುಗಳು ಹಾಗೂ ಇರಿಂಜಲಕ್ಕೋಡ ನಗರಸಭೆ ವ್ಯಾಪ್ತಿಯಲ್ಲಿ ಪ್ರವಾಹದಿಂದ ವಿದ್ಯುತ್ ಸಂಪರ್ಕ ಕೆಟ್ಟು ಹೋಗಿರುವ ಮನೆಗಳಲ್ಲಿ ವಿದ್ಯುತ್ ಸಂಪರ್ಕ ದುರಸ್ತಿ ಕಾರ್ಯವನ್ನು ಮಾಡುವ ಜವಾಬ್ದಾರಿಯನ್ನು ಕಾಸರಗೋಡಿನ ಐಟಿಐಯಿಂದ ಕಳುಹಿಸಲಾಗಿದ್ದ ಶಿಕ್ಷಕರು ಮತ್ತು 100 ವಿದ್ಯಾರ್ಥಿಗಳ ತಂಡಕ್ಕೆ ನೀಡಲಾಗಿತ್ತು. ಈ ತಂಡದ ಎಲ್ಲಾ ವಿದ್ಯಾರ್ಥಿಗಳೂ ಇಲೆಕ್ಟ್ರೀಶಿಯನ್ ತರಬೇತಿ ಹೊಂದಿರುವವರಾಗಿದ್ದರು. ನಿಜವಾಗಿ ಕೆಲಸ ಮಾಡಿದ ಅನುಭವ ಇದ್ದುದು ಮಂಗಳೂರಿನಿಂದ ಹೋದ ಸಂಗಾತಿಗಳಿಗೂ ಶಿಕ್ಷಕರಿಗೂ ಮಾತ್ರ. ವಿದ್ಯಾರ್ಥಿಗಳನ್ನು ಪರಿಣತರ ಮಧ್ಯೆ ಹಂಚಿಹಾಕಿ ಮನೆ ವಿದ್ಯುತ್ ರಿಪೇರಿ ಕೆಲಸಗಳನ್ನು ಮಾಡಿಸಲಾಯಿತು. ದಯಾನಂದ ಶೆಟ್ಟಿಯವರೇ ಒಟ್ಟು ದುರಸ್ತಿ ಕೆಲಸಗಳಿಗೆ ಮಾರ್ಗದರ್ಶನ ನೀಡಿದರು. ಅವರು ಖುದ್ದಾಗಿ ನೂರಕ್ಕೂ ಹೆಚ್ಚು ಮನೆಗಳ ವಿದ್ಯುತ್ ದುರಸ್ತಿ ಮಾಡಿದ್ದಲ್ಲದೆ, 400ಕ್ಕೂ ಹೆಚ್ಚು ಮನೆಗಳ ವಿದ್ಯುತ್ ಸಂಪರ್ಕ ದುರಸ್ತಿಗೆ ಮಾರ್ಗದರ್ಶನ ನೀಡಿದ್ದಾರೆ.

ಕೇರಳದ ಪ್ರವಾಹ ಪೀಡಿತ ಪ್ರದೇಶದಲ್ಲಿ ಒಂದು ವಾರಕ್ಕೂ ಹೆಚ್ಚುಕಾಲ ಮನೆಗಳು ಮೇಲ್ಛಾವಣಿವರೆಗೂ ನೀರಿನಲ್ಲಿ ಮುಳುಗಿದ್ದವು. ಇದರಿಂದಾಗಿ ಮನೆಯೊಳಗೆ ಕೆಸರು ತುಂಬಿಕೊಂಡಿದ್ದಲ್ಲದೆ ವಿದ್ಯುತ್ ಸಂಪರ್ಕ ವ್ಯವಸ್ಥೆಗೂ ಹಾನಿಯಾಗಿತ್ತು. ದುರಸ್ತಿ ಕಾರ್ಯ ನಡೆಸದೆ ಮನೆಗಳಿಗೆ ವಿದ್ಯುತ್ ಪೂರೈಕೆ ಮಾಡಲಾಗದ ಸ್ಥಿತಿ ಇತ್ತು. ಹೀಗೆ ತ್ರಿಶೂರು ಜಿಲ್ಲೆಯಲ್ಲಿ ತೊಂದರೆಗೊಳಗಾಗಿರುವ ಮನೆಗಳಲ್ಲಿ ವಿದ್ಯುತ್ ಸಂಪರ್ಕ ದುರಸ್ತಿಗೆ ಕಾಸರಗೋಡು ಸರ್ಕಾರಿ ಐಟಿಐ ಕೇಂದ್ರದ ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಒಳಗೊಂಡ 100 ಜನರ ತಂಡ ಹೊರಟು ನಿಂತಿತ್ತು.

ಪ್ರಾಯೋಗಿಕವಾಗಿ ಕೆಲಸ ಮಾಡಿದ ಅನುಭವವಿಲ್ಲದ ವಿದ್ಯಾರ್ಥಿಗಳನ್ನು ಕರೆದೊಯ್ದು ಅವರಿಂದ ವಿದ್ಯುತ್ ಸಂಪರ್ಕ ವ್ಯವಸ್ಥೆ ದುರಸ್ತಿ ಮಾಡಿಸುವುದು ಸವಾಲಾಗಿತ್ತು. ಅನುಭವಿ ಕೆಲಸಗಾರರಾದ ತಂಡವೊಂದನ್ನು ಅವರೊಂದಿಗೆ ಕಳುಹಿಸಲು ಕಾಸರಗೋಡು ಜಿಲ್ಲಾಧಿಕಾರಿಗಳು ತೀರ್ಮಾನಿಸಿದ್ದರು. ಮಂಗಳೂರು ಪಾಲಿಕೆಯ ಸದಸ್ಯ ದಯಾನಂದ ಶೆಟ್ಟಿಯವರ ಸ್ವಯಂಸ್ಫೂರ್ತಿಯ ಪ್ರಸ್ತಾಪ, ಜಿಲ್ಲಾಧಿಕಾರಿಗಳಿಗೆ ಮೆಚ್ಚುಗೆಯಾಗಿ ಅವರನ್ನು ಆಹ್ವಾನಿಸಿದ್ದರು. ದಯಾನಂದ ಶೆಟ್ಟಿಯವರನ್ನೊಳಗೊಂಡ 7 ಜನರ ತಂಡ 7 ದಿನಗಳ ಕಾಲ ಅಲ್ಲಿ ಕೆಲಸ ಮಾಡಿ ವಾಪಾಸಾಗಿದ್ದಾರೆ. ಈ ತಂಡದ 7 ಮಂದಿಗೂ 7 ತಂಡಗಳನ್ನು ರಚಿಸಿಕೊಟ್ಟು ಅವರಿಂದ ಕೆಲಸ ಮಾಡಿಸುವ ನಾಯಕತ್ವವನ್ನು ನೀಡಲಾಗಿದ್ದುದು ಮಂಗಳೂರಿನ ತಂಡ ಸದಸ್ಯರಿಗೆ ಹೆಮ್ಮೆಯೆನಿಸಿದೆ.

ಕೇರಳ ರಾಜ್ಯದಲ್ಲಿ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಹಾಗೂ ಪುನರ್ವಸತಿ ಕೆಲಸಕ್ಕಾಗಿ ಮುಂದೆ ಬಂದಿರುವ ಸ್ವಯಂಸೇವಕರನ್ನು ಅಲ್ಲಿನ ಸರ್ಕಾರ ಮತ್ತು ಸ್ಥಳೀಯ ಆಡಳಿತ ಸಂಸ್ಥೆಗಳು ವ್ಯವಸ್ಥಿತವಾಗಿ ಬಳಸಿಕೊಳ್ಳುತ್ತಿವೆ ಎಂದು ದಯಾನಂದ ಶೆಟ್ಟಿ ಹೇಳಿದ್ದಾರೆ. ತಾನು 20 ವರ್ಷಗಳಿಂದ ವಿದ್ಯುತ್ ಕಾಮಗಾರಿ ಕೆಲಸಗಾರ ಹಾಗೂ ಗುತ್ತಿಗೆದಾರನಾಗಿ ಕೆಲಸ ಮಾಡಿದ್ದೇನಾದರೂ, ನನ್ನ ಅನುಭವವನ್ನು ಪ್ರವಾಹ ಸಂತ್ರಸ್ತರ ನೆರವಿಗಾಗಿ ಒದಗಿಸಿದ್ದು ತನಗೆ ಸಾರ್ಥಕತೆಯ ಭಾವ ನೀಡಿದೆ ಎಂದು ಹೇಳಲು ಅವರು ಮರೆಯಲಿಲ್ಲ. ಈ ವಿಚಾರ ತಿಳಿದು ಅನೇಕರು ದಯಾನಂದ ಶೆಟ್ಟಿಯವರಿಗೆ ತಮ್ಮ ಮೆಚ್ಚುಗೆ ಹಾಗೂ ಅಭಿನಂದನೆ ಸಲ್ಲಿಸಿದ್ದಾರೆ. ಸಪ್ಟೆಂಬರ್ 5 ರಂದು 'ಪ್ರಜಾವಾಣಿ' ಪತ್ರಿಕೆಯೂ 4 ಕಾಲಮ್ಮುಗಳಿಗೆ ವರದಿ ಮಾಡಿ, ದಯಾನಂದ ಶೆಟ್ಟಿಯವರು ಹಾಗೂ ಅವರ 6 ಮಂದಿ ತಂಡದ ಶ್ರಮವನ್ನು ಶ್ಲಾಘಿಸಿದೆ. ಭೇಷ್ ದಯಾನಂದ ಶೆಟ್ಟಿ ಭೇಷ್. ●

ಮೂಢನಂಬಿಕೆ ಪ್ರಶ್ನಿಸಿದ್ದಕ್ಕೆ ಬಂಧನ !

ಮುನೀರ್ ಕಾಟಿಪಳ್ಳ



ಮೊನ್ನೆ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಉಳ್ಳಾಲ, ಬಂಟ್ವಾಳದ ಮುಸ್ಲಿಂ ಬಾಹುಳ್ಯದ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆ ಸೋಲಾದ ಕುರಿತು ಸಚಿವ ಖಾದರ್ ಪ್ರತಿಕ್ರಿಯಿಸುತ್ತಾ, "ನಮ್ಮಲ್ಲಿ ಕೆಲವು ನ್ಯೂನ್ಯತೆಗಳಿವೆ, ಸೋಲಿಗೆ ಅವು ಕಾರಣ" ಅಂದಿದ್ದರು. ಮುಸ್ಲಿಮರಲ್ಲಿ ಬೆಳೆಯುತ್ತಿರುವ ಅತೃಪ್ತಿಗಳಿಗೆ ಕಾರಣ ಹುಡುಕಲು ದೂರ ಹೋಗಬೇಕಿಲ್ಲ. ಅಂತಹದ್ದೇ ಒಂದು ಕಾರಣ ಇಲ್ಲಿದೆ. ಮಾನ್ಯ ಯು ಟಿ ಖಾದರ್ ರವರು ಗಮನಿಸಬೇಕು.

ಕೇರಳದ ಮಹಾಮಳೆಗೆ "ಶಬರಿ ಮಳೆ ದೇವಳಕ್ಕೆ ಮಹಿಳೆಯ ಪ್ರವೇಶ ಅನುಮತಿ ಕಾರಣ" ಎಂಬ ಕೆಲವು ಬಿಜೆಪಿ ಬೆಂಬಲಿಗರ ಹೇಳಿಕೆಯನ್ನು ಪ್ರಶ್ನಿಸಿ ಹಾಕಿದ ಸಾಮಾನ್ಯ ಒಂದು ಪೋಸ್ಟ್ ಆಧರಿಸಿ ಅಶ್ರಫ್ ಎಂ ಸಲೆತೂರ್ ರವರ ಮೇಲೆ ಮಂಗಳೂರಿನ ಬಂದರ್ ಪೊಲೀಸರು ಸ್ವಯಂಪ್ರೇರಣೆಯಿಂದ (ಸುವೊ-ಮೊಟೊ) ಕಠಿಣ ಸೆಕ್ಷನ್ ಗಳ ಅಡಿ ಕೇಸು ದಾಖಲಿಸಿದ್ದು, ಸಿಸಿಬಿಯಂತಹ ವಿಶೇಷ ತನಿಖಾ ತಂಡದ ಮೂಲಕ ಕುಖ್ಯಾತ ಕ್ರಿಮಿನಲ್ ರೀತಿ ಬಂಧಿಸಿ ಎರಡು ದಿನ ಬರಿ ಮೈಯ್ಯಲ್ಲಿ ಪೊಲೀಸ್ ಲಾಕಪ್ ನಲ್ಲಿ ಕೂರಿಸಿದ್ದು, ಒಂದುವಾರ ಜೈಲುವಾಸ ಅನುಭವಿಸುವಂತೆ ಮಾಡಿದ್ದು ಎಲ್ಲರಿಗೂ ತಿಳಿದಿದೆ.

ಈಗ ಮತ್ತೆ ಬಂದರು ಪೊಲೀಸರು ಅಶ್ರಫ್ ಸಾಲೆತ್ತೂರು ಅವರಿಗೆ, "ನೀವು ಮತ್ತೆ ಫೇಸ್ ಬುಕ್ ನಲ್ಲಿ ಬರೆಯುತ್ತಿದ್ದೀರಿ, ಇದು ಜಾಮೀನು ಶರತ್ತಿನ ಉಲ್ಲಂಘನೆ. ಇದಕ್ಕಾಗಿ ನಿಮ್ಮ ಜಾಮೀನು ರದ್ದುಗೊಳಿಸುವಂತೆ ನ್ಯಾಯಾಲಯಕ್ಕೆ ವರದಿ ಸಲ್ಲಿಸುತ್ತೇವೆ. ನೋಟೀಸು ಸಿಕ್ಕಿದ ತಕ್ಷಣ ಠಾಣೆಗೆ ಹಾಜರಾಗಿ ವಿಚಾರಣೆ ಎದುರಿಸಿ" ಎಂದು ನೋಟೀಸು ಜಾರಿ ಮಾಡಿದ್ದಾರೆ. ನೋಟೀಸು ಪ್ರಕಾರ ಅಶ್ರಫ್ ರನ್ನು ಠಾಣೆಗೆ ಕರೆದೊಯ್ದ ಸಾಮಾಜಿಕ ಕಾರ್ಯಕರ್ತರ ಜೊತೆಗೆ ಈ ಕುರಿತು ಬಂದರು ಇನ್ಸ್ ಪೆಕ್ಟರ್ ಸುರೇಶ್ ಕುಮಾರ್, ಸಬ್ ಇನ್ಸ್ ಪೆಕ್ಟರ್ ಪ್ರದೀಪ್ ರವರು ಹೇಳಿದ್ದು ಹೀಗೆ "ಅಶ್ರಫ್ ಬರೆದದ್ದು ನಮ್ಮ ಗಮನಕ್ಕೆ ಬಂತು ಕೇಸ್ ಬುಕ್ ಮಾಡಿದ್ದೇವೆ" ಅವರ ಬರಹದಲ್ಲಿ ಧರ್ಮ ನಿಂದನೆಯಾಗುವಂತಹದ್ದು ಏನಿದೆ? ಎಂಬ ಪ್ರಶ್ನೆಗೆ "ಕೆಳಗಡೆ ಕಮೆಂಟ್ ಹಾಕಿದವರು ಧರ್ಮನಿಂದನೆ ಮಾಡಿದ್ದಾರೆ, ಅದಕ್ಕೆ ಪೋಸ್ಟ್ ಹಾಕಿದ ಅಶ್ರಫ್ ಹೊಣೆ" ಎಂದು ಹೊಸತಾದ ಕಾನೂನಿನ ಪಾಠ ಮಾಡಿದ್ದಾರೆ. ಕೆಳಗಡೆ ಧರ್ಮನಿಂದನೆಯ ಕಮೆಂಟ್ ಹಾಕಿದವರ ಮೇಲೂ ಕೇಸ್ ಬುಕ್ ಮಾಡಬಹುದಿತ್ತಲ್ಲ? ಎಂಬ ಪ್ರಶ್ನೆಗೆ ಹಾರಿಕೆಯ ಉತ್ತರ ನೀಡಿದ್ದಾರೆ. ಕೋಮುಪ್ರಚೋದನೆಯ ಉದ್ದೇಶ ಹೊಂದಿರುವ ಕೆಲವು ಎಕೌಂಟುಗಳ ಕುರಿತು ಅಧಿಕಾರಿಗಳ ಗಮನ ಸೆಳೆದಾಗ 'ಅಶ್ರಫ್ ಬರೆದದ್ದು ನಮ್ಮ ಗಮನಕ್ಕೆ ಬಂದಿದೆ, ಬೇರೆಯವರದ್ದು ಬಂದಿಲ್ಲ. ನೀವು ನ್ಯಾಯಾಲಯದಲ್ಲಿ ನೋಡಿಕೊಳ್ಳಿ' ಎಂಬ ಉತ್ತರ ನೀಡಿದ್ದಾರೆ. ಅಶ್ರಫ್ ತನಗಾದ ಅನ್ಯಾಯದ ವಿರುದ್ಧ, ಪೊಲೀಸರ ವಿರುದ್ಧ ಬರೆದಾಗ ಕೆಲವರು ಪೊಲೀಸರನ್ನು ತರಾಟೆಗೆತ್ತಿಕೊಂಡು ಕಮೆಂಟ್ ಹಾಕಿದ್ದಾರೆ. ಅದಕ್ಕೂ ಅಶ್ರಫ್ ಹೊಣೆ ಎಂದು ಅಶ್ರಫ್ ಬಾಯಿಯನ್ನು ಶಾಶ್ವತವಾಗಿ ಮುಚ್ಚಿಸುವ ಯತ್ನ ಮಾಡಿದ್ದಾರೆ. ಮುಚ್ಚಳಿಕೆ ಬರೆದುಕೊಡುವಂತೆ ಹಠ ಹಿಡಿದಿದ್ದಾರೆ.

ಅಶ್ರಫ್ ಎಂ.ಎ. ಪೊಲಿಟಿಕ್ ಓದಿರುವ ಮುಸ್ಲಿಂ ಸಮುದಾಯದ ಹೊಸ ತಲೆಮಾರಿನ ಯುವಕ. ಬಡತನದ ಮಧ್ಯೆಯೂ ಸಾಮಾಜಿಕ ಕಳಕಳಿಯಿಂದ ಸ್ಪಂದಿಸುತ್ತಾ, ಓದಿಗೆ ತಕ್ಕ ಉದ್ಯೋಗ ದೊರಕದಿದ್ದರು ಶ್ರಮದ ದುಡಿಮೆಯಲ್ಲಿ ಬದುಕು ಕಾಣಲು ಯತ್ನಿಸುತ್ತಿದ್ದಾರೆ. ಮೊದಲೇ ಅಭದ್ರತೆಯಲ್ಲಿ ನಲುಗುತ್ತಿರುವ ಅಲ್ಪಸಂಖ್ಯಾತ ಸಮುದಾಯದ ವಿದ್ಯಾವಂತ ಯುವಕನ ಮೇಲೆ ಪೊಲೀಸರೇ ಈ ರೀತಿ ದೌರ್ಜನ್ಯ ಎಸಗಿದಾಗ, ಪ್ರಶ್ನೆಗೆ ಅವಕಾಶವಿಲ್ಲದೆ ಬಟ್ಟೆ ಬಿಚ್ಚಿ ಜೈಲಿಗೆ ತಳ್ಳಿದಾಗ, ಬಲವಂತವಾಗಿ ಬಾಯಿಮುಚ್ಚಿಸಿದಾಗ ಅಶ್ರಫ್, ಆತನ ಸಮುದಾಯದ ಮೇಲಾಗುವ ಪರಿಣಾಮ ಹೇಗಿರುತ್ತದೆ? ಸಚಿವ ಖಾದರ್ ಇದನ್ನು ಅರ್ಥಮಾಡಿಕೊಳ್ಳಬೇಕು. ಈ ನ್ಯೂನ್ಯತೆಗಳು ಸಣ್ಣದಲ್ಲ. ಬಹಳ ಬೆಲೆ ತೆರಬೇಕಾಗುವಂತದ್ದು. ಸಹಜವಾಗಿಯೇ ಇಂತಹ ಘಟನೆಗಳಿಂದ ಉಂಟಾಗುವ ಹತಾಷೆ, ಅಭದ್ರತೆ ಪರ್ಯಾಯ ದಾರಿಯತ್ತ ಮುಸ್ಲಿಂ ಸಮುದಾಯ ಚಲಿಸುವಂತೆ ಮಾಡುತ್ತದೆ. ಅದನ್ನು ಪ್ರತಿಗಾಮಿ ಶಕ್ತಿಗಳು ಪರಿಣಾಮಕಾರಿಯಾಗಿ ತಮ್ಮ ಕಡೆತಿರುಗಿಸಿಕೊಂಡಾಗ ವ್ಯತಿರಿಕ್ತ ಫಲಿತಾಶ ಕಂಡುಬರುತ್ತದೆ. ಮುಂದಕ್ಕೆ ಸರಿಪಡಿಸಲಾಗಷ್ಟು ಹಾನಿಯುಂಟು ಮಾಡುತ್ತದೆ..

ನಾನಂತು ಅಶ್ರಫ್ ಜೊತೆ ನಿಲ್ಲಲು ನಿರ್ಧರಿಸಿದ್ದೇನೆ. ಸಚಿವ ಖಾದರ್ ಮಧ್ಯ ಪ್ರವೇಶಿಸಿ ನ್ಯಾಯಕೊಡಿಸಿದರೆ ಅದಕ್ಕಿಂತ ಸಮಾಧಾನದ ಸಂಗತಿ ಮತ್ತೊಂದಿಲ್ಲ. ಗೆಳೆಯರೆಲ್ಲರ ಬೆಂಬಲವೂ ಇರಲಿ. ●

ಸ್ಥಳೀಯ ಸಂಸ್ಥೆಗಳ ಚುನಾವಣೆ ಫಲಿತಾಂಶ

ಮೈತ್ರಿ ಸರಕಾರದ ವಿರುದ್ಧವೂ ಅಲ್ಲ, ಬಿಜೆಪಿ ಪರವೂ ಅಲ್ಲ

ಈ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಫಲಿತಾಂಶಗಳ ಆಧಾರದ ಮೇಲೆ ಮೈತ್ರಿಕೂಟದ ಸರಕಾರದ ಬಗ್ಗೆ ಜನರ ಅಭಿಪ್ರಾಯವಾಗಲಿ, ಮುಂಬರುವ ಲೋಕಸಭಾ ಚುನಾವಣೆಯ ಟ್ರೆಂಡನ್ನಾಗಲಿ ಹೇಳುವುದು ಸರಿಯಾಗದು. ಆದರೂ ಇವನ್ನು ಸ್ಯಾಂಪಲ್ ಎಂದುಕೊಂಡರೆ ಈ ಫಲಿತಾಂಶಗಳು ಮೈತ್ರಿಕೂಟದ ಸರಕಾರದ ಬಗ್ಗೆ ಜನ ಆಕ್ರೋಶಗೊಂಡಿದ್ದಾರೆ ಅಥವಾ ಅದನ್ನು ತಿರಸ್ಕರಿಸಿದ್ದಾರೆಂದು ಹೇಳಲಾಗುವುದಿಲ್ಲ. ಮೈತ್ರಿಕೂಟದ ಸರಕಾರದ ಕೆಲಸವನ್ನು ಮೆಚ್ಚಿಕೊಂಡಿದ್ದಾರೆಂದೂ ಎನ್ನುವಂತಿಲ್ಲ. ಅದೇ ರೀತಿ ಬಿಜೆಪಿಗೆ ಭಾರೀ ಬೆಂಬಲ ವ್ಯಕ್ತಪಡಿಸಿದ್ದಾರೆಂದೂ ಹೇಳುವಂತಿಲ್ಲ. ಲೋಕಸಭೆಯಲ್ಲಿ ಕಾಂಗ್ರೆಸ್–ಜೆಡಿ(ಎಸ್) ಮೈತ್ರಿಕೂಟ ಬಿಜೆಪಿಗೆ ತೀವ್ರ ಸವಾಲು ಒಡ್ಡಬಹುದು ಎಂಬುದೂ ಸಹ ಹೆಚ್ಚುಕಡಿಮೆ ಸ್ಪಷ್ಟ.

ರಾಜ್ಯದ 105 ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ 36.9 % ಸೀಟುಗಳನ್ನು ಗೆದ್ದು ಕಾಂಗ್ರೆಸ್ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದೆ. ಬಿಜೆಪಿ 34.9 % ಸೀಟುಗಳನ್ನು ಗೆದ್ದು ಅತಿ ಹತ್ತಿರದ ಎರಡನೇ ಸ್ಥಾನದಲ್ಲಿದೆ. ಜೆಡಿ(ಎಸ್) 14.1 % ಸೀಟುಗಳನ್ನು ಗೆದ್ದಿದೆ. ಮತಗಳಿಕೆಯಲ್ಲೂ ಅದೇ ರೀತಿಯ ಸ್ಥಾನ ಮತ್ತು ಅಂತರ ಕಂಡು ಬಂದಿದೆ. (ವಿವರಗಳು ಕೋಷ್ಟಕ 1ರಲ್ಲಿವೆ) ಇತರ ಪಕ್ಷಗಳಲ್ಲಿ ಬಿ.ಎಸ್.ಪಿ (ಜೆಡಿ–ಎಸ್ ಜತೆ ಮೈತ್ರಿಯೊಂದಿಗೆ) ಚಾಮರಾಜನಗರ(10), ಮೈಸೂರು(2) ಮತ್ತು ಕಲಬುರ್ಗಿ(10) ಜಿಲ್ಲೆಗಳಲ್ಲಿ ಒಟ್ಟು 13 ಸೀಟುಗಳನ್ನು ಗಳಿಸಿದೆ. ಎಸ್.ಡಿ.ಪಿ.ಐ. ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ನಗರಸಭೆ (6) ಮತ್ತು ಬಂಟ್ವಾಳ ಪುರಸಭೆ (4) ಗಳಲ್ಲಿ ಒಟ್ಟು 10 ಸೀಟುಗಳನ್ನು ಗೆದ್ದಿದೆ. ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿ–ಎಸ್ ನಡುವೆ ಚುನಾವಣಾ ಮೈತ್ರಿ ಇರಲಿಲ್ಲ ಎಂದು ಗಮನಿಸಬೇಕು.

ಕೋಷ್ಟಕ 1. ಸ್ಥಳೀಯ ಸಂಸ್ಥೆಗಳಲ್ಲಿ ಪಕ್ಷಗಳ ಸೀಟು/ಮತ ಗಳಿಕೆ

ಸ್ಥಳೀಯ ಸಂಸ್ಥೆ	ಒಟ್ಟು ಸೀಟುಗಳು	ಕಾಂಗ್ರೆಸ್	ಬಿಜೆಪಿ	ಜೆಡಿ(ಎಸ್)	ಇತರ ಪಕ್ಷಗಳು	ಪಕ್ಷೇತರರು
ಕಾರ್ಪೊರೇಶನ್	135	36	54	30	1	14
ನಗರಸಭೆ *	927	294	370	106	33	123
ಪುರಸಭೆ *	1247	514	375	210	12	135
ಪಟ್ಟಣ ಪಂಚಾಯತ್	355	138	130	29	1	57
ಒಟ್ಟು	**2664**	**982**	**929**	**375**	**47**	**329**
ಮತಗಳಿಕೆ ಶೇಕಡಾ		33.52	31.07	17.41#	18	
ಸೀಟುಗಳಿಕೆ ಶೇಕಡಾ		36.9	34.9	14.1	0.2	12.3

(ಮೂಲ : http://trends2018.kar.nic.in)


** ತಲಾ ಒಂದು ಸೀಟಿನಲ್ಲಿ ಫಲಿತಾಂಶ ಘೋಷಿಸಿಲ್ಲ # ಜೆಡಿ(ಎಸ್)+ಬಿಎಸ್.ಪಿ.*

ಸ್ಥಳೀಯ ಸಂಸ್ಥೆಗಳಲ್ಲಿ ಬಹುಮತ ಪಡೆದು ಆಡಳಿತ ನಡೆಸುವ ಸಾಧ್ಯತೆಯಲ್ಲೂ ಕಾಂಗ್ರೆಸ್, ಬಿಜೆಪಿ, ಜೆಡಿ–ಎಸ್ ಅನುಕ್ರಮವಾಗಿ ಮೊದಲ 3 ಸ್ಥಾನದಲ್ಲಿವೆ. ಮೂರೂ ಕಾರ್ಪೊರೇಶನ್ ಗಳಲ್ಲಿ ಬಿಜೆಪಿ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿರುವುದು ಗಮನಾರ್ಹವೇ. ಮೂರನೇ ಒಂದು ಭಾಗದಷ್ಟು (3 ಕಾರ್ಪೊರೇಶನ್ ಗಳಲ್ಲಿ 2ರಲ್ಲಿ) ಅತಂತ್ರ ಸ್ಥಿತಿ ಇದೆ. ಆದರೆ ಅತಂತ್ರ ಸ್ಥಿತಿ ಇರುವ (ಕೆಲವು ಅಪವಾದಗಳನ್ನು ಬಿಟ್ಟರೆ) ಕಾಂಗ್ರೆಸ್–ಜೆಡಿ(ಎಸ್) ಮೈತ್ರಿಕೂಟ ಹೆಚ್ಚಿನ ಕಡೆ ಅಧಿಕಾರ ಹಿಡಿಯಲಿದೆ. ಅಂದರೆ ಶೇ. 60ಕ್ಕೂ ಹೆಚ್ಚು ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್, ಜೆಡಿ(ಎಸ್) ಅಥವಾ ಮೈತ್ರಿಕೂಟ ಅಧಿಕಾರ ಹಿಡಿಯಲಿವೆ. ಕೆಲವು ಕಡೆ ಕಾಂಗ್ರೆಸ್ ಇತರ ಪಕ್ಷಗಳ (ಉದಾ: ಉಳ್ಳಾಲದಲ್ಲಿ ಎಸ್. ಡಿ.ಪಿ.ಐ. ಜತೆಗೆ) ಹೊಂದಾಣಿಕೆ ಮಾಡಿಕೊಳ್ಳಬೇಕಾಗಬಹುದು.

ಕೋಷ್ಟಕ 2. ಸ್ಥಳೀಯ ಸಂಸ್ಥೆಗಳಲ್ಲಿ ಪಕ್ಷಗಳ ಬಹುಮತ

ಸ್ಥಳೀಯ ಸಂಸ್ಥೆ	ಒಟ್ಟು	ಕಾಂಗ್ರೆಸ್	ಬಿಜೆಪಿ	ಜೆಡಿ(ಎಸ್)	ಅತಂತ್ರ
ಕಾರ್ಪೊರೇಶನ್	3	0	1	0	2
ನಗರಸಭೆ *	29	5	9	2	13
ಪುರಸಭೆ *	53	19	10	8	16
ಪಟ್ಟಣ ಪಂಚಾಯತ್	20	7	7	2	4
ಒಟ್ಟು	**105**	**31**	**26**	**12**	**35**
ಬಹುಮತ ಶೇಕಡಾ		29.5	24.8	11.4	33.3

2013 ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಬಿಜೆಪಿ ಒಡೆದು ಕೆಜೆಪಿ ಸಹ ಸ್ಪರ್ಧೆಯಲ್ಲಿತ್ತು ಮತ್ತು ಕೆಲವು ಸಂಸ್ಥೆಗಳು 2018ರಲ್ಲಿ ಅಪ್ ಗ್ರೇಡ್ (ಪುರಸಭೆಯಿಂದ ನಗರಸಭೆ ಇತ್ಯಾದಿ) ಆಗಿರುವುದರಿಂದ 2013 ಮತ್ತು 2018ರ ಚುನಾವಣೆಗಳನ್ನು ಹೋಲಿಸುವುದು ಕಷ್ಟ. ಆದರೂ 100 ಸ್ಥಳೀಯ ಸಂಸ್ಥೆಗಳನ್ನು ತೆಗೆದುಕೊಂಡು ಪತ್ರಿಕೆಯೊಂದು ಮಾಡಿದ ಹೋಲಿಕೆಯ ಪ್ರಕಾರ ಕಾಂಗ್ರೆಸ್ ಶೇ.2 ರಷ್ಟು ಸೀಟುಗಳನ್ನು ಕಳೆದುಕೊಂಡಿದೆ. 2013ಕ್ಕೆ ಹೋಲಿಸಿದರೆ ಜೆಡಿ–ಎಸ್ ಸಹ ಶೇ. 2.3 ರಷ್ಟು ಸೀಟುಗಳನ್ನು ಕಳೆದುಕೊಂಡಿದೆ. ಬಿಜೆಪಿ ಶೇ. 8.7 ರಷ್ಟು ಹೆಚ್ಚು ಸೀಟುಗಳನ್ನು ಪಡೆದುಕೊಂಡಿದೆ.



ಕೃಪೆ: ಸತೀಶ್ ಆಚಾರ್ಯ

ಚುನಾವಣೆ ನಡೆದ 22 ಜಿಲ್ಲೆಗಳಲ್ಲಿ ಬಿಜೆಪಿ 6 (ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ದಾವಣಗೆರೆ, ಹಾವೇರಿ, ಬಾಗಲಕೋಟೆ,) ಜಿಲ್ಲೆಗಳಲ್ಲಿ ಮೇಲುಗೈ ಅಥವಾ ನಿಚ್ಚಳ ಬಹುಮತ (ಸೀಟುಗಳ ಸಂಖ್ಯೆಯಲ್ಲಿ) ಸಾಧಿಸಿದೆ. ಕಾಂಗ್ರೆಸ್ 4 (ರಾಯಚೂರು, ಕಲಬುರ್ಗಿ, ಬೀದರ, ಬಳ್ಳಾರಿ) ಜಿಲ್ಲೆಗಳಲ್ಲಿ ಮೇಲುಗೈ ಸಾಧಿಸಿದೆ. ಜೆಡಿ–ಎಸ್ 2 (ಹಾಸನ, ಮಂಡ್ಯ) ಜಿಲ್ಲೆಗಳಲ್ಲಿ ಮೇಲುಗೈ ಪಡೆದಿದೆ. 8 ಜಿಲ್ಲೆಗಳಲ್ಲಿ ಕಾಂಗ್ರೆಸ್–ಜೆಡಿ(ಎಸ್) ಮೈತ್ರಿಕೂಟಕ್ಕೆ ಮೇಲುಗೈ ಸಿಕ್ಕಿದೆ. ಬೆಳಗಾವಿಯಲ್ಲಿ ವಿಕ್ರಮ ಎನ್ನಬಹುದಾದಷ್ಟು 144 ಪಕ್ಷೇತರರು (ಅದೂ 5 ಸಂಸ್ಥೆಗಳಲ್ಲಿ ಎಲ್ಲಾ ಸೀಟುಗಳನ್ನು) ಪಡೆದು ಸ್ಥಿತಿ ಸ್ಪಷ್ಟವಿಲ್ಲ. ವಿಜಯಪುರದ ಸ್ಥಿತಿಯೂ ಸ್ಪಷ್ಟವಿಲ್ಲ.

ಈ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಫಲಿತಾಂಶಗಳ ಆಧಾರದ ಮೇಲೆ ಮೈತ್ರಿಕೂಟದ ಸರಕಾರದ ಬಗ್ಗೆ ಜನರ ಅಭಿಪ್ರಾಯವಾಗಲಿ, ಮುಂಬರುವ ಲೋಕಸಭಾ ಚುನಾವಣೆಯ ಟ್ರೆಂಡನ್ನಾಗಲಿ ಹೇಳುವುದು ಸರಿಯಾಗದು. ಯಾಕೆಂದರೆ ಈ ಚುನಾವಣೆಗಳಲ್ಲಿ ಮತ ಚಲಾಯಿಸಿದ ಮತದಾರರ ಪ್ರಮಾಣ ವಿಧಾನಸಭಾ (ಅಥವಾ ಲೋಕಸಭಾ) ಚುನಾವಣಾ ಮತದಾರರ ಕೇವಲ ಶೇ. 8.5 ರಷ್ಟು, ಅದೂ 22 ಜಿಲ್ಲೆಗಳಲ್ಲಿ ಮಾತ್ರ. ಆದರೂ ಇವನ್ನು ಸ್ಯಾಂಪಲ್ ಎಂದುಕೊಂಡರೆ ಈ ಫಲಿತಾಂಶಗಳು ಮೈತ್ರಿಕೂಟದ ಸರಕಾರದ ಬಗ್ಗೆ ಜನ ಆಕ್ರೋಶಗೊಂಡಿದ್ದಾರೆ ಅಥವಾ ಅದನ್ನು ತಿರಸ್ಕರಿಸಿದ್ದಾರೆಂದು ಹೇಳಲಾಗುವುದಿಲ್ಲ.ಮೈತ್ರಿಕೂಟದ ಸರಕಾರದ ಕೆಲಸವನ್ನು ಮೆಚ್ಚಿಕೊಂಡಿದ್ದಾರೆಂದೂ ಎನ್ನುವಂತಿಲ್ಲ. ಅದೇ ರೀತಿ ಬಿಜೆಪಿಗೆ ಭಾರೀ ಬೆಂಬಲ ವ್ಯಕ್ತಪಡಿಸಿದ್ದಾರೆಂದೂ ಹೇಳುವಂತಿಲ್ಲ. ಈ ಚುನಾವಣೆಗಳು ಮೈತ್ರಿಕೂಟದ ವಿರುದ್ಧ ಜನಾದೇಶವಾಗಲಿದೆ ಎಂದು ಮೊದಲು ಹೇಳುತ್ತಿದ್ದ ಬಿಜೆಪಿಯ ನಾಯಕರೂ ಅದರ ಬಗ್ಗೆ ಮಾತನಾಡುತ್ತಿಲ್ಲ. ಕಾಕತಾಳೀಯವೋ ಎಂಬಂತೆ ಚುನಾವಣೆ ನಡೆದ ಸಂಸ್ಥೆಗಳ ವಾರ್ಡುಗಳಲ್ಲಿ ಸುಮಾರು 52% ಬಿಜೆಪಿ ಶಾಸಕರು ಆಯ್ಕೆಯಾದ ಕ್ಷೇತ್ರಗಳಲ್ಲಿ ಇದ್ದವು. ಇದರಿಂದ ಬಿಜೆಪಿಗೆ ಇನ್ನಷ್ಟು ಹೆಚ್ಚು ಸೀಟು ಸಿಗಬೇಕಾಗಿತ್ತು. ಆದರೆ ಸಿಕ್ಕಿಲ್ಲ ಎಂದರೆ ಬಿಜೆಪಿಯ ಬಗ್ಗೆ ಜನ ಅಷ್ಟೇನೂ ಉತ್ಸುಕರಾಗಿಲ್ಲವೆಂದು ಕಾಣುತ್ತದೆ. ಲೋಕಸಭೆಯಲ್ಲಿ ಕಾಂಗ್ರೆಸ್–ಜೆಡಿ(ಎಸ್) ಮೈತ್ರಿಕೂಟ ಬಿಜೆಪಿಗೆ ತೀವ್ರ ಸವಾಲು ಒಡ್ಡಬಹುದು ಎಂಬುದೂ ಸಹ ಹೆಚ್ಚುಕಡಿಮೆ ಸ್ಪಷ್ಟ. ●

ಸಿಪಿಐ(ಎಂ) : ನಿರಾಶಾದಾಯಕ ಫಲಿತಾಂಶ


ಸಿಪಿಐ(ಎಂ) ಕುಂದಾಪುರ(7), ಗಜೇಂದ್ರಗಡ (5), ಉಳ್ಳಾಲ (5), ತುಮಕೂರು(3), ಚಿಂಚೋಳಿ, ದಾಂಡೇಲಿ ಮತ್ತು ರಾಯಚೂರು ಗಳಲ್ಲಿ ತಲಾ 1 ಸೀಟುಗಳಲ್ಲಿ ಸ್ಪರ್ಧೆ ಮಾಡಿದ್ದು ಯಾವುದೇ ಸೀಟು ಗೆದ್ದಿಲ್ಲ. ಕುಂದಾಪುರ, ಗಜೇಂದ್ರಗಡ ಮತ್ತು ದಾಂಡೇಲಿಗಳಲ್ಲಿ ಇದ್ದ ಒಟ್ಟು 4 ಸೀಟುಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗಿಲ್ಲ. ಆದರೆ ಕುಂದಾಪುರದ ಎಲ್ಲಾ 7 ವಾರ್ಡುಗಳಲ್ಲಿ, ಹಾಗೂ ಉಳ್ಳಾಲ ಮತ್ತು ಗಜೇಂದ್ರಗಡದ ತಲಾ 1 ವಾರ್ಡಿನಲ್ಲಿ ಎರಡನೇ ಸ್ಥಾನ ಪಡೆಯಲು ಸಾಧ್ಯವಾಗಿದೆ. ಕುಂದಾಪುರದಲ್ಲಿ ಸಿಪಿಐ(ಎಂ) ಅಭ್ಯರ್ಥಿಯಾಗಿ ಹಿಂದೆ ನಾಲ್ಕು ಬಾರಿ ಆಯ್ಕೆಯಾಗಿ ಕಳೆದ ಬಾರಿ ಪುರಸಭೆಯ ಅಧ್ಯಕ್ಷರಾಗಿದ್ದ ಗುಣರತ್ನ ಅವರು ಚುನಾವಣೆಯ ಸ್ವಲ್ಪ ಮೊದಲು ಬಿಜೆಪಿಗೆ ಪಕ್ಷಾಂತರ ಮಾಡಿ ಚುನಾವಣೆಗೆ ಸ್ಪರ್ಧಿಸಿದ್ದರು. ಅವರನ್ನು ಸಿಪಿಐ(ಎಂ) ಪಕ್ಷದಿಂದ ಉಚ್ಚಾಟನೆಗೊಳಿಸಲಾಗಿದ್ದು, ಮತದಾರರು ಸಹ ಅವರನ್ನು ತಿರಸ್ಕರಿಸಿದ್ದಾರೆ.

ನೆಚ್ಚಿನ ಮಹಮ್ಮದ್ ಗೆ 'ಪೆನ್' ಪ್ರಶಸ್ತಿ! ಅಭಿನಂದನೆಗಳು !!

ಕರ್ನಾಟಕದ ರಾಜಕಾರಣವನ್ನು ಕಳೆದ ಮೂರು ದಶಕಗಳಿಂದ ತಮ್ಮ ಎಕ್ಸ್–ರೇ ಕಣ್ಣುಗಳಿಂದ ನೋಡಿ ತಮ್ಮ ಕಾರ್ಟೂನುಗಳ ಮೂಲಕ ಗಂಭೀರವಾಗಿ ವಿಶ್ಲೇಷಿಸಿದವರಲ್ಲಿ ಪ್ರಮುಖರು ಪಿ ಮಹಮ್ಮದ್. ತಮ್ಮ ಮೊನಚಾದ ಸುಂದರವಾದ ಚಿತ್ರದ ಜತೆಗೆ ಕನ್ನಡ ಪದಗಳನ್ನೂ ಅಷ್ಟೇ ಮೊನಚಾಗಿ ಸುಂದರವಾಗಿ ಕಾರ್ಟೂನಿನಲ್ಲಿ ದುಡಿಸಿಕೊಂಡವರು ಇನ್ನೊಬ್ಬರಿಲ್ಲ. ಹಲವು ಪತ್ರಿಕೆಗಳಲ್ಲಿ ಕಾರ್ಟೂನು ಪ್ರಕಟಿಸುತ್ತಾ ಮುಂಗಾರು, ಪ್ರಜಾವಾಣಿ, ವಿಜಯ ಕರ್ನಾಟಕ ಪತ್ರಿಕೆಗಳಲ್ಲಿ ದೀರ್ಘ ಕಾಲ ಕಾರ್ಟೂನು ಕಾಲಮು ಪ್ರಕಟಿಸಿದವರು ಪಿ ಮಹಮ್ಮದ್. ಅವರ ಕಾರ್ಟೂನು ಇಲ್ಲದ ಪತ್ರಿಕೆ ಮತ್ತು ದಿನ ಊಹಿಸಿಕೊಳ್ಳುವುದು ಕಷ್ಟ. ಆದರೆ ತಮ್ಮ ಮೂರು ದಶಕಗಳ ನಂತರ ಒಂದು 'ಬ್ರೇಕ್' ತೆಗೆದುಕೊಂಡಿದ್ದಾರೆ.



ಈ ನಡುವೆ ಅಂತರಾಷ್ಟ್ರೀಯ ಲೇಖಕರ 'ಪೆನ್' (ಪಿ.ಇ.ಎನ್.) ಸಂಘಟನೆ ಗೌರಿ ಲಂಕೇಶ್ ಸ್ಮರಣೆಗೆ ಆರಂಭಿಸಿರುವ "ಗೌರಿ ಲಂಕೇಶ್" ಪುರಸ್ಕಾರಕ್ಕೆ ಅವರಿಗೆ ನೀಡಲಾಗುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಸಾಮಾಜಿಕ–ಆರ್ಥಿಕ ನ್ಯಾಯದ ಮುಂದುವರಿಕೆಯಲ್ಲಿ ಅನುಕರಣೀಯ ಬದ್ಧತೆ ತೋರಿರುವ ಮಹಮ್ಮದ್ ಅವರನ್ನು ಆಯ್ಕೆ ಮಾಡಲಾಗಿದೆ. ಭಾರತದಲ್ಲಿ ಪ್ರಜಾಪ್ರಭುತ್ವದ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಹೋಗುವಲ್ಲಿ ದೃಢ ಮನೋಭಾವ ಮತ್ತು ಧೈರ್ಯ ತೋರುವ ವ್ಯಕ್ತಿಗಳು ಅಥವಾ ಸಂಘಟನೆಗಳಿಗೆ ವಾರ್ಷಿಕವಾಗಿ ಈ ಪ್ರಶಸ್ತಿ ನೀಡಲಾಗುವುದು ಎಂದು 'ಪೆನ್' ಪ್ರಕಟಣೆ ತಿಳಿಸಿದೆ.



ಪಿ.ಮಹಮ್ಮದ್..ಅಭಿನಂದನೆಗಳು! ಬೇಗ ಬ್ರೇಕ್ ಮುಗಿಸಿ..ವಾಪಸು ಬನ್ನಿ!

ನಿಮ್ಮ ಅಗತ್ಯ ಹಿಂದೆಂದಿಗಿಂತಲೂ ಇಂದು ಹೆಚ್ಚಿದೆ. ●

ಭಯಮುಕ್ತ ಅಭಿವ್ಯಕ್ತಿಗೆ ಗಟ್ಟಿ ಪರ್ಯಾಯಗಳಿಲ್ಲದ 'ಸಹಿಷ್ಣುತೆಯೆಡೆಗೆ ಸಾಹಿತ್ಯ ಸಮ್ಮೇಳನ'

(ಕೃಪೆ: 'ದಿ ಸ್ಟೇಟ್ಸ್ ವೆಬ್ ಪತ್ರಿಕೆ)

ಅರುಣ್ ಜೋಳದಕೂಡ್ಲಿಗಿ

ದೇಶದಲ್ಲಿ ಅಘೋಷಿತ ತುರ್ತುಪರಿಸ್ಥಿತಿ ಏರ್ಪಟ್ಟ ಈ ಸಂದರ್ಭ ತುಂಬಾ ಸೂಕ್ಷ್ಮವಾದುದು. ಭಯಗ್ರಸ್ತ ಸ್ಥಿತಿಯನ್ನು ಎದುರಿಸಲು ಬೇಕಾದ ಪರ್ಯಾಯಗಳ ಬಗೆಗೆ ದೇಶಮಟ್ಟದ ಪ್ರಾಯೋಗಿಕ ಯೋಜನೆಗಳು ರೂಪುಗೊಳ್ಳಬೇಕಿದೆ. ಅಂತೆಯೇ ಫ್ಯಾಸಿಸ್ಟ್ ಪ್ರಭುತ್ವದ ವಿರುದ್ಧ ಗಟ್ಟಿಯಾಗಿ ಧ್ವನಿ ಎತ್ತುತ್ತಿರುವ ವಿಚಾರವಂತರ ಪಡೆಯನ್ನು ಒಂದೆಡೆ ಸೇರಿಸುವುದು ಮತ್ತು ಅವರುಗಳ ಚರ್ಚೆ ಸಂವಾದಗಳ ಫಲಿತಗಳನ್ನಾಧರಿಸಿದ ಪ್ರಾಯೋಗಿಕ ಪರ್ಯಾಯಗಳನ್ನು ರೂಪಿಸುವ ತುರ್ತು ಈ ಕಾಲಕ್ಕಿದೆ.

ಪ್ರಜಾತಾಂತ್ರಿಕ ಸಭೆ ಎಂದಾಗಲೂ, ಈಗಾಗಲೇ ಫ್ಯಾಸಿಸ್ಟ್ ಪ್ರಭುತ್ವದ ವಿರುದ್ಧ ಪ್ರಾಮಾಣಿಕವಾಗಿ ಚಳವಳಿ ಮಾಡುವ ಸಂಘಟನೆಗಳ ಮುಂದಾಳುಗಳನ್ನು ಕರೆಸಿ, ಆಯಾ ಸಂಘಟನೆಗಳ ಪ್ರತಿನಿಧಿಯಾಗಿ ಅವರವರ ಕೆಲಸ ಮತ್ತು ಭವಿಷ್ಯದ ರೂಪುರೇಷೆಗಳನ್ನು ಹಂಚಿಕೊಳ್ಳುವ ವೇದಿಕೆಯಾಗಬೇಕಿತ್ತು. ಒಟ್ಟಾರೆ ಈ ಆಯಾಮದ ಗೈರು ಹಾಜರಿ ದೊಡ್ಡದಾಗಿ ಕಾಣುತ್ತಿತ್ತು. ಬದಲಾಗಿ ಬಿಡಿಬಿಡಿ, ವ್ಯಕ್ತಿಗಳು ಬಿಡಿಬಿಡಿ ಆತಂಕಗಳನ್ನು ಹಂಚಿಕೊಳ್ಳಲು ಬಳಕೆಯಾದಂತೆ ಕಂಡಿತು.

ಈಚೆಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲ್ ನಲ್ಲಿ ಗ್ರಾಮ ಸೇವಾ ಸಂಘ ಮತ್ತು ದಕ್ಷಿಣಾಯನ ಒಡಗೂಡಿ 'ಸಹಿಷ್ಣತೆಯೆಡೆಗೆ ಸಾಹಿತ್ಯ ಸಮ್ಮೇಳನ' ಎನ್ನುವ ಕಾರ್ಯಕ್ರಮ ನಡೆಸಿತು. ಇದು ದಾಬೋಲ್ಕರ್, ಪನ್ಸಾರೆ, ಎಂ.ಎಂ.ಕಲ್ಬುರ್ಗಿ, ಗೌರಿ ಲಂಕೇಶ್ ಹತ್ಯೆಯನ್ನು ಒಳಗೊಂಡಂತೆ, ಈಚಿನ ಸಾಹಿತಿ ಚಿಂತಕರ ದಿಢೀರ್ ಬಂಧನವನ್ನು ಆಧರಿಸಿ ಬರಹ ಮಾಡುವವರ ಬಿಕ್ಕಟ್ಟುಗಳ ನೆಲೆಯಲ್ಲಿ ಕೂಡಿಕೊಂಡ ಸಭೆಯಾಗಿತ್ತು. ಪ್ರಶಾಂತ್ ಭೂಷಣ್, ಗಿರೀಶ್ ಕಾರ್ನಾಡ್, ರಾಮಚಂದ್ರ ಗುಹಾ, ಜಿ ಎನ್ ದೇವಿ, ಪ್ರಸನ್ನ, ಎಂ ಎಸ್ ಸತ್ಯು, ಜಿ ಕೆ ಗೋವಿಂದರಾವ್, ಕೆ ಮರುಳಸಿದ್ದಪ್ಪ, ಬೋಳುವಾರ್ ಮಹಮದ್ ಕುಂಯಿ, ರಾಜೇಂದ್ರ ಚೆನ್ನಿ, ರಹಮತ್ ತರೀಕೆರೆ, ಕೆ ಶರೀಫಾ, ವಿಜಯಮ್ಮ, ಪ್ರತಿಭಾ ನಂದಕುಮಾರ್ ಮೊದಲಾದ ಸಾಹಿತಿ ಗಣ್ಯರನೇಕರು ನೆರೆದಿದ್ದರು. ಈ ಎಲ್ಲರ ಜೊತೆಗೂಡುವಿಕೆಯೆ ದೇಶದಲ್ಲಿನ ಅಘೋಷಿತ ತುರ್ತುಪರಿಸ್ಥಿತಿಯನ್ನು ವಿರೋಧಿಸುವ ಸಂಕೇತವಾಗಿತ್ತು. ಈ ಅರ್ಥದಲ್ಲಿ ಇದೊಂದು ಗಮನಾರ್ಹ ಸಭೆ. ಇದು ಪ್ರಜಾಸಂಸತ್ತಿನ ಮಾದರಿಯಲ್ಲಿ ಆಯೋಜನೆಗೊಂಡಿದ್ದು, ಭಾಗಿದಾರರೆಲ್ಲ ಅಸಹಿಷ್ಣತೆ ಮತ್ತು ಸಹಿಷ್ಣತೆಯ ಬಗ್ಗೆ ಮುಕ್ತವಾಗಿ ಮಾತನಾಡುವಂಥದ್ದಾಗಿತ್ತು.

ದೇಶದಲ್ಲಿ ಅಘೋಷಿತ ತುರ್ತುಪರಿಸ್ಥಿತಿ ಏರ್ಪಟ್ಟ ಈ ಸಂದರ್ಭ ತುಂಬಾ ಸೂಕ್ಷ್ಮವಾದುದು. ಭಯಗ್ರಸ್ತ ಸ್ಥಿತಿಯನ್ನು ಎದುರಿಸಲು ಬೇಕಾದ ಪರ್ಯಾಯಗಳ ಬಗೆಗೆ ದೇಶಮಟ್ಟದ ಪ್ರಾಯೋಗಿಕ ಯೋಜನೆಗಳು ರೂಪುಗೊಳ್ಳಬೇಕಿದೆ. ಅಂತೆಯೇ ಫ್ಯಾಸಿಸ್ಟ್ ಪ್ರಭುತ್ವದ ವಿರುದ್ಧ ಗಟ್ಟಿಯಾಗಿ ಧ್ವನಿ ಎತ್ತುತ್ತಿರುವ ವಿಚಾರವಂತರ ಪಡೆಯನ್ನು ಒಂದೆಡೆ ಸೇರಿಸುವುದು ಮತ್ತು ಅವರುಗಳ ಚರ್ಚೆ ಸಂವಾದಗಳ ಫಲಿತಗಳನ್ನಾಧರಿಸಿದ ಪ್ರಾಯೋಗಿಕ ಪರ್ಯಾಯಗಳನ್ನು ರೂಪಿಸುವ ತುರ್ತು ಈ ಕಾಲಕ್ಕಿದೆ. ಅಂತೆಯೇ ಈ ಪರ್ಯಾಯಗಳನ್ನು ದೇಶವ್ಯಾಪಿ ಜೀವಪರವಾಗಿ ತೊಡಗಿಸಿಕೊಂಡ ಚಳವಳಿಗಳಿಗಳ ಯುವ ಸಮುದಾಯಕ್ಕೆ ಹಂಚುವುದು, ಅವುಗಳು ಕ್ರಿಯೆಯಾಗುವಂತೆ ಚಟುವಟಿಕೆಗಳನ್ನು ಚುರುಕುಗೊಳಿಸಿ ಕೋಮುವಾದಿ ವಾತಾವರಣವನ್ನು ತಿಳಿಯಾಗಿಸುವ ಬಹುದೊಡ್ಡ ಜವಾಬ್ದಾರಿ ವಿಚಾರವಂತರ ಮೇಲಿದೆ. ಮೇಲುನೋಟಕ್ಕೆ ಇಂತಹ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡ ದಕ್ಷಿಣಾಯನ ಹಿಂದಿನ ಕೆಲವು ನಡೆಗಳಲ್ಲಿ ಸಣ್ಣ ಭರವಸೆಯನ್ನೂ ಹುಟ್ಟಿಸಿತ್ತು. ಬೆಂಗಳೂರಿನಲ್ಲಿ ಆಯೋಜನೆಗೊಂಡ 'ಸಹಿಷ್ಣುತೆಗಾಗಿ ಸಾಹಿತ್ಯ ಸಮ್ಮೇಳನ' ದ ಬಗೆಗೂ ಇಂಥಹದ್ದೊಂದು ಅಪೇಕ್ಷೆ ಇತ್ತು.



ಆರಂಭಕ್ಕೆ ಜಿ ಎನ್ ದೇವಿ ಅವರು ಈ ಹೊತ್ತಿನ ಬಿಕ್ಕಟ್ಟುಗಳ ಬಗೆಗೆ ಮತ್ತು ನಾವುಗಳು ಕಂಡುಕೊಳ್ಳಬಹುದಾದ ಪರ್ಯಾಯಗಳ ಬಗೆಗೆ ಸೂಕ್ಷ್ಮಸಂಗತಿಗಳನ್ನು ಸಭೆಯ ಗಮನಕ್ಕೆ ತಂದರು. ಅಂತೆಯೇ ಈ ಹೊತ್ತು ಬುದ್ಧಗುರುವಿನ ಮೈತ್ರಿಯ ಪರಿಕಲ್ಪನೆ ನಮಗೆ ದಾರಿದೀಪವಾಗಬೇಕಿದೆ ಎಂದು ಮೂಡ್ನಾಕೂಡು ಚಿನ್ನಸ್ವಾಮಿ ಪ್ರತಿಪಾದಿಸಿದರು. ಈ ಮಧ್ಯೆ ಇಡೀ ದಿನದ ಆಶಯಕ್ಕೆ ಪಕ್ಕಾಗಿ ಪರಿಣಾಮಕಾರಿ ಆಕ್ಷನ್ ಪ್ಲಾನ್ ಕೊಟ್ಟದ್ದು ಸ್ವರಾಜ್ ಇಂಡಿಯಾ ಅಭಿಯಾನದ ಪ್ರಶಾಂತ ಭೂಷಣ ಅವರು. ಮೊದಲು ಜನರಿಗೆ ಮೋಸ ಮಾಡುತ್ತಿರುವ ಪ್ರಭುತ್ವ ಹೇಳುವ ಸುಳ್ಳುಗಳನ್ನು ಬಯಲುಗೊಳಿಸುವುದು, ದ್ವೇಷಕಾರುವ ಮತ್ತು ಅಹಿಂಸೆಯನ್ನು ಪ್ರಚೋದಿಸುವ ಬರಹ ಮತ್ತು ಸೋಷಿಯಲ್ ಮೀಡಿಯಾ ಪೋಸ್ಟಳನ್ನು ಗುರುತಿಸಿ ದೂರು ಸಲ್ಲಿಸಿ ಇವುಗಳ ವಿರುದ್ಧ ಕಾನೂನು ಕ್ರಮ ಜರುಗಿಸುವುದು. ಎರಡನೆಯದಾಗಿ ಈ ಬಗೆಯ ಜಾಗೃತಿಯನ್ನು ಮೂಡಿಸಲು ನಿಷ್ಠಾವಂತ ಜಾಗೃತ ಬಳಗವನ್ನು ರೂಪಿಸುವುದು, ಈ ಬಳಗದ ಮೂಲಕ ಬಹುತ್ವ ಮತ್ತು ಬಹುಧಾರ್ಮಿಕತೆಯ ಸೌಹಾರ್ದತೆಯ ಕಥನಗಳನ್ನು ವ್ಯಾಪಕವಾಗಿ ಹರಡುವ ಕ್ರಿಯಾಯೋಜನೆ ರೂಪಿಸುವುದು, ಮೂರನೆಯದಾಗಿ ತಾಲೂಕು ಜಿಲ್ಲಾವಾರು ಸಂವಿಧಾನದ ಆಶಯಗಳಿಗೆ ಬದ್ಧರಾದ ಸದಸ್ಯರನ್ನು ಒಳಗೊಂಡ ಶಾಂತಿ ಸೌಹಾರ್ದತೆಯ ಸಮಿತಿಗಳನ್ನು ರಚಿಸುವುದು. ಈ ಸಮಿತಿಗಳು ಜನರೊಟ್ಟಿಗಿದ್ದು ಸೌಹಾರ್ದತೆಗಾಗಿ ದುಡಿಯುವುದು, ಎನ್ನುವ ಕ್ರಿಯಾಯೋಜನೆಯನ್ನು ಮುಂದಿಟ್ಟರು. ಉಳಿದಂತೆ ಮುಜಫರ್ ಅಸ್ಸಾದಿ, ದಿನೇಶ್ ಅಮೀನ್ಮಟ್ಟು, ಸಿದ್ದನಗೌಡ ಪಾಟೀಲ್ ಮೊದಲಾದವರು ಇದಕ್ಕೆ ಪೂರಕವಾದ ಚಿಂತನೆಗಳನ್ನು ಹಂಚಿಕೊಂಡರು. ಇಂತಹ ಕ್ರಿಯಾಯೋಜನೆಗಳನ್ನು ಬೇರೆ ಬೇರೆ ಹಿನ್ನೆಲೆಯವರು ಅವರದೇ ನೆಲೆಗಳಲ್ಲಿ ಮಂಡಿಸಿ, ಅದರ ಕ್ರೋಢೀಕೃತ ರೂಪ ಕಾರ್ಯಕ್ರಮದ ಕೊನೆಗೆ ಮಂಡನೆಯಾಗಬೇಕಿತ್ತು. ಆದರೆ ಈ ನಿಟ್ಟಿನಲ್ಲಿ ಇಡೀ ಸಮ್ಮೇಳನ ಎಡವಿದಂತೆ ಕಂಡಿತು.

ರಂಗಕರ್ಮಿ ಪ್ರಸನ್ನ ಅವರ ಮುಂದಾಳತ್ವದ 'ಗ್ರಾಮ ಸೇವಾ ಸಂಘ' ದ ಚಟುವಟಿಕೆಗಳು ಮೇಲೆ ಹೇಳಿದ ಕಟಿಬದ್ಧತೆಗಿನ್ನೂ ಪಕ್ವವಾಗಿಲ್ಲ. ಇದಿನ್ನೂ ಮಧ್ಯಮವರ್ಗದ ಆರಾಮಾದಾಯಕ ಮೇಲ್ತರದ ಚಟುವಟಿಕೆಗಳಲ್ಲಿ ಜೀವಂತವಾಗಿರುವ 'ಜನಪ್ರಿಯ' ನೆಲೆಯನ್ನು ಆಧರಿಸಿದೆ. ಹಾಗಾಗಿ ದಕ್ಷಿಣಾಯನದ ಒಡಲೊಳಗಳ ಕಿಚ್ಚಿನ ಕಾವು ಈ ಸಂಘಕ್ಕೆ ತಾಕುವುದು ಕಷ್ಟ. ಇದರ ಪರಿಣಾಮ ಕಾರ್ಯಕ್ರಮದ ಆಯೋಜನೆಯಲ್ಲಿಯೂ ಫಲಿತಗೊಂಡಿತು. ಎರಡನೆಯದಾಗಿ ಫ್ಯಾಸಿಸ್ಟ್ ಪ್ರಭುತ್ವದ ವಿರುದ್ಧ ಗಟ್ಟಿಯಾಗಿ ಧ್ವನಿ ಎತ್ತುತ್ತಿರುವ ಪ್ರಾಮಾಣಿಕ ವಿಚಾರವಂತರ ಸಂಖ್ಯೆ ಕೂಡ ಬೆರಳೆಣಿಕೆಯದಾಗಿತ್ತು. ಬದಲಿಗೆ ಈ ಹೊತ್ತು ದೊಡ್ಡದಾಗಿ ಪ್ರತಿರೋಧದ ಧ್ವನಿ ಎತ್ತದೆ ಗುನುಗಿಕೊಂಡಿರುವ ಸಿನಿಕರ ಸಂಖ್ಯೆಯೇ ಹೆಚ್ಚಾಗಿತ್ತು. ವಿಚಿತ್ರವೆಂದರೆ ಫ್ಯಾಸಿಸ್ಟ್ ಪ್ರಭುತ್ವವನ್ನು ಕೆಣಕದೆ ನವಿರು ಪದ್ಯಗಳ ಬರೆದುಕೊಂಡಿರುವವರೂ ಸಹ ಅಂತಹದ್ದೇ ಪದ್ಯಗಳನ್ನು ವೇದಿಕೆಯಲ್ಲಿ ಓದಿ ರಂಜಿಸಿದರು. ಎಂದೂ ಫ್ಯಾಸಿಸ್ಟ್ ಪ್ರಭುತ್ವದ ಆತಂಕವನ್ನು ತೋರಿಸದ ಹಲವರು ತೋರಿಕೆಯ ಮಾತುಗಳನ್ನು ಆಡಿ ಕಾಳಜಿಯ ಬಲೂನುಗಳನ್ನು ಉಬ್ಬಿಸಿದರು. ಮುಂದುವರೆದು ಮರೆಯಲ್ಲಿ ಬಲಪಂಥೀಯ ಸೆಳವಿನ ಜತೆ ಕೊಡುಕೊಳೆ ಮಾಡುವ ಸಾಹಿತಿಗಳು ಕೂಡ ಮುಸುಕೊದ್ದೆ ತಮ್ಮ ಧೀರೋದತ್ತ ಮಾತುಗಳನ್ನು ಆಡುವಂತಾಯಿತು. ಈ ಬಗೆಯ ವಿರುದ್ಧ ದಿಕ್ಕಿನ ದನಿಗಳು ಏಕರೂಪದ ಆಕಾರ ಪಡೆಯಲು ಪ್ರಯತ್ನಿಸಿ ಸೋತಂತೆ ಕಾಣುತ್ತಿತ್ತು.

ಪ್ರಜಾತಾಂತ್ರಿಕ ಸಭೆ ಎಂದಾಗಲೂ, ಈಗಾಗಲೇ ಫ್ಯಾಸಿಸ್ಟ್ ಪ್ರಭುತ್ವದ ವಿರುದ್ಧ ಪ್ರಾಮಾಣಿಕವಾಗಿ ಚಳವಳಿ ಮಾಡುವ ಸಂಘಟನೆಗಳ ಮುಂದಾಳುಗಳನ್ನು ಕರೆಸಿ, ಆಯಾ ಸಂಘಟನೆಗಳ ಪ್ರತಿನಿಧಿಯಾಗಿ ಅವರವರ ಕೆಲಸ ಮತ್ತು ಭವಿಷ್ಯದ ರೂಪುರೇಷೆಗಳನ್ನು ಹಂಚಿಕೊಳ್ಳುವ ವೇದಿಕೆಯಾಗಬೇಕಿತ್ತು. ಒಟ್ಟಾರೆ ಈ ಆಯಾಮದ ಗೈರು ಹಾಜರಿ ದೊಡ್ಡದಾಗಿ ಕಾಣುತ್ತಿತ್ತು. ಬದಲಾಗಿ ಬಿಡಿಬಿಡಿ, ವ್ಯಕ್ತಿಗಳು ಬಿಡಿಬಿಡಿ ಆತಂಕಗಳನ್ನು ಹಂಚಿಕೊಳ್ಳಲು ಬಳಕೆಯಾದಂತೆ ಕಂಡಿತು. ನಾವು ಭಯಪಡಬೇಕಿಲ್ಲ, ಯಾರಿಂದಲೂ ಏನನ್ನೂ ಮಾಡಲಿಕ್ಕಾಗದು, ಬಹುತ್ವವನ್ನು ನಾಶಮಾಡಲಿಕ್ಕಾಗದು ಎನ್ನುವಂತಹ ರಮ್ಯ ಮಾತುಗಳು ಹೇರಳವಾಗಿ ಕೇಳಲ್ಪಟ್ಟವು. ವಾಸ್ತವದಲ್ಲಿ ಈ ಮಾತುಗಳು ಸವೆದು ಚಲಾವಣೆ ಕಳೆದುಕೊಂಡು ನಿತ್ರಾಣವಾದ ನುಡಿಗಟ್ಟುಗಳು. ಇಂತಹ ನುಡಿಗಟ್ಟುಗಳ ಸರಪಣಿ ಹೆಣೆಯುವ ಅಗತ್ಯ ಈ ಕಾಲಕ್ಕಿಲ್ಲ. ಈ ಎಲ್ಲಾ ಮಿತಿಗಳು 'ಸಹಿಷ್ಣುತೆಗಾಗಿ ಸಾಹಿತ್ಯ ಸಮ್ಮೇಳನ' ದ ಬಗೆಗಿದ್ದ ಅಪೇಕ್ಷೆಗಳನ್ನು ನಿಧಾನಕ್ಕೆ ಮಣ್ಣಾಗಿಸಿದವು.

ಮೇಲೆ ಹೇಳಿದಂತೆ ಈ ಸಮ್ಮೇಳನವನ್ನು ಆಯೋಜಿಸಿದ ಎರಡೂ ಸಂಘಟನೆಗಳಿಗೆ ಕೆಲವು ಸೂಕ್ಷ್ಮ ವ್ಯತ್ಯಾಸಗಳಿವೆ. ಪ್ರಸನ್ನ ಅವರ ಗ್ರಾಮಸೇವಾ ಸಂಘವು ಸಮಸ್ಯೆಗಳನ್ನು ತುಂಬಾ ಮೇಲ್ ಸ್ತರದಲ್ಲಿ ಜನಪ್ರಿಯ ಮಾಧ್ಯಮ ಕೇಂದ್ರಿತ ನೆಲೆಯಲ್ಲಿ ಬಿಂಬಿಸುವ ಮಾದರಿಯದು. ಪ್ರಸನ್ನ ಅವರ ಯಂತ್ರಗಳನ್ನು ಕಳಚೋಣ ಬನ್ನಿ, ಶ್ರಮದಾಯಕ ಸರಳಬದುಕಿಗೆ ಗ್ರಾಮಕ್ಕೆ ಮರಳೋಣ ಎನ್ನುವುದನ್ನು ಮೊದಲುಗೊಂಡು ಮೂಲಭೂತವಾದಿಗಳ ಸಂಕೇತವಾಗಿ ವ್ಯಾಪಕತೆ ಪಡೆದ 'ರಾಮ'ನನ್ನು ಸೆಕ್ಯುಲರ್ ಇಮೇಜಾಗಿ ರೂಪಾಂತರಿಸುವ ಪ್ರಕ್ರಿಯೆಗಳು ತುಂಬಾ ಆಳದ ತಿಳಿವು ಮತ್ತು ದೂರದೃಷ್ಟಿಯಿಲ್ಲದ ಜನಪ್ರಿಯ ಆಯ್ಕೆಗಳಂತೆ ಕಾಣುತ್ತವೆ. ಕಾರಣ ಇವುಗಳ ಬಗೆಗೆ ಪ್ರಸನ್ನ ಅವರ ಅಭಿಪ್ರಾಯಗಳು ಅದಕ್ಕೆ ಬೇಕಾದ ಸಿದ್ಧತೆಗಳು, ಒಳಗೊಳ್ಳುವ ಸಂಘಟನೆ ಮತ್ತು ಚಳವಳಿಗಾರರ ಆಯ್ಕೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ.

ಆದರೆ ದಕ್ಷಿಣಾಯನದ್ದು ಭಿನ್ನ ದಾರಿ. ಇದು ರೂಪಗೊಂಡದ್ದೇ ವಿಚಾರವಾದಿಗಳ ಹತ್ಯೆಯನ್ನು ವಿರೋಧಿಸಿ, ಲೇಖಕ ಕಲಾವಿದರಲ್ಲಿ ಭಯಮುಕ್ತ ಅಭಿವ್ಯಕ್ತಿಯನ್ನು ಸಾಧ್ಯವಾಗಿಸಲು. ಅಂತೆಯೇ ಈ ನೆಲೆಯಲ್ಲಿ ದೇಶದಾದ್ಯಾಂತ ಒಂದುಗೂಡುವ ಮನಸ್ಸುಗಳನ್ನು ಬಲಗೊಳಿಸಿ, ಭಯಹುಟ್ಟಿಸುವ ಶಕ್ತಿಗಳನ್ನು ಹಿಮ್ಮೆಟ್ಟಿಸುವುದಾಗಿದೆ. ದೂರದೃಷ್ಠಿಯ ಮತ್ತು ಪ್ರಾಯೋಗಿಕ ನೆಲೆ ಇದರದ್ದು. ಅಂತೆಯೇ ಪ್ರೊ.ಜಿ.ಎನ್.ದೇವಿ ಅವರು ಜನಪ್ರಿಯತೆಯ ಮೈಕೊಡವಿ ಬುಡಕಟ್ಟು ಸಮುದಾಯಗಳ ಜತೆ ಕಳೆದ ಇಪ್ಪತ್ತು ವರ್ಷಗಳ ಕಾಲ ಅವಿರತ ದುಡಿದವರು. ಹಾಗಾಗಿ ಪ್ರಸನ್ನ ಮತ್ತು ಪ್ರೊ. ದೇವಿ ಅವರ ನಡೆ ಮತ್ತು ಕ್ರಿಯೆಗಳಲ್ಲಿ ಸೂಕ್ಷ್ಮ ಫರಕುಗಳಿವೆ. ಈ ಕಾರಣಕ್ಕೆ ದಕ್ಷಿಣಾಯನದ 'ಗ್ರಾಮಸೇವಾಸಂಘದ' ಜತೆಗಿನ ಹೊಂದಾಣಿಕೆಯೇ ಹಲವರನ್ನು ಮೊದಲೇ ಹೊರಗಿರುವಂತೆ ಮಾಡಿತು. ಪ್ರಸನ್ನ ಅವರು ಕಾರ್ಯಕ್ರಮದ ಆರಂಭಕ್ಕೆ ಲೇಖಕರು 'ಸಂಭ್ರಮದಿಂದ' ಬರೆಯಬೇಕು ಎನ್ನುತ್ತಲೇ ಇಡೀ ದಿನದ ಗಂಭೀರತೆಗೆ ತೆಳುವಾದ ಪರದೆ ಎಳೆದು ಕುಳಿತರು. ಇಂತಹ ಕಾರಣಗಳು ಈ ಸಮ್ಮೇಳನ ಪಡೆಯಬೇಕಾಗಿದ್ದ ವ್ಯಾಪಕತೆಯನ್ನು ಗಂಭೀರತೆಯನ್ನು ಕುಬ್ಜಗೊಳಿಸಿದಂತೆ ಕಂಡಿತು.

ದೊಡ್ಡ ರಾಕ್ಷಸನಂತೆ ಬಿಂಬಿತವಾಗುತ್ತಿರುವ ಫ್ಯಾಸಿಸ್ಟ್ ಶಕ್ತಿಯ ವಿರುದ್ಧ ಸಣ್ಣಪುಟ್ಟ ಸಂಘಟನೆಗಳೆಲ್ಲ ಭಿನ್ನತೆ ಮರೆತು ಕೂಡಿ ಬೃಹತ್ ಶಕ್ತಿಯಾಗಬೇಕಿರುವ ಅನಿವಾರ್ಯತೆ ಈ ಕಾಲಕ್ಕಿದೆ. ಆದರೆ ಈ ಕೂಡುವಿಕೆಗೂ ಎಚ್ಚರದ ಕಣ್ಣಿರಬೇಕು. ಕೂಡುವಿಕೆಯಂತೆ ಕಾಣುತ್ತಲೇ ಒಳಗಿಂದಲೆ ಶಕ್ತಿಯನ್ನು ದುರ್ಬಲಗೊಳಿಸಬಲ್ಲ ಆಯಾಮದ ಅಪಾಯಗಳನ್ನು ಗಮನಿಸಿ ಮುನ್ನಡೆಯಬೇಕಾಗುತ್ತದೆ. ಈ ನೆಲೆಯಲ್ಲಿ ದಕ್ಷಿಣಾಯನಕ್ಕೆ ಇದು ಪಾಠವಾಗುತ್ತದೋ, ತನ್ನ ಬಗೆಗಿನ ಕುಸಿದ ಅಪೇಕ್ಷೆಯನ್ನು ಮರುಕಟ್ಟಿಕೊಳ್ಳುತ್ತದೆಯೋ.. ಅದರ ಮುನ್ನಡೆಯನ್ನು ಕಾಯ್ದು ನೋಡಬೇಕಿದೆ. ●

ನಿಲುವಳಿ 1 – ಸೆಕ್ಯೂಲರ್ ವಾದ

ಧರ್ಮ ಹಾಗೂ ರಾಜಕಾರಣಗಳನ್ನು ಹರಿದು ಬೇರ್ಪಡಿಸುವುದಿಲ್ಲ ನಾವು. ಅಥವಾ, ಪುರೋಹಿತಶಾಹಿ ಹಾಗೂ ಬಂಡವಾಳಶಾಹಿಗಳನ್ನು ಬೆಸೆದು, ಧಾರ್ಮಿಕ ಉಗ್ರವಾದಿ ರಾಜಕಾರಣ ಸೃಷ್ಟಿಸುವುದೂ ಇಲ್ಲ. ಸ್ಯೂಡೋ ಸೆಕ್ಯೂಲರುಗಳು ಸ್ಯೂಡೋ ಧಾರ್ಮಿಕರು ಎರಡೂ ಅಲ್ಲ ನಾವು. ಸೌಮ್ಯವಾದಿ ಧರ್ಮ ಹಾಗೂ ಗ್ರಾಮ ಸ್ವರಾಜ್ಯಗಳನ್ನು ಬೆಸೆಯುತ್ತೇವೆ ನಾವು. ದೇವರು ಸಮಾಜವಾದಿ ಎಂದು ನಂಬುತ್ತೇವೆ ನಾವು. ಸಂತರು ಸಾಮಾಜಿಕ ಕಾರ್ಯಕರ್ತರು ಎಂದು ನಂಬುತ್ತೇವೆ ನಾವು.

ನಿಲುವಳಿ 2 –ರಾಷ್ಟ್ರೀಯತೆ

ಭಗತಸಿಂಗನಂತೆ, ಏಕಕಾಲದಲ್ಲಿ, ನಾವು ರಾಷ್ಟ್ರಪ್ರೇಮಿಗಳು ಹಾಗೂ ವಿಶ್ವಾತ್ಮಕ ಪ್ರಜೆಗಳು ಎರಡೂ ಹೌದು. ಧಾರ್ಮಿಕ ರಾಷ್ಟ್ರೀಯತೆಯನ್ನು ತಿರಸ್ಕರಿಸುತ್ತೇವೆ ನಾವು.

ನಿಲುವಳಿ 3 –ಲೇಖಕ ಕಲಾವಿದರ ಜವಾಬ್ದಾರಿ

ಲೇಖಕ ಹಾಗೂ ಕಲಾವಿದ ಒಬ್ಬ ಸಾಮಾಜಿಕ ಕಾರ್ಯಕರ್ತ. ತನ್ನ ಸಮುದಾಯದ ಹಿತ್ತಲಿಗೆ ಹಿಂದಿರುಗಿ, ಜನರಿಂದ ಸರಳಬದುಕಿನ ಪಾಠ ಕಲಿಯುವುದು ಹಾಗೂ ಜನರಿಗೆ ಸಹಿಷ್ಣುತೆಯ ಪಾಠ ಕಲಿಸುವುದು ಆಕೆ/ಆತನ ಸಾಮಾಜಿಕ ಜವಾಬ್ದಾರಿಯಾಗಿದೆ.

ನಿಲುವಳಿ 4 – ವಸುಧಾ ಏವ ಕುಟುಂಬಕಂ

ಎಲ್ಲ ಜೀವಿಗಳು ಹಾಗೂ ಭೂಮಿತಾಯಿ ನಮ್ಮ ಜವಾಬ್ದಾರಿಯಾಗಿವೆ. ವಸುಧಾ ಏವ ಕುಟುಂಬಕಂ ಎಂಬ ಜೀವಪರ ಆಶಯವನ್ನು ಭಾರತದ ಸಂವಿಧಾನದ ಆಶಯವಾಕ್ಯವಾಗಿ ಸ್ವೀಕರಿಸಬೇಕೆಂದು ನಾವು ಒತ್ತಾಯಿಸುತ್ತೇವೆ

ರೈತ–ಕಾರ್ಮಿಕ ಐಕ್ಯತೆಯ ಹೊಸ ಮಾನದಂಡ

ಸೆಪ್ಟೆಂಬರ್ 5 ರ್‍ಯಾಲಿ ರೈತ–ಕಾರ್ಮಿಕ ಐಕ್ಯತೆಯಲ್ಲೊಂದು ಹೊಸ ಮಾನದಂಡವಾಗಲಿದೆ. ರೈತ–ಕಾರ್ಮಿಕ ಸಖ್ಯತೆ ಎಲ್ಲಾ ದುಡಿಯುವ ಜನವಿಭಾಗಗಳನ್ನು ಅಣಿ ನೆರೆಸಲು ಆಧಾರವಾಗಬೇಕು. ಇದು ಹಿಂದುತ್ವ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಅತ್ಯಾವಶ್ಯಕ. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ ಸಾಧಿಸಲು ಸಹ ಇದು ಹಾದಿಯನ್ನು ತೆರೆಯುತ್ತದೆ.





ಪ್ರಕಾಶ ಕಾರಟ್

ಸೆಪ್ಟೆಂಬರ್ 5ರ ಕಿಸಾನ್ ಮಜದೂರ್ ಸಂಘರ್ಷ ರ್‍ಯಾಲಿ ರಾಜಧಾನಿಯಲ್ಲಿ ದುಡಿಯುವ ಜನರ ಅತ್ಯಂತ ಗಮನಾರ್ಹ ಮತ್ತು ಅರ್ಥಪೂರ್ಣ ಅಣಿನೆರೆಸುವಿಕೆಯಾಗಿತ್ತು. ಕಾರ್ಮಿಕರು ರೈತರು, ಕೃಷಿ ಕೂಲಿಕಾರರು ಜತೆಗೂಡಿ ಈ ಪ್ರಮಾಣದ ಅಖಿಲ ಭಾರತ ರ್‍ಯಾಲಿಯನ್ನು ಸಂಘಟಿಸಿದ್ದು ಇದೇ ಮೊದಲ ಬಾರಿಗೆ ಆಗಿತ್ತು. ಈ ರ್‍ಯಾಲಿಯನ್ನು ಸಿಐಟಿಯು, ಅಖಿಲ ಭಾರತ ಕಿಸಾನ ಸಭಾ, ಅಖಿಲ ಭಾರತ ಕೃಷಿ ಕೂಲಿಕಾರರ ಯೂನಿಯನ್ ಸಂಘಟಿಸಿತ್ತು.

ರ್‍ಯಾಲಿಯ ದಿನವೂ, ಹಿಂದಿನ ದಿನವೂ ದೆಹಲಿಯಲ್ಲಿ ಮಳೆ ಸುರಿಯುತ್ತಿತ್ತು. ಸುರಿಯುವ ಮಳೆಯನ್ನು ಲೆಕ್ಕಿಸದೆ ಲಕ್ಷಾಂತರ ಪುರುಷರು, ಮಹಿಳೆಯರು ರಾಮಲೀಲಾ ಮೈದಾನದಿಂದ ಸಂಸದ್ ಮಾರ್ಗಕ್ಕೆ ಹೆಜ್ಜೆ ಹಾಕಿದರರು. ಈಶಾನ್ಯ ಭಾರತ ಸೇರಿದಂತೆ ದೇಶದ ಎಲ್ಲಾ ಭಾಗಗಳಿಂದ ಬಂದ ಕೈಗಾರಿಕಾ ಕಾರ್ಮಿಕರು, ಸಾರ್ವಜನಿಕ ಉದ್ಯಮಗಳ ಕಾರ್ಮಿಕರು, ದೊಡ್ಡ ಸಂಖ್ಯೆಯಲ್ಲಿ ಅಸಂಘಟಿತ ವಲಯದ, ಸ್ಕೀಂ ಗಳ ಮಹಿಳಾ ಕಾರ್ಮಿಕರು ಮೆರವಣಿಗೆಯಲ್ಲಿ ಭಾಗವಹಿಸಿದರು. ಪ್ರಮುಖವಾಗಿ ಮಹಾರಾಷ್ಟ್ರ, ರಾಜಸ್ಥಾನ, ಪಂಜಾಬ್ ಮತ್ತು ಉತ್ತರ ಭಾರತದ ರಾಜ್ಯಗಳಿಂದ ರೈತರು ಕೃಷಿ ಕೂಲಿಕಾರರು ದೊಡ್ಡ ಸಂಖ್ಯೆಯಲ್ಲಿ ಬಂದಿದ್ದರು. ದಕ್ಷಿಣದ ರಾಜ್ಯಗಳಿಂದಲೂ ಬಂದಿದ್ದರು. ಭೂರಹಿತ ಆದಿವಾಸಿ ರೈತರೂ, ಮಹಿಳಾ ಕೃಷಿ ಕೂಲಿಕಾರರೂ ಇದ್ದರು. ದಾಳಿಗಳನ್ನು ಎದುರಿಸುತ್ತಿರುವ ಪಶ್ಚಿಮ ಬಂಗಾಳ ಮತ್ತು ತ್ರಿಪುರಾದ ಕಾರ್ಮಿಕರು ರೈತರೂ ಭಾಗವಹಿಸಿದರು. ನೆರೆಯ ಪ್ರಕೋಪದಿಂದ ಬಳಲುತ್ತಿದ್ದರೂ, ಸಾವಿರಾರು ರೈತ–ಕಾರ್ಮಿಕರು ಕೇರಳದಿಂದಲೂ ಬಂದಿದ್ದರು.

ರ್‍ಯಾಲಿಯಲ್ಲಿ ಮೋದಿ ಸರಕಾರದ ನೀತಿಗಳ ವಿರುದ್ಧ ಬೆಳೆಯುತ್ತಿರುವ ಅತೃಪ್ತಿ ಮತ್ತು ಆಕ್ರೋಶಗಳು ಕಂಡು ಬಂದವು. ಇಂದಿನ ಸ್ಥಿತಿಯಲ್ಲಿ ಅಗತ್ಯವಾದ ಮತ್ತು ಈಗಾಗಲೇ ರೂಪುಗೊಳ್ಳುತ್ತಿರುವ ರೈತ–ಕಾರ್ಮಿಕ ಐಕ್ಯತೆಯ ಮೂರ್ತರೂಪವಾಗಿತ್ತು ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದ ಈ ರ್‍ಯಾಲಿ.

ರ್‍ಯಾಲಿ ಮುಂದಿಟ್ಟ ಹಕ್ಕೊತ್ತಾಯಗಳ ಪಟ್ಟಿ ಈ ಮೂರು ಮೂಲಭೂತ ವರ್ಗಗಳ ಪ್ರಮುಖ ಹಕ್ಕೊತ್ತಾಯಗಳನ್ನು ಒಳಗೊಂಡಿತ್ತು. ಭೂಸುಧಾರಣೆಗಳು, ಬೆಳೆಗಳಿಗೆ ಸ್ವಾಮಿನಾಥನ್ ಕಮಿಶನ್ ಶಿಫಾರಸು ಆಧಾರಿತ ಕನಿಷ್ಟ ಬೆಂಬಲ ಬೆಲೆ, ಕೃಷಿ ಕೂಲಿಕಾರರಿಗೆ ಕೇಂದ್ರೀಯ ಶಾಸನ, ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ, ರೂ. 18 ಸಾವಿರ ಕನಿಷ್ಟ ಕೂಲಿ ಮತ್ತು ಕಾರ್ಮಿಕ–ವಿರೋಧಿ ಕಾರ್ಮಿಕ ಕಾನೂನುಗಳನ್ನು ಕೈಬಿಡುವುದು ಈ ಹಕ್ಕೊತ್ತಾಯಗಳಲ್ಲಿ ಸೇರಿದ್ದವು.

ಎಲ್ಲಾ ದುಡಿಯುವ ಜನವಿಭಾಗಗಳಿಗೆ ಸಾಮಾನ್ಯವಾಗಿರುವ – ಬೆಲೆ ಏರಿಕೆ ತಡೆಗಟ್ಟುವುದು, ಸಾರ್ವತ್ರಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರೀಕರಿಸುವುದು, ಎಲ್ಲರಿಗೂ ಆಹಾರ ಭದ್ರತೆ ಶಿಕ್ಷಣ ಆರೋಗ್ಯ– ಗಳೂ ಇದ್ದವು. ಇವೆಲ್ಲವೂ ನವ–ಉದಾರವಾದಿ ನೀತಿಗಳನ್ನು ಹಿಂಪಡೆಯುವ ಒಟ್ಟಾರೆ ಒತ್ತಾಯದ ಭಾಗವಾಗಿದ್ದವು.

ಕಳೆದ ಎರಡುವರೆ ದಶಕಗಳಲ್ಲಿ ಎಲ್ಲಾ ಸರಕಾರಗಳು ಈ ನವ–ಉದಾರವಾದಿ ನೀತಿಗಳ ಅವ್ಯಾಹತ ದಾಳಿಗಳನ್ನು ಮಾಡುತ್ತಿವೆ. ಕಳೆದ 4 ವರ್ಷಗಳಲ್ಲಿ ಮೋದಿ ಸರಕಾರ ಈ ದಾಳಿ ಇನ್ನಷ್ಟು ಪ್ರಖರವಾಗಿದೆ. ಕಾರ್ಮಿಕರು ಮತ್ತು ರೈತರ ಜೀವನೋಪಾಯಗಳು ಮತ್ತು ಅಲ್ಪ ಸಂಪನ್ಮೂಲಗಳ ಮೇಲೆ ಒಂದು ಕಡೆ, ಹಾಗೂ ಇನ್ನೊಂದು ಕಡೆ ಟ್ರೇಡ್ ಯೂನಿಯನ್ ಮತ್ತಿತರ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ – ಅವಳಿ ದಾಳಿಗಳನ್ನು ನಡೆಸಲಾಗುತ್ತಿದೆ. ದುಡಿಯುವ ಜನರ ಕೆಲವು ಜನವಿಭಾಗಗಳ ಮೇಲೆ ದಾಳಿಗಳು ಭೀಕರವಾಗಿದ್ದವು. ತಮ್ಮ ಭೂಮಿ ಕಸಿದುಕೊಳ್ಳುವುದರ ವಿರುದ್ಧ ಎದ್ದು ನಿಂತ ಆದಿವಾಸಿಗಳು ಮತ್ತು ತಮ್ಮ ಹಕ್ಕುಗಳಿಗಾಗಿ ಹೋರಾಡಿದ ದಲಿತರೇ ಆ ಜನವಿಭಾಗಗಳು. ನವ–ಉದಾರವಾದ ಮತ್ತು ಹಿಂದುತ್ವ ಸರ್ವಾಧಿಕಾರಶಾಹಿ ಒಟ್ಟೊಟ್ಟಿಗೆ ಹೋಗುತ್ತಿವೆ.

ಈ ಅವಳಿ ದಾಳಿಗಳಿಂದಾಗಿಯೇ ಪ್ರತಿರೋಧಗಳು ಬೆಳೆಯುತ್ತಿವೆ. ಕಳೆದ ಒಂದು ವರ್ಷದಲ್ಲಿ ರೈತ ಮತ್ತು ಕಾರ್ಮಿಕರ ಐಕ್ಯ ಕಾರ್ಯಾಚರಣೆಗಳು ಮತ್ತು ಹೋರಾಟಗಳ ಸರಣಿಯೇ ನಡೆದಿತ್ತು. ಇವುಗಳಲ್ಲಿ ನವೆಂಬರ್ 2017ರಲ್ಲಿ ಟ್ರೇಡ್ ಯೂನಿಯನುಗಳ ಮಹಾ ಪಡಾವ್ ಮತ್ತು ಕಿಸಾನ್ ಸಂಸದ್, ಹಾಗೂ ಎಪ್ರಿಲ್ 2018ರಲ್ಲಿ ಮಹಾರಾಷ್ಟ್ರದ ಕಿಸಾನ್ ಲಾಂಗ್ ಮಾರ್ಚ್ ಸೇರಿವೆ.

ಈ ರ್‍ಯಾಲಿಗಿಂತ ಮೊದಲು ಅಗಸ್ಟ್ 9ರಂದು ಸಿಐಟಿಯು ಮತ್ತು ಕಿಸಾನ್ ಸಭಾ ಜಂಟಿಯಾಗಿ ಸಂಘಟಿಸಿದ್ದ ಜೈಲ್ ಭರೋ ಇನ್ನೊಂದು ಇಂತಹ ಐಕ್ಯ ಕಾರ್ಯಾಚರಣೆಯಾಗಿತ್ತು. ಇದರಲ್ಲಿ ದೇಶದಾದ್ಯಂತ ಐದುವರೆ ಲಕ್ಷ ರೈತ–ಕಾರ್ಮಿಕರು ಭಾಗವಹಿಸಿದ್ದರು.

ಆರೆಸ್ಸೆಸ್–ಬಿಜೆಪಿ ಕೂಟ ದುಡಿಯುವ ಜನರ ಐಕ್ಯತೆ ಮುರಿಯಲು ಸದಾ ಸನ್ನದ್ಧವಾಗಿರುತ್ತದೆ. ನವ–ಉದಾರವಾದಿ ನೀತಿಗಳ ವಿರುದ್ಧ ಐಕ್ಯ ಹೋರಾಟಗಳನ್ನು ಸಂಘಟಿಸುತ್ತಲೇ, ಅವುಗಳನ್ನು ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟದ ಜತೆ ತಳುಕು ಹಾಕುವುದು, ಮೋದಿ ಸರಕಾರದ ವಿರುದ್ಧ ಸವಾಲೆಸೆಯಲು ಅತ್ಯುತ್ತಮ ವಿಧಾನ.

ಸೆಪ್ಟೆಂಬರ್ 5 ರ್‍ಯಾಲಿ ರೈತ–ಕಾರ್ಮಿಕ ಐಕ್ಯತೆಯಲ್ಲೊಂದು ಹೊಸ ಮಾನದಂಡವಾಗಲಿದೆ. ರೈತ–ಕಾರ್ಮಿಕ ಸಖ್ಯತೆ ಎಲ್ಲಾ ದುಡಿಯುವ ಜನವಿಭಾಗಗಳನ್ನು ಅಣಿ ನೆರೆಸಲು ಆಧಾರವಾಗಬೇಕು. ಇದು ಹಿಂದುತ್ವ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಅತ್ಯಾವಶ್ಯಕ. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ ಸಾಧಿಸಲು ಸಹ ಇದು ಹಾದಿಯನ್ನು ತೆರೆಯುತ್ತದೆ. ●



'ಧರ್ಮ–ಸಿದ್ಧಾಂತಗಳಿಂದ ಬಿಡಿಸಿಕೊಂಡ' ಪ್ರಬುದ್ಧತೆ (ಅಥವಾ ಅಪ್ರಬುದ್ಧತೆ) ಎಂಬುದಿದೆಯೆ?

(ಶಿವ್ ವಿಶ್ವನಾಥನ್ ಅವರ ಲೇಖನಕ್ಕೆ ಒಂದು ಪ್ರತಿಕ್ರಿಯೆ)

ಕಳೆದ ವಾರ (ಜನಶಕ್ತಿ ಸಂಚಿಕೆ 36–2018) ಪ್ರಕಟವಾದ ಶಿವ್ ವಿಶ್ವನಾಥನ್ ಅವರ ಲೇಖನದಲ್ಲಿ ಇತ್ತೀಚೆಗೆ ಕೇರಳದಲ್ಲಿ ಘಟಿಸಿದ ನೈಸರ್ಗಿಕ ಪ್ರಕೋಪದ ಪರಿಹಾರಕಾರ್ಯವನ್ನು ಕೇರಳದ ಮುಖ್ಯಮಂತ್ರಿಯು ನಿರ್ವಹಿಸಿದ ರೀತಿಯನ್ನು ಮೆಚ್ಚಿಕೊಳ್ಳುವ ಲೇಖಕರ ಮಾತಿನಲ್ಲಿ ಅಜ್ಞಾನದ/ಪೂರ್ವಗ್ರಹದ ಒಂದು ಅಭಿಪ್ರಾಯವಿದೆ. ಅದು ಕೇರಳದ ಮುಖ್ಯಮಂತ್ರಿಯು ಸಂಘಪರಿವಾರದ ಜನರ ಟೀಕೆ, ದೂಷಣೆ ಮತ್ತು ಅತಾರ್ಕಿಕ ತೀರ್ಮಾನಗಳಿಗೆ ಗಮನ ಕೊಡದೆ, ಧರ್ಮ–ಸಿದ್ಧಾಂತಗಳ ಚೌಕಟ್ಟಿನಿಂದ ಆಚೆಬಂದು ಅಥವಾ ಉಳಿದು, ಸಮಚಿತ್ತದಿಂದ ಅಗತ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ ಎಂಬರ್ಥದ 'ಮೆಚ್ಚುಗೆ'ಯ ಮಾತುಗಳಲ್ಲಿದೆ.

ಸಂಘಪರಿವಾರದ ಜನರು ಅತಾರ್ಕಿಕವಾಗಿ ಯೋಚಿಸುವುದಕ್ಕೂ, ಅಸಮತೋಲಿತ/ಅವೈಚಾರಿಕ ತೀರ್ಮಾನಗಳನ್ನು ಮಂಡಿಸಿ ಕಷ್ಟದಲ್ಲಿರುವ ಜನರ ಬಗ್ಗೆ ಅನುಕಂಪವಿಲ್ಲದೆ ನಡೆದುಕೊಳ್ಳುವ ಅಮಾನವೀಯತೆಗೂ, ಅಪ್ರಬುದ್ಧತೆಗೂ ಮತ್ತು ಅವರು ಮೈಗೂಡಿಸಿಕೊಂಡಿರುವ ಧರ್ಮ–ಸಿದ್ಧಾಂತ/ಲೋಕದೃಷ್ಟಿಗೂ ಸಂಬಂಧವಿದೆ. ಹಾಗೆಯೇ ಕಾ. ಪಿಣರಾಯಿಯವರು, ವೈಚಾರಿಕವಾಗಿ ಯೋಚಿಸಿ, ಸದ್ಯದ ಪರಿಸ್ಥಿತಿಯಲ್ಲಿ ಮುಖ್ಯ–ಅಮುಖ್ಯಗಳ ತಾರತಮ್ಯಜ್ಞಾನವನ್ನು ಹೊಂದಿ, ಅತಾರ್ಕಿಕ, ಅವೈಚಾರಿಕ, ಅಪ್ರಬುದ್ಧ, ಅಮಾನವೀಯ ಮತ್ತು ಸಂಕುಚಿತ ರಾಜಕೀಯ ಹಿತಾಸಕ್ತಿಗಳ ಕುತ್ಸಿತ ದೂಷಣೆಗಳನ್ನು ಪಕ್ಕಕ್ಕಿಟ್ಟು ಮಾನವೀಯತೆಗೆ ಒತ್ತುಕೊಡುವ ದೃಷ್ಟಿಯ ಪರಿಹಾರಕಾರ್ಯಗಳಿಗೂ ಅವರು ಮೈಗೂಡಿಸಿಕೊಂಡು ಬೆಳೆದುಬಂದಿರುವ ವೈಜ್ಞಾನಿಕ, ವೈಚಾರಿಕ ಮತ್ತು ಸಮಾಜನಿಷ್ಠ ಮಾನವೀಯತೆಗಳ ಸಿದ್ಧಾಂತ/ಲೋಕದೃಷ್ಟಿಗಳಿಗೂ ಅವಿನಾಭಾವ ಸಂಬಂಧವಿದೆ. ನಾವು 'ನಂಬುವ' ಸಿದ್ಧಾಂತ/ಲೋಕದೃಷ್ಟಿಗಳು ನಮ್ಮ ಓದು, ಮಾತು–ಚರ್ಚೆ–ವಾಗ್ವಾದಗಳಲ್ಲಿ ಮಾತ್ರ, ಬಹುಮಟ್ಟಿಗೆ ಪ್ರಜ್ಞಾಪೂರ್ವಕವಾಗಿ ಪ್ರಕಟಗೊಳ್ಳಬಹುದು. ಆದರೆ ನಾವು ಮೈಗೂಡಿಸಿಕೊಂಡಿರುವ ಸಿದ್ಧಾಂತ/ಲೋಕದೃಷ್ಟಿಗಳು ಮಾತ್ರ ಅಪ್ರಜ್ಞಾಪೂರ್ವಕಾಗಿಯೂ, ಪ್ರಜ್ಞಾಪೂರ್ವಕವಾಗಿಯೂ, ನಮ್ಮ ಆಲೋಚಿಸುವ ಕ್ರಮದಲ್ಲಿ, ನಡೆಯಲ್ಲಿ ಮತ್ತು ಮುಖ್ಯವಾಗಿ ಸಂಕಷ್ಟದ ಸಮಯದಲ್ಲಿ, ಸಣ್ಣ ಸಣ್ಣ ವಿಷಯ/ವಿವರ/ಪ್ರತಿಕ್ರಿಯೆಗಳಲ್ಲಿ ಪ್ರಜ್ಞೆಯ ವಿವಿಧ ಪಾತಳಿಗಳಿಂದ ಹೊಮ್ಮಿ ಪ್ರಕಟಗೊಳ್ಳುತ್ತವೆ. ಮಾನವೀಯ ಸಮಾಜವನ್ನು ಕಟ್ಟಬಯಸುವ ವೈಜ್ಞಾನಿಕ ಸಮಾಜವಾದವನ್ನು ಮೈಗೂಡಿಸಿಕೊಂಡವರು ನಡೆದುಕೊಳ್ಳುವ ರೀತಿಯು ಸಹಜವಾಗಿಯೇ ವ್ಯಕ್ತಿನಿಷ್ಠೆಯ ಹಿತಾಸಕ್ತಿಯಿಂದ ಬಿಡಿಸಿಕೊಂಡ, ಸಮಾಜನಿಷ್ಠೆಯ, ವೈಚಾರಿಕವಾದ ಮಾನವೀಯತೆಯ ಪ್ರಬುದ್ಧತೆಯಿಂದ ಕೂಡಿರುತ್ತದೆ.



ವೈಜ್ಞಾನಿಕ ಸಮಾಜವಾದದ ಬಗ್ಗೆ ಅರಿವಿಲ್ಲದಿರುವುದರಿಂದ, ಅಥವಾ ಅದರ ವಿರುದ್ಧದ ಪೂರ್ವಗ್ರಹದಿಂದಾಗಿ, ಅಥವಾ ಎಲ್ಲಕ್ಕಿಂತಾ ಮುಖ್ಯವಾಗಿ ವ್ಯಕ್ತಿನಿಷ್ಠವಾದ ಆಲೋಚನಾಕ್ರಮವನ್ನು ಮೈಗೂಡಿಸಿಕೊಂಡಿರುವುದರಿಂದ ಮುಖ್ಯಮಂತ್ರಿಗಳ 'ಪ್ರಬುದ್ಧತೆ'ಯನ್ನು, ಅವರ ಲೋಕದೃಷ್ಟಿಯಲ್ಲಿ, ಮತ್ತು, ಅದರೊಟ್ಟಿಗೆ ನೋಡದೆ ಅದರಿಂದ ಪ್ರತ್ಯೇಕಿಸಿ 'ವ್ಯಕ್ತಿ'ಗೆ ಆರೋಪಿಸುತ್ತಾರೆ. ಸಮಾಜದ ಸಮಷ್ಠಿ ಸ್ವರೂಪ ಮತ್ತು ವ್ಯಕ್ತೀಕರಿಸಿದ ಸಮಾಜದ ರೂಪದ (ವ್ಯಕ್ತಿಯ) ಸ್ವರೂಪಕ್ಕೂ ಇರುವ ಅವಿನಾಭಾವ ಸಂಬಂಧದ ಅರಿವಿಲ್ಲದೆ ಸಿದ್ಧಾಂತ/ ಲೋಕದೃಷ್ಟಿಗಳ ಬಗೆಗೆ ತೀರ್ಮಾನಗಳನ್ನು ಪ್ರಕಟಿಸುವ, ಎಡ–ಬಲಗಳ ಮಾನವತಾವಾದಿಗಳು ಮತ್ತು ಪ್ರಜಾಪ್ರಭುತ್ವವಾದಿಗಳಲ್ಲಿ ಸಮಾನವಾಗಿ ಕಾಣಸಿಗುವ ತೊಂದರೆ ಇದು. 'ಧರ್ಮ–ಸಿದ್ಧಾಂತಗಳಿಂದ ಬಿಡಿಸಿಕೊಂಡ' ಪ್ರಬುದ್ಧತೆ (ಅಥವಾ ಅಪ್ರಬುದ್ಧತೆ) ಎಂಬುದಿದೆಯೆ ಎಂಬ ಪ್ರಶ್ನೆ ಕುರಿತು ವಿಚಾರವಂತರ ಗಮನಸೆಳೆಯುವುದು ನನ್ನ ಈ ಪ್ರತಿಕ್ರಿಯೆಯ ಉದ್ದೇಶ.

–ವಿ.ಎನ್.ಲಕ್ಷ್ಮೀನಾರಾಯಣ, ಮೈಸೂರು





ಸೆಪ್ಟಂಬರ್ 5: ರೈತ, ಕಾರ್ಮಿಕ, ಕೃಷಿ ಕಾರ್ಮಿಕರ ಚಾರಿತ್ರಿಕ ಐಕ್ಯ ಕಾರ್ಯಾಚರಣೆ

ವರದಿ ಪುಟ 2 ಮತ್ತು 10











"ಆಕಾಶದಲ್ಲಿ ಆವರಿಸಿರುವ ಕಪ್ಪು ಮೋಡಗಳು ಮತ್ತು ಈ ಕೆಂಪು ಸಮುದ್ರ ಮೋದಿ ಸರಕಾರಕ್ಕೆ ಒಂದು ಸವಾಲೆಸೆದಿವೆ."

–ರ್‍ಯಾಲಿಯಲ್ಲಿ ಕೆಂಬಾವುಟ ಹಿಡಿದು ಸಾಗುತ್ತಿದ್ದ ಛತ್ತೀಸ್‌ಗಡದ ಒಬ್ಬ ಉಕ್ಕು ಕಾರ್ಮಿಕ















ಸೆಪ್ಟಂಬರ್ 4: ಹಿಂಸಾಚಾರ, ಭಯ, ಹಸಿವು, ನಿರುದ್ಯೋಗದ ವಿರುದ್ಧ ಹೋರಾಟ –ಮಹಿಳೆಯರ ಪಣ

ವರದಿ: ಪುಟ 2 ಮತ್ತು 10











ಸಪ್ಟಂಬರ್ 5: ರೈತ, ಕಾರ್ಮಿಕ, ಕೃಷಿ ಕಾರ್ಮಿಕರ ಚಾರಿತ್ರಿಕ ಐಕ್ಯ ಕಾರ್ಯಾಚರಣೆ

ಪುಟ 2 ರಿಂದ

ಘೋಷಣೆಗಳನ್ನು ಕೂಗುತ್ತ ಸಂಸದ್ ಮಾರ್ಗದ ವರೆಗೆ ನಡೆದರು. ಉದ್ಯೋಗ ಕೊಡಿ, ಕನಿಷ್ಟ ಕೂಲಿ ಕೊಡಿ, ಭೂಹೀನರಿಗೆ ಭೂಮಿ ಕೊಡಿ, ಬೆಳೆಗಳಿಗೆ ಯೋಗ್ಯ ಬೆಲೆ ಕೊಡಿ, ಸಾಲ ಭಾರವನ್ನು ತಗ್ಗಿಸಿ, ಬೆಲೆಯೇರಿಕೆ ತಡೆಯಿರಿ, ಗುತ್ತಿಗೆಕರಣ, ಖಾಸಗೀಕರಣ ನಿಲ್ಲಿಸಿ, ಕಾರ್ಮಿಕ ಕಾನೂನುಗಳನ್ನು ಮುಟ್ಟಬೇಡಿ, ಎಲ್ಲರಿಗೂ ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಭದ್ರತೆಯ ಘೋಷಣೆಗಳು ಅಕ್ಕಪಕ್ಕದ ಭವ್ಯ ಕಟ್ಟಡಗಳಿಂದ ಮಾರ್ದನಿಗೊಂಡವು.

ರ್‍ಯಾಲಿಯ ಕೊನೆಯಲ್ಲಿ, ಕಳೆದ ನಾಲ್ಕು ತಿಂಗಳ ಜಂಟಿ ಪ್ರಚಾರಾಂದೋಲನದಲ್ಲಿ ಮೂಡಿ ಬಂದು ಈದಿನ ಬೆಸೆದ ಐಕ್ಯತೆಯನ್ನು ಮುಂದುವರೆಸುವ ಮುಂದಿನ ದಾರಿಯನ್ನು ಈ ಮೂರೂ ಸಂಘಟನೆಗಳ ಮುಖಂಡರು ಪ್ರಕಟಿಸಿದಾಗ ಅದಕ್ಕೆ ದೊರೆತ ಭಾರೀ ಹರ್ಷೋದ್ಗಾರಗಳ ಸ್ವಾಗತ ಆಳುವ ಮಂದಿಗೆ ನೀಡಿರುವ ಎಚ್ಚರಿಕೆಯೂ ಆಗಿದೆ.

* ಸಪ್ಟಂಬರ್ 28 ರಂದು ಎಲ್ಲ ಕಾರ್ಮಿಕ ಸಂಘಟನೆಗಳ ಜಂಟಿ ಸಮಾವೇಶ ನಡೆಯಲಿದೆ. ಅದು ಮುಂದಿನ ವರ್ಷದ ಆರಂಭದಲ್ಲಿ ಎರಡು ದಿನಗಳ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡುವ ಸಂಭವವಿದೆ.
* ಅದಕ್ಕೆ ಮೊದಲು ರೈತರು ಮತ್ತು ಇತರ ಸಾಮೂಹಿಕ ಸಂಘಟನೆಗಳ ಒಂದು ಜಂಟಿ ವೇದಿಕೆ ಒಂದು 'ಲಾಂಗ್ ಮಾರ್ಚ್'ನ ಕರೆ ನೀಡಿದೆ. ಈ ದೀರ್ಘ ನಡಿಗೆಯ ಕೊನೆಯಲ್ಲಿ ನವಂಬರ್ 28 ರಿಂದ 30 ರ ವರೆಗೆ ಈ ಸಂಘಟನೆಗಳು ದಿಲ್ಲಿಯಲ್ಲಿ ಮಹಾಧರಣಿ ನಡೆಸಲು ನಿರ್ಧರಿಸಿವೆ.

ಎಐಕೆಎಸ್, ಸಿಐಟಿಯು ಮತ್ತು ಎಐಎಡಬ್ಲ್ಯುಯುನ ಅಖಿಲ ಭಾರತ ಅಧ್ಯಕ್ಷರನ್ನೊಳಗೊಂಡ ಅಧ್ಯಕ್ಷ ಮಂಡಳಿ ರ್‍ಯಾಲಿ ನಂತರದ ಸಭೆಯನ್ನು ನಡೆಸಿಕೊಟ್ಟಿತು. ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೆನ್, ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ, ಎಐಎಡಬ್ಲ್ಯುಯು ಪ್ರಧಾನ ಕಾರ್ಯದರ್ಶಿ ಎ.ವಿಜಯರಾಘವನ್, ಈ ಸಂಘಟನೆಗಳಿಗೆ ಸಂಯೋಜಿತವಾಗಿರುವ ಅಖಿಲ ಭಾರತ ಸಂಘಟನೆಗಳ ಮುಖಂಡರು, ಕೇಂದ್ರ ಸರಕಾರೀ ನೌಕರರ ಮಹಾಒಕ್ಕೂಟ, ವಿಮಾ, ಬ್ಯಾಂಕ್, ಬಿಎಸ್‌ಎನ್‌ಎಲ್, ನೌಕರರ ಸೋದರ ಸಂಘಟನೆಗಳು, ಶಿಕ್ಷಕರು ಮತ್ತಿತರ ವಿಭಾಗಗಳ ಸಂಘಟನೆಗಳ ಮುಖಂಡರು ಸೇರಿದಂತೆ 30 ಮುಖಂಡರು ಮಾತನಾಡಿದರು.

ಈ ಜಂಟಿ ಹೋರಾಟ ಮುಂದುವರೆಯುತ್ತದೆ, ನಾವು ಮೋದಿ ಸರಕಾರದ ಅಂತ್ಯವನ್ನು ಕಾಣಲಿದ್ದೇವೆ ಎಂದರು ಎಐಕೆಎಸ್ ಅಧ್ಯಕ್ಷರಾದ ಅಶೋಕ ಧವಳೆ.

1990ರ ದಶಕದಿಂದ 4ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಳೆದ ನಾಲ್ಕು ವರ್ಷಗಳ ಮೋದಿ ಆಳ್ವಿಕೆಯಲ್ಲಿ ರೈತರ ಆತ್ಮಹತ್ಯೆಗಳಲ್ಲಿ 42% ಹೆಚ್ಚಳವಾಗಿದೆ ಎಂದು ಮತ್ತೊಮ್ಮೆ ನೆನಪಿಸಿದ ಅವರು "ಇಂದು ಗೌರಿ ಲಂಕೇಶ್ ಅವರ ಸಾವಿನ ಮೊದಲ ವಾರ್ಷಿಕ. ಅವರನ್ನು ಮತ್ತು ಇತರ ಮುಖಂಡರನ್ನು ಸನಾತನ ಸಂಸ್ಥಾ ಹತ್ಯೆ ಮಾಡಿದೆ. ಇದು ಮೊದಲ ಸಲವೇನಲ್ಲ. ಅವರು ಗಾಂಧೀಜಿಯನ್ನೂ ಕೊಂದಿದ್ದಾರೆ. ನಾವು ಇತಿಹಾಸವನ್ನು ಮರೆಯಬಾರದು" ಎಂದರು.

ಸಿಐಟಿಯು ಅಧ್ಯಕ್ಷರಾದ ಡಾ.ಕೆ.ಹೇಮಲತಾ ರೈತ–ಕಾರ್ಮಿಕ ಐಕ್ಯತೆಯ ಮಹತ್ವಕ್ಕೆ ಒತ್ತು ನೀಡಿ ಮಾತಾಡಿದರು. ಜನಗಳ ಐಕ್ಯೆಯನ್ನು ಒಡೆಯಲು ಸರಕಾರ ಧರ್ಮ ಮತ್ತು ಜಾತಿಗಳನ್ನು ಬಳಸಿ ವಿಷ ಹರಡುತ್ತಿದೆ ಎಂದರು. ದೇಶದ ಅಮೂಲ್ಯ ಸಂಪನ್ಮೂಲಗಳನ್ನು ಮತ್ತು ಆಸ್ತಿಗಳನ್ನು ಅಗ್ಗ ದರಗಳಲ್ಲಿ ಮಾರುತ್ತಿರುವ ಸರಕಾರ ಮತ್ತು ಜನಗಳ ರಕ್ತಪಾತಕ್ಕೆ ಪ್ರೋತ್ಸಾಹ ನೀಡುತ್ತಿರುವ ಬಿಜೆಪಿ/ಆರೆಸ್ಸೆಸ್ ನಿಜವಾದ ದೇಶದ್ರೋಹಿಗಳು, ರಾಷ್ಟ್ರ–ವಿರೋಧಿಗಳಾಗಿದ್ದರೂ, ಸರಕಾರದ ಧೋರಣೆಗಳನ್ನು ವಿಮರ್ಶಿಸುವವರನ್ನೇ ರಾಷ್ಟ್ರ–ವಿರೋಧಿಗಳು ಎಂದು ಹಣೆಪಟ್ಟಿ ಹಚ್ಚುತ್ತಿವೆ ಎಂದು ಅವರು ಟೀಕಿಸದರು.

ಎಐಎಡಬ್ಲ್ಯುಯು ಅಧ್ಯಕ್ಷ ತಿರುನಾಕ್ಕರಸು ಕೃಷಿ ಕೂಲಿಕಾರರ ಹೀನಾಯ ಪರಿಸ್ಥಿತಿಗಳ ಬಗ್ಗೆ ಮಾತನಾಡಿದರು. ಇವರ ಸಂಖ್ಯೆ 15 ಕೋಟಿಗೇರಿದೆ. ಅವರಿಗೆ ಕೂಲಿ ಸಿಗುವುದು ವರ್ಷಕ್ಕೆ 30–40 ದಿನಗಳು ಮಾತ್ರ. ಮನರೇಗಕ್ಕೆ ನೀಡಬೇಕಾದ ಹಣದಲ್ಲಿ 57% ಹಿಡಿದಿಟ್ಟುಕೊಂಡಿರುವುದರಿಂದ ಅದರ ಅಡಿಯಲ್ಲಿ ಮಾಡಿದ ಕೆಲಸಕ್ಕೆ ಕೂಲಿ ಪಡೆಯಲು ಐದಾರು ತಿಂಗಳು ಕಾಯಬೇಕು, ಸಾಲದ್ದಕ್ಕೆ ಲಕ್ಷಾಂತರ ಕೂಲಿಕಾರರನ್ನು ಸಾಮಾಜಿಕ ಕಲ್ಯಾಣ ಯೋಜನೆಗಳಿಂದ, ರೇಶನ್ ವ್ಯವಸ್ಥೆಯಿಂದ ಹೊರಗಿಡಲಾಗಿದೆ ಎಂದು ಅವರು ಖೇದ ವ್ಯಕ್ತ ಪಡಿಸುತ್ತ "ಮೋದಿ ಎರಡನೇ ಬಾರಿ ಅಧಿಕಾರಕ್ಕೆ ಬರಲು ಬಿಡಲಾಗದು. ನಮಗೆ ಏನೂ ಮಾಡದ ಮೋದಿಯನ್ನು ನಾವು ಸೋಲಿಸುತ್ತೇವೆ" ಎಂದು ಸಾರಿದರು.

ತಪನ್ ಸೆನ್ ನವ–ಉದರವಾದಿ ಧೋರಣೆಗಳು ಎಲ್ಲ ದುಡಿಯುವ ವರ್ಗಗಳ ಜನಗಳ ಬದುಕನ್ನು ನಾಶಮಾಡುತ್ತಿರುವುದರಿಂದ ಅವನ್ನು ಎಲ್ಲರೂ ಒಟ್ಟಾಗಿಯೇ ಪ್ರತಿರೋಧಿಸಬೇಕಾಗಿದೆ ಎಂದರು. ಈ ಜಂಟಿ ಹೋರಾಟಗಳನ್ನು ಕೂಡಲೇ ಬುಡಮಟ್ಟಕ್ಕೆ ಒಯ್ಯಬೇಕು. ಮೋದಿ ಸರಕಾರವನ್ನು ಸೋಲಿಸುವುದು ತಕ್ಷಣದ ಅಗತ್ಯವೆಂಬುದೇನೋ ನಿಜ. ಆದರೆ ಅದರಿಂದಲೇ ಜನ–ವಿರೋಧಿ ಧೋರಣೆಗಳು ನಿಲ್ಲುವುದಿಲ್ಲ. ಇದಕ್ಕೆ ರೈತರ ಮತ್ತು ಕಾರ್ಮಿಕರ ಜಂಟಿ ಹೋರಾಟ ಅತ್ಯಗತ್ಯ, ಬಂಡವಾಳಶಾಹಿ ವ್ಯವಸ್ಥೆಯಲ್ಲೇ ಅಂತರ್ಗತವಾಗಿರುವ ಶೋಷಣೆಯನ್ನು ಕೊನೆಗೊಳಿಸಲೂ ಇದು ಅಗತ್ಯ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿಗಳು ಹೇಳಿದರು.

ಕೊನೆಯಲ್ಲಿ ಮಾತಾಡಿದ ರಾಜಸ್ಥಾನದ ಹಿರಿಯ ರೈತ ಮುಖಂಡ, ಮತ್ತು ಎಐಕೆಎಸ್ ಉಪಾಧ್ಯಕ್ಷ ಆಮ್ರ ರಾಮ್ "ಈ ರ್‍ಯಾಲಿ ರೈತರು, ಕಾರ್ಮಿಕರು ಮತ್ತು ಕೃಷಿ ಕೂಲಿಕಾರರ ಐಕ್ಯತೆಯಲ್ಲಿ ಒಂದು ಚಾರಿತ್ರಿಕ ಕ್ಷಣ, ಇದು ಮೋದಿ ಆಳ್ವಿಕೆಗೆ ಒಂದು ಸವಾಲೊಡ್ಡಿದೆ" ಎಂದರು.

ರ್‍ಯಾಲಿಯಲ್ಲಿ ಕೆಂಬಾವುಟ ಹಿಡಿದು ಸಾಗುತ್ತಿದ್ದ ಛತ್ತೀಸ್‌ಗಡದ ಒಬ್ಬ ಉಕ್ಕು ಕಾರ್ಮಿಕ ಉದ್ಗರಿಸಿದಂತೆ "ಆಕಾಶದಲ್ಲಿ ಆವರಿಸಿರುವ ಕಪ್ಪು ಮೋಡಗಳು ಮತ್ತು ಈ ಕೆಂಪು ಸಮುದ್ರ ಮೋದಿ ಸರಕಾರಕ್ಕೆ ಒಂದು ಸವಾಲೆಸೆದಿವೆ."

ಮಳೆ ಅಡ್ಡಿ ಪಡಿಸಿದರೂ, ಸಿಐಟಿಯು ಕಾರ್ಯಕರ್ತರು ಹಲವು ಶಿಬಿರಗಳನ್ನು ನಿರ್ಮಿಸಿ ದಿಲ್ಲಿ ರ್‍ಯಾಲಿಗೆ ಬರುವವರಿಗೆ ಸಾಧ್ಯವಾದಷ್ಟು ಅನುಕೂಲ ಕಲ್ಪಿಸಲು ಪ್ರಯತ್ನಿಸಿದರು..





ಸಪ್ಟಂಬರ್ 4: ಹಿಂಸಾಚಾರ, ಭಯ, ಹಸಿವು, ನಿರುದ್ಯೋಗದ ವಿರುದ್ಧ ಹೋರಾಟ–ಮಹಿಳೆಯರ ಪಣ



ಪುಟ 2 ರಿಂದ

ಅತ್ಯಾಚಾರ ಮುಂದುವರಿದರೆ, ಮುಂದಿನ ಬಾರಿ ಮೋದಿಗೆ ಸೋಲು) ಎಂದು ಎಚ್ಚರಿಸಿದರು.

ಕಥುವಾದಲ್ಲಿ ಅತ್ಯಾಚಾರಕ್ಕೆ ಒಳಗಾದ ಬಾಲಕಿಯ ಕುಟುಂಬದವರ ಪರವಾಗಿ ನ್ಯಾಯಾಂಗ ಹೋರಾಟ ನಡೆಸುತ್ತಿರುವ ದೀಪಿಕಾ ರಾಜಾವತ್ ಈ ಕೇಸನ್ನು ಎತ್ತಿಕೊಂಡಿದ್ದರಿಮದಾಗಿ ತಮಗೆ ವೃತ್ತಿಯಲ್ಲಿ ಮತ್ತು ರಜಕೀಯವಾಗಿ ಎದುರಿಸಬೇಕಾಗಿ ಬರುತ್ತಿರುವ ಕಿರುಕುಳಗಳ ಬಗ್ಗೆ ಮಾತಾಡಿದರು. ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುವುದೇ ರಾಷ್ಟ್ರ–ವಿರೋಧಿ ಕೃತ್ಯ ಎನ್ನುವ ಹೊಸ ಪ್ರವೃತ್ತಿ ಆರಂಭವಾಗಿದೆ, ಅದರ ವಿರುದ್ಧ ಐಕ್ಯ ದನಿ ಎತ್ತಬೇಕು ಎಂದರು.

ಉತ್ತರಪ್ರದೇಶದ ಉನ್ನಾವ್‌ನಲ್ಲಿ ಬಿಜೆಪಿ ಶಾಸಕನ ಅತ್ಯಾಚಾರಕ್ಕೆ ಬಲಿಯಾದ ಬಾಲಕಿಯ ಚಿಕ್ಕಪ್ಪ ಮತ್ತು ಆಕೆಗೆ ಮತ್ತು ಆಕೆಯ ತಂದೆಗೆ ನ್ಯಾಯ ದೊರಕಿಸಲು ಅರ್ಜಿ ಹಾಕಿರುವ ಮಹೇಶ ಸಿಂಗ್ ಮತ್ತಿ ತಾವುಗಳು ಈಗ ಭಯದ ವಾತಾವರನದಲ್ಲಿ ಇರುವುದನ್ನು ತಿಳಿಸಿದರು.

ಹರ್‍ಯಾಣದಲ್ಲಿ ಮರ್ಯಾದಾ ಹತ್ಯೆಗೆ ಒಳಗಾದ ಮಹಿಳೆಯ ಅತ್ತೆ ಸರೋಜಾ ಸಾಮಾಜಿಕ ಕಂದಾಚಾರಗಳು ಮತ್ತು ಅದರ ಜೊತೆಗೆ ಬರುವ ಹಿಂಸಾಚಾರಗಳ ಬಗ್ಗೆ ಮಾತಾಡಿದರು.

ಪಶ್ಚಿಮ ಬಂಗಾಲದ ಸ್ವಪ್ನಾ ಘೋಷ್ ಮತ್ತು ತ್ರಿಪುರಾದ ವಿನಿತಾ ಚೌಧರಿ ರಾಜಕೀಯ ಹಿಂಸಾಚಾರಕ್ಕೆ ತುತ್ತಾಗುತ್ತಿರುವ ಮಹಿಳೆಯರ ಬಗ್ಗೆ ಮಾತಾಡಿದರು.

ಕುಟುಂಬದ ಆಹಾರ ಭದ್ರತೆಗೆಗಾಗಿ ನಡೆಸಬೇಕಾಗಿ ಬಂದಿರುವ ಹೋರಾಟಗಳ ಬಗ್ಗೆ ಮಹಾರಾಷ್ಟ್ರದ ಲಹಾಣಿ ದೌದಾ ಮಾತಾಡಿದರೆ, ಹರ್‍ಯಾಣದ ಅಂಗನವಾಡಿ ಮಾತೆಯರ ಗುಂಪಿನ ಸಂತ್ರೊ, .ದಿಲ್ಲಿಯ ಸಮೀಪದ ನೋಯ್ಡಾದಿಂದ ಬಂದ ಮನಸೆಳಸದ ಮಹಿಳೆ ಪೂನಂ ಮತ್ತು ಬಿಹಾರದ ಮನರೇಗ ಕಾರ್ಮಿಕಳು ಕೆಲಸದ ಹಕ್ಕಿಗಾಗಿ ನಡೆಸಬೇಕಾದ ಹೋರಾಟಗಳ ಬಗ್ಗೆ ಹೇಳಿದರು

ಎಐಡಿಡಬ್ಲ್ಯುಎ ಉಪಾಧ್ಯಕ್ಷೆ ಮತ್ತು ಮಾಜಿ ಸಂಸದೆ ಸುಭಾಷಿಣಿ ಅಲಿಯವರು ಮಾತಾಡುತ್ತ "ಪಕೋಡಾ ಮಾರಿ ಎನ್ನುತ್ತಿದೆ ಈ ಸರಕಾರ. ನಾವು ಹೇಳುತ್ತಿದ್ದೇವೆ–ನಿಮ್ಮನ್ನು ಅಧಿಕಾರಕ್ಕೆ ತಂದದ್ದು ಈ ಸಲಹೆ ಕೊಡಲಿಕ್ಕಲ್ಲ, ಉದ್ಯೋಗಗಳನ್ನು ನಿರ್ಮಿಸಲಿಕ್ಕೆ. ನಾವು ಪಕೋಡಾವನ್ನೂ ಖಂಡಿತಾ ಮಾರುತ್ತೇವೆ, ಆದರೆ ನಿಮ್ಮನ್ನು ಅಧಿಕಾರದಿಂದ ಹೊರಗೆಸೆದ ನಂತರ" ಎಂದು ಮಾರ್ಮಿಕವಾಗಿ ಎಚ್ಚರಿಸಿದರು.



ಎಐಡಿಡಬ್ಲ್ಯುಎ ಪ್ರಧಾನ ಕಾರ್ಯದರ್ಶಿ ಮರಿಯಮ್ ಧವಳೆ ರ್‍ಯಾಲಿಯ ನಿರ್ಣಯವನ್ನು ಮಂಡಿಸುತ್ತ ಸಮಯಬದ್ಧ ವಿಚಾರಣೆ ಮತ್ತು ಅಪರಾಧಿಗೆ ಖಂಡಿತಾ ಶಿಕ್ಷೆಯಾಗುವಂತೆ ಕ್ರಿಮಿನಲ್ ನ್ಯಾಯವ್ಯವಸ್ಥೆಯನ್ನು ಸುಧಾರಿಸಬೇಕಾದ ಅಗತ್ಯವಿದೆ ಎಂದರು.

ಮಹಿಳೆಯರ ಸಂವಿಧಾನಿಕ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳಿಗೆ ರಕ್ಷಣೆ ಸಿಗಬೇಕು, ಮರ್ಯಾದಾ ಅಪರಾಧಗಳನ್ನು ತಡೆಯಲು ಒಂದು ಸಮಗ್ರ ಕಾನೂನು ತುರ್ತಾಗಿ ಬರಬೇಕು ಎಂದು ಈ ನಿರ್ಣಯ ಆಗ್ರಹಿಸಿದೆ.

ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕಳಚಿಹಾಕುವ ಬಿಜೆಪಿ ಸರಕಾರಗಳ ಪ್ರಯತ್ನಗಳನ್ನು ಮತ್ತು 'ಆಧಾರ್ ಜೋಡಣೆಯಿಂದ ಆಹಾರಭದ್ರತೆಯ ಅಗತ್ಯವಿರುವ ಕುಟುಂಬಗಳಿಗೆ ರೇಶನ್ ನಿರಾಕರಿಸುವುದನ್ನು ಪ್ರತಿರೋಧಿಸಲು ರ್‍ಯಾಲಿ ನಿರ್ಧರಿಸಿತು. ರೇಶನ್ ವ್ಯವಸ್ಥೆಯಿಂದ ಹೊರಹಾಕುವ ಇಂತಹ ಕ್ರಮಗಳನ್ನೆಲ್ಲ ತಕ್ಷಣವೇ ನಿಲ್ಲಿಸಬೇಕು, ಅದರ ಬದಲಿಗೆ, ಆಹಾರದ ಹಕ್ಕು ಪ್ರತಿ ನಾಗರಿಕರ ಮೂಲಭೂತ ಹಕ್ಕು ಆಗಬೇಕು ಎಂದು ನಿರ್ಣಯ ಆಗ್ರಹಿಸಿದೆ.,

ಅಪೌಷ್ಟಿಕತೆಯನ್ನು ಹೋಗಲಾಡಿಸುವ ಉದ್ದೇಶದ ಸಾಮಾಜಿಕ ಕಲ್ಯಾಣದ ಕಾರ್ಯಕ್ರಮಗಳಿಗೆ ಹೆಚ್ಚು ಹಣ ಒದಗಿಸಬೇಕು, ಈ ಕಾರ್ಯಕ್ರಮಗಳ ಜಾರಿಯಲ್ಲಿ ತೊಡಗಿರುವ ಅಂಗನವಾಡಿ, ಮಧ್ಯಾಹ್ನದ ಊಟ ಮತ್ತು ಆಶಾ ಕೆಲಸಗಾರರನ್ನು ಸರಕಾರೀ ನೌಕರರೆಂದು ಪರಿಗಣಿಸಬೇಕು ಎಂದು ನಿರ್ಣಯ ಆಗ್ರಹಿಸಿದೆ.

ಈ ಸರಕಾರದ ಅಡಿಯಲ್ಲಿ ಉದ್ಯೋಗ ನಿರ್ಮಾಣ ಹೆಚ್ಚಿದೆಯೆಂಬುದು ಶುದ್ಧ ಸುಳ್ಳು, ಬದಲಾಗಿ ಮಹಿಳೆಯರ ಉದ್ಯೋಗದಲ್ಲಿ ತೀವ್ರ ಇಳಿಕೆಯಾಗಿದೆ, ಅದರಿಂದಾಗಿ ಅವರು ಅತ್ಯಂತ ಹೀನ ಶೋಷಣೆ ಮತ್ತು ಹಿಂಸಾಚಾರಕ್ಕೆ ಒಳಗಾಗಿದ್ದಾರೆ ಎಂದು ನಿರ್ಣಯ ಹೇಳಿದೆ.

"ನಾವು, ಈ ದೇಶದ ಮಹಿಳೆಯರು, ಇದರ ಆರ್ಥಿಕ ಅಭಿವೃದ್ಧಿಯಲ್ಲಿ ಸಮಾನ ಭಾಗೀದಾರರು..... ಮಹಿಳೆಯರ ಉದ್ಧಾರಕ್ಕೆ ಮಹತ್ವದ ಪೂರ್ವಶರತ್ತಾಗಿ ನಾವು ಉದ್ಯೋಗ ಮತ್ತು ಕನಿಷ್ಟ ವೇತನಗಳನ್ನು ಆಗ್ರಹಿಸುತ್ತೇವೆ" ಎಂದಿರುವ ಈ ನಿರ್ಣಯ ಈ ದೇಶದ ಮಹಿಳೆಯರು ಮತ್ತು ಜನತೆಗೆ ವಿಶ್ವಾಸಘಾತ ಬಗೆದು ಅವರನ್ನುಒಡೆಯುವವರು ಅದರ ದುಷ್ಪರಿಣಾಮಗಳನ್ನು ಎದುರಿಸಲೇ ಬೇಕು ಎಂದು ಸಾರಿದೆ. **"ನಾವು, ಭಾರತದ ಮಹಿಳೆಯರು, ಈ ಪರಿಸ್ಥಿತಿಯನ್ನು ಎದುರಿಸಲು ಮತ್ತು ಬದಲಿಸಲು ಇಲ್ಲಿಗೆ ಬಂದಿದ್ದೇವೆ. ಬಿಜೆಪಿ/ಆರೆಸ್ಸೆಸ್ ಮತ್ತು ಅವರ ದ್ವೇಷ ಪಡೆಗಳು ಹರಡಿಸುತ್ತಿರುವ ಭೀತಿಯ ಸಂಸ್ಕೃತಿಯಿಂದಾಗಿ ಖಂಡಿತವಾಗಿ 'ಬಾಯಿ ಮುಚ್ಚಿಕೊಳ್ಳುವುದಿಲ್ಲ. ನಾವು, ಸಂವಿಧಾನದಲ್ಲಿ ಪ್ರತಿಷ್ಠಾಪಿತಗೊಂಡಿರುವ ಸಮಾನತೆ ಮತ್ತು ಮೂಲಭೂತ ಹಕ್ಕುಗಳನ್ನು ಕೀಳಬಲ್ಲ ಒಂದು ಭವಿಷ್ಯದತ್ತ ಮುಂದೆ ಸಾಗುತ್ತೇವೆ"** ಎಂದು ಈ ನಿರ್ಣಯ ಮೋದಿ ಸರಕಾರಕ್ಕೆ ಎಚ್ಚರಿಕೆ ನೀಡಿದೆ. ●

ಶಿಕ್ಷಣ ಮತ್ತು ಸಂಘಟನೆಗಳಿಂದ ಆದಿವಾಸಿಗಳ ಅಭಿವೃದ್ಧಿ ಸಾಧ್ಯ: ಗೌರಿ ಕೆಂಜೂರು ಅಭಿಮತ

ಆದಿವಾಸಿಗಳು ಆದಿವಾಸಿತನವನ್ನು ಉಳಿಸಿಕೊಳ್ಳುವಲ್ಲಿ ಶಿಕ್ಷಣ, ಸಂಘಟನೆ ಮತ್ತು ಚಳುವಳಿಗಳು ಮಹತ್ವದ ಪಾತ್ರ ವಹಿಸುತ್ತದೆ. ನಮ್ಮ ಸಂಸ್ಕೃತಿ, ಆಚಾರ-ವಿಚಾರಗಳ ಅನನ್ಯತೆಯನ್ನು ಉಳಿಸಿಕೊಂಡು ಬದುಕಿನ ಮೌಲ್ಯಗಳನ್ನು ಪಾಲಿಸಿದಾಗ ಆದಿವಾಸಿತನ ಉಳಿಯುತ್ತದೆ. ಹೀಗೆ ಸಂಘಟನೆ ಎಂಬುದು ಸ್ವಾಭಿಮಾನದ ಸಂಘಟನೆಯಾದಗ ಮಾತ್ರ ಆದಿವಾಸಿ ಸಮುದಾಯಗಳು ದಿಕ್ಕು ದೆಸೆ ಕಂಡುಕೊಳ್ಳಲು ಸಾಧ್ಯ ಎಂದು ಕರ್ನಾಟಕ ಸರ್ಕಾರದ ರಾಜ್ಯ ಅರಣ್ಯ ಹಕ್ಕು ಉಸ್ತುವಾರಿ ಸಮಿತಿಯ ಸದಸ್ಯರಾಗಿರುವ ಹೋರಾಟಗಾರ್ತಿ ಶ್ರೀಮತಿ ಗೌರಿ ಕೆಂಜೂರು ರವರು ಅಭಿಪ್ರಾಯ ಪಟ್ಟರು. ಅವರು ಹೊಸನಗರ ತಾಲ್ಲೂಕು ನಿಟ್ಟೂರು ಕುರೇಹಳ್ಳಿ ಸಮುದಾಯ ಭವನದಲ್ಲಿ ಶಿವಮೊಗ್ಗ ಜಿಲ್ಲಾ ಮಟ್ಟದ ವಿಶ್ವ ಆದಿವಾಸಿ ದಿನಾಚರಣೆ ಹಾಗೂ ಹಕ್ಕೊತ್ತಾಯ ಸಮಾವೇಶವನ್ನು ಇದೇ ಆಗಸ್ಟ್ 28, 2018 ರಂದು ಉದ್ಘಾಟಿಸಿ ಮಾತನಾಡಿದರು.

ಬದಲಾಗುತ್ತಿರುವ ಸಮಾಜಿಕ ಸಂದರ್ಭದಲ್ಲಿ ನಮ್ಮ ಬುಡಕಟ್ಟು ಸಮುದಾಯಗಳಿಗೆ ಭೂಮಿ ಹಕ್ಕು ಆತ್ಯಂತ ಮಹತ್ವದ್ದಾಗಿದೆ. ಅರಣ್ಯ ಹಕ್ಕುಗಳ ಕಾಯ್ದೆ-2006 ರ ಪ್ರಕಾರ ಭೂಮಿಯ ಹಕ್ಕು. ಪಾರಂಪರಿಕ ಸಮುದಾಯ ಹಕ್ಕುಗಳನ್ನು ಈ ಕಾಯ್ದೆ ನೀಡಿದೆ. ಆದರೆ ಇದರ ಅನುಷ್ಟಾನ ಅಷ್ಟಾಗಿ ಆಗುತ್ತಿಲ್ಲ. ನೀಡಿರುವ ಅಲ್ಪ ಸ್ವಲ್ಪ ಭೂಮಿಗೆ ಪಟ್ಟಾ ನೀಡುತ್ತಿಲ್ಲ. ಈ ಭೂಮಿ ಕಂದಾಯ ಭೂಮಿಗಾಗಿ ಆದಿವಾಸಿಗಳ ಹೆಸರಿಗೆ ಪಟ್ಟಾ ದೊರೆತಲ್ಲಿ ಮಾತ್ರ ಅದರ ಆಧಾರದಲ್ಲಿ ಸಾಲ ಸೌಲಭ್ಯ ದೊರೆತು ಬದುಕಿಗೆ ಭದ್ರತೆ ಸಿಗುತ್ತದೆ. ಪ್ರಗತಿ ಹೊಂದಲು ಸಾಧ್ಯವಾಗುವುದು. ಈ ದಿಕ್ಕಿನಲ್ಲಿ ಸರ್ಕಾರದ ಆಡಳಿತ ವ್ಯವಸ್ಥೆ ಕ್ರಮ ವಹಿಸಬೇಕೆಂದು ಆಗ್ರಹಿಸಿದರು. ಆದಿವಾಸಿಗಳು ಮುಖ್ಯವಾಹಿನಿಗೆ ಬರಬೇಕು ಎಂಬ ಕೆಲವರ ಮಾತುಗಳನ್ನು ತೀಕ್ಷ್ಣವಾಗಿ ಟೀಕಿಸಿದರು. 'ಆದಿವಾಸಿಗಳು ಎಂದರೆ ಬುದ್ದಿ ಇಲ್ಲದವರು ಎಂದರ್ಥವೇ? ಮುಂದುವರಿದವರು ಎಂದು ಕೊಳ್ಳುವವರು ತಾರತಮ್ಯದ ದೃಷ್ಟಿಯನ್ನು ಬದಲಾಯಿಸಿಕೊಳ್ಳಬೇಕು. ಎಂದು ನುಡಿದರು.

ಎಲ್ಲಾ ಆದಿವಾಸಿ ಸಮುದಾಯಗಳು ಒಂದುಗೂಡುತ್ತಾ ಸಮುದಾಯದ, ಸಮಾಜದ ಒಳಿತಿಗಾಗಿ ಹೋರಾಡುತ್ತಾ ಮುಂದೆ ಸಾಗಿದಾಗಲೇ ಬದುಕು ಹಸನಾಗಲು ಸಾಧ್ಯ. ಹೋರಾಟವೆಂಬುದು ಸಮುದಾಯಗಳ ನಡುವಿನಿಂದಲೇ ಮೂಡಿ ಬರಬೇಕು ಎಂದು ಆಶಿಸಿದರು. ಪಂಚಾಯತ್ ಮಟ್ಟದಲ್ಲಿ ಆದಿವಾಸಿಗಳಿಗಾಗಿ ಕ್ರಿಯಾಯೋಜನೆ ರೂಪಿಸುವುದು ಅತ್ಯಂತ ಅಗತ್ಯ ಎಂದು ಪ್ರತಿಪಾದಿಸಿದರು.

'ವಿಶ್ವ ಆದಿವಾಸಿ ದಿನ'ದ ಮಹತ್ವದ ಕುರಿತು ವಿಚಾರ ಮಂಡಿಸಿ ಮಾತನಾಡಿದ ಮುಖ್ಯ ಅತಿಥಿ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕರಾದ ಎಸ್. ವೈ. ಗುರುಶಾಂತ್ ರವರು ಜಗತ್ತಿಲ್ಲಾ ಎಲ್ಲಾ ದೇಶಗಳು ಆದಿವಾಸಿ ಬುಡಕಟ್ಟು ಸಮುದಾಯಗಳ ಅನನ್ಯ ಕೊಡುಗೆಗಳನ್ನು ಸ್ಮರಿಸಿ, ಗೌರವಿಸಿ, ಇಡೀ ದೇಶ-ಸಮಾಜ ಆದಿವಾಸಿಗಳೊಂದಿಗೆ ಇದೆ ಎಂಬ ಗಟ್ಟಿ ಸಂದೇಶ ನೀಡುವ ದೊಡ್ಡ ಉದ್ದೇಶವನ್ನು ವಿಶ್ವಸಂಸ್ಥೆಯ ಈ ದಿನಾಚರಣೆ ಹೊಂದಿದೆ ಎಂದು ನುಡಿದರು.

ಆದಿವಾಸಿ ಸಮುದಾಯಗಳು ನಮ್ಮ ನಾಗರೀಕತೆಯ ಮೂಲ ಅಡಿಪಾಯ ಎಂಬುದನ್ನು ಯಾರೂ ಮರೆಯಬಾರದು. ಇಂತಹ ಸಮುದಾಯಗಳ ಶ್ರಮ ಮತ್ತು ಜ್ಞಾನದ ವಿಕಾಸದಲ್ಲೇ ಸಮಾಜ ಬೆಳೆದು ಬಂದಿದೆ. ಅತ್ಯಂತ ವಿಷಾದದ



ಸಂಗತಿಯೆಂದರೆ ಇಂತಹ ಅನೇಕ ಆದಿವಾಸಿ ಸಮುದಾಯಗಳು ಅಳಿವಿನಂಚಿಗೆ ಸಾಗುತ್ತಿವೆ. ಬದುಕಿಗೆ ಭದ್ರನೆಲೆಯಿಲ್ಲದೇ, ಅನಾರೋಗ್ಯ, ಅಪೌಷ್ಠಿಕತೆ, ಅತ್ರಂತ ಜೀವನ ಸ್ಥಿತಿ ಸದಾ ಅವರನ್ನು ಕಾಡುತ್ತಿದೆ. ಆದಿವಾಸಿಗಳ ರಕ್ಷಣೆಗಾಗಿ ರೂಪುಗೊಂಡಿರುವ ಸಂವಿಧಾನದ ಭರವಸೆಗಳು, ಕಾಯ್ದೆಗಳ ಅನುಷ್ಠಾನ ತೀವ್ರ ಅತೃಪ್ತಿಕರ. ಅರಣ್ಯ ಹಕ್ಕುಗಳ ಕಾಯ್ದೆಯು ರಾಜ್ಯದಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳ್ಳದೆ ಭೂಮಿ ಮತ್ತು ಸಮುದಾಯಗಳ ಹಕ್ಕಿನಿಂದ ವಂಚಿಸಲಾಗುತ್ತಿದೆ. ಇಂತಹ ಮೂಲಭೂತ ಹಕ್ಕುಗಳ ನಿರಾಕರಣೆ. ದುಸ್ಥಿತಿಯ ಬಗ್ಗೆ ಮುಖ್ಯಮಂತ್ರಿಗಳ ಗಮನ ಸೆಳೆದಿದ್ದು ಪರಿಹ್ರ ನೀಡುವ ಭರವಸೆ ದೊರೆತಿದೆ ಕಾದು ನೋಡಬೇಕಿದೆ ಎಂದರು.

ಆದಿವಾಸಿಗಳ ಸಂಘ ಕಟ್ಟಿಕೊಂಡು ಅವರ ಹಕ್ಕುಗಳಿಗೆ ಹೋರಾಡುವುದರಿಂದ ಯಾರೂ ಆತಂಕ ಪಡುವ ಅಗತ್ಯವಿಲ್ಲ. ಆದಿವಾಸಿ ಸಂಘವು ಇಡೀ ಸಮಾಜದ ಎಲ್ಲಾ ವಿಭಾಗಗಳ ಜೊತೆಗೆ ಸೌಹಾರ್ದ ಸಂಬಂಧ ಬಯಸುತ್ತದೆ. ಅನ್ಯಾಯವಾದಾಗ ಹೋರಾಡುವುದು ಅನಿವಾರ್ಯ ಅಷ್ಟೇ. ಆದಿವಾಸಿ ಸಮುದಾಯ ಪ್ರಗತಿ ಹೊಂದಿದರೆ ಸಮಾಜದಲ್ಲಿ ಸೌಹಾರ್ದತೆ, ಸಮನ್ವಯ ಬಲಗೊಳ್ಳುವುವು ಎಂದು ನುಡಿದರು. ಆದಿವಾಸಿಗಳು ಅವರ ಹಕ್ಕಿಗಾಗಿ ಸಂಘಟಿತರಾಗಿ, ಒಗ್ಗಟ್ಟಿನಿಂದ ಹೋರಾಟ ನಡೆಸಬೇಕು ಎಂದು ಕರೆ ನೀಡಿದರು. ಮತ್ತೊಬ್ಬ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸೋಲಿಗ ಸಮುದಾಯದ ಮುಖಂಡರಾದ ವೆಂಕಟೇಶ್ ರವರು ಭೂಮಿಯ ಹಕ್ಕಿಗಾಗಿ ನಡೆಸಿದ ಹೋರಾಟವನ್ನು ವಿವರಿಸಿದರು. ಸರ್ಕಾರದ ಅಭಿವೃದ್ಧಿ ಯೋಜನೆಗಳು ಸಮುದಾಯಗಳಿಗೆ ಸೂಕ್ತವಾಗಿ ದೊರಡತಲ್ಲಿ ಸಾಕಷ್ಟು ಬೆಳವಣಿಗೆ ಸಾಧ್ಯ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ರಾಜ್ಯ ಸಮಿತಿಯ ಸದಸ್ಯರಾದ ಶ್ರೀಧರ ನಾಡಾರವರು ಆದಿವಾಸಿ ಸಮುದಾಯಗಳ ಬದುಕು-ಬವಣೆಗಳ ಕುರಿತು ಈ ಸಮಾವೇಶ ಪ್ರಗತಿಯತ್ತ, ವಿಕಾಸದತ್ತ, ಸಮಾಜವನ್ನು ಮುನ್ನಡೆಸುವ ಆಶಯ ಹೊಂದಿದೆ ಎಂದು ನುಡಿದರು. ಆದಿವಾಸಿ ಸಮುದಾಯಗಳು ಎದುರಿಸುತ್ತಿರುವ ವಿವಿಧ ಸ್ವರೂಪದ ಸಮಸ್ಯೆಗಳನ್ನು ಬಿಡಿಸಿಟ್ಟ ಅವರು ಸಮುದಾಯಗಳು ಜಾಗೃತ್ತಿಯಾಗಿ, ಸಂಘಟಿತರಾಗಬೇಕೆಂದರು. ಸ್ವ ಸಹಾಯ ಸಂಘಗಳ ಒಕ್ಕೂಟದ ಕೋಶಾಧಿಕಾರಿ ಮೂಕಾಂಭಿಕೆ, ಕುಣಬಿ ಸಮುದಾಯದ ಮುಖಂಡರು, ಪಂಚಾಯ್ತಿ ಸದಸ್ಯರಾದ ಹೂವಮ್ಮ, ರಾಮಣ್ಣ ಹಿರೇಮನೆ, ನಾಗರಾಜ ಏಳಿಗೆ ಮುಂತಾದವರು ಅತಿಥಿಗಳಾಗಿ ಉಪಸ್ಥಿತರಿದ್ದರು.

ಸಮಾವೇಶದ ಅಧ್ಯಕ್ಷತೆಯನ್ನು ಮಂಜುನಾಥ ಕಪದೂರು ವಹಿಸಿದ್ದು 'ಹಸಲರು, ಸೋಲಿಗರು, ಕುಣಬಿ ಮುಂತಾದ ಆದಿವಾಸಿ ಸಮುದಾಯಗಳ ಬಗ್ಗೆ ಸಮಾಜದಲ್ಲಿ ಕೆಲವರಲ್ಲಿ ಇರುವ ತಾರತಮ್ಯದ ಭಾವ ಹೋಗಬೇಕು, ಎಲ್ಲರೂ ಕೂಡಿದಾಗಲೇ ಸಮಾಜ ಎಂಬುದನ್ನು ಯಾರು ಮರೆಯಬಾರದು ಎಂದು ನುಡಿದರು. ವಿಶೇಷವಾಗಿ ಆಗಮಿಸಿದ್ದ ಹಿರಿಯ ವಕೀಲರೂ, ಕುಣಬಿ ಸಮಾಜದ ರಾಜ್ಯ ಅಧ್ಯಕ್ಷರಾದ ಮಂಜಪ್ಪ ನವರು ಶುಭ ಹಾರೈಸಿದರು. ವಂದನಾರ್ಪಣೆಯನ್ನು ಗಂಗಮ್ಮನವರು ಮಾಡಿದರು.

ವಿಶ್ವ ಆದಿವಾಸಿ ದಿನಾಚರಣೆಯನ್ನು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ, ಶಿವಮೊಗ್ಗ ಜಿಲ್ಲಾ ಘಟಕ ಮತ್ತು ಕರ್ನಾಟಕ ಅರಣ್ಯ ಮೂಲ ಬುಡಕಟ್ಟು ಸಮುದಾಯಗಳ ಒಕ್ಕೂಟ ಶಿವಮೊಗ್ಗ ಇವರು ಸಂಘಟಿಸಿದ್ದರು. ಸಮುದಾಯ ಗೀತೆಯೊಂದಿಗೆ ಸಮಾವೇಶ ಸಮಾರೋಪಗೊಂಡಿತು.

ವರದಿ: ಶ್ರೀಧರ ನಾಡಾ



ಮೋದಿ ಮೋದಿ ಮೋದಿ, ಯಾರದು ಮುಂದಿನ..... ಪುಟ 16 ರಿಂದ

ಅಮಿನಮಟ್ಟು ಆಶಯ ನುಡಿಗಳನ್ನಾಡಿದರು. ಗೋಷ್ಠಿಯಲ್ಲಿ ಗಿರೀಶ್ ಕಾರ್ನಾಡ್, ನರೇಂದ್ರ ನಾಯಕ್, ಜೆ.ಎನ್.ಯು. ವಿದ್ಯಾರ್ಥಿ ನಾಯಕ ಒಮರ್ ಖಲೀದ್ ಮಾತನಾಡಿದರು. ಸ್ವಾಮಿ ಅಗ್ನಿವೇಶ್ ಅಧ್ಯಕ್ಷತೆ ವಹಿಸಿದ್ದರು.

ಸಂಜೆ 'ಪ್ರತಿರೋಧ ಭಾರತ' ಎಂದು ಕರೆಯಲಾದ ಸಮಾರೋಪದಲ್ಲಿ ಎಂ.ಎಸ್.ಆಶಾದೇವಿ, ಪ್ರಕಾಶ ರೈ, ಜಿಗ್ನೇಶ್ ಮೇವಾನಿ, ಕನ್ನಯ್ಯ ಕುಮಾರ್ ಮಾತನಾಡಿದರು. ಬಿ.ಜಯಶ್ರೀ, ಪಿಚ್ಚಳ್ಳಿ ಶ್ರೀನಿವಾಸ್, ಎಂ.ಡಿ.ಪಲ್ಲವಿ, ಗೊಲ್ಲಹಳ್ಳಿ ಶಿವಪ್ರಸಾದ್, ಜೋಗಿಲ ಸಿದ್ದರಾಜು ತಂಡ, ನಾದ ಮಣಿನಾಲ್ಕೂರು, ವಾಸು ದೀಕ್ಷಿತ್ ಮುಂತಾದವರು ಸಾಂಸ್ಕೃತಿಕ ಪ್ರತಿರೋಧದ ಜನದನಿಗಳಾದರು. ಸಮಾರೋಪದಲ್ಲಿ ಪ್ರತಿರೋಧ ಭಾರತದ ಪ್ರತಿಜ್ಞೆ ಕೈಗೊಳ್ಳಲಾಯಿತು. (ಪ್ರತಿಜ್ಞೆ ಈ ವರದಿಯೊಂದಿಗಿದೆ)

'ಗೌರಿ ದಿನ'ದ ಕಾರ್ಯಕ್ರಮ ಹೀಗೆ ಅರ್ಥಪೂರ್ಣವಾಗಿಯೂ ಸೃಜನಶೀಲವಾಗಿಯೂ ನಡೆಯಿತು.

'ಗೌರಿ ದಿನ' ದ ಪ್ರತಿರೋಧದ ದನಿಗಳು

ನಾವು ಮೋದಿ ವಿರೋಧಿಗಳಲ್ಲ. ಅವರು ಪ್ರತಿಪಾದಿಸುವ ತತ್ವದ ವಿರೋಧಿಗಳು. ತಮ್ಮ ಕೊಲೆಗೆ ಸಂಚು ನಡೆದಿದೆ ಎಂಬ ಸುಳ್ಳೂ ಸುದ್ದಿಯನ್ನು ದೇಶದಾದ್ಯಂತ ಹಬ್ಬಿಸುತ್ತಿದ್ದಾರೆ. ಇವರನ್ನು ಕೊಲೆ ಮಾಡುವವರು 65 ವರ್ಷ ದಾಟಿದವರು. ಇವರು ಪ್ರಧಾನಿ ವಿರುದ್ಧ ಸಂಚು ನಡೆಸುತ್ತಾರೆ ಎಂದರೆ ನಾವು ನಂಬಬೇಕೆ?

– ಜಿ.ವಿ.ಶ್ರೀರಾಮರೆಡ್ಡಿ

ನೀವು (ಮೋದಿ) ನಮ್ಮ ಮೌನ ಮುರಿದಿದ್ದೀರಿ. ಇನ್ನು ನೀವು ಮೌನ ಮುರಿಯುವವರೆಗೆ ನಾವು ಕೂಗಾಡುತ್ತಲೇ ಇರುತ್ತೇವೆ. ನಿಮ್ಮನ್ನು ಕುರ್ಚಿಯಿಂದ ಇಳಿಸುವವರೆಗೆ ಹೋರಾಡುತ್ತಲೇ ಇರುತ್ತೇವೆ.

– ಡಾ. ವಿಜಯಮ್ಮ

ಮೋದಿ ಬಳಿ ಇ.ಡಿ., ಸಿಬಿಐ ನಂತಹ ಸಂಸ್ಥೆಗಳಿರಬಹುದು. ಅಧಿಕಾರ ಇರಬಹುದು. ಆದೆ ನಮ್ಮ ಬಳಿ ಲೇಖನಿ ಇದೆ. ಗನ್ನಿಗೆ ಬಗ್ಗದ ಪೆನ್ನು ನಮ್ಮದು'

– ಸಿದ್ಧಾರ್ಥ ವರದರಾಜನ್

ಆರೆಸ್ಸೆಸ್ ಗೆ ಮುಂದಿನ 7 ವರ್ಷಕ್ಕೆ ನೂರು ತುಂಬಲಿವೆ. ಇಷ್ಟು ಸುದೀರ್ಘ ಅವಧಿಯಲ್ಲಿ ಸಂಘಪರಿವಾರಕ್ಕೆ ಒಬ್ಬ ಚಿಂತಕ, ಬುದ್ಧಿಜೀವಿಯನ್ನು ಸೃಷ್ಟಿಸಲು ಸಾಧ್ಯವಾಗಿಲ್ಲ. ಹೀಗಾಗಿ ಪ್ರಗತಿಪರ ಸಿದ್ಧಾಂತದೊಂದಿಗೆ ಚರ್ಚೆಯ ಮೂಲಕ ಮುಖಾಮುಖಿಯಾಗಲು ಸಾಧ್ಯವಾಗದೆ, ಹಲ್ಲೆ ಬಂದೂಕುಗಳ ಮೂಲಕ ಪ್ರತಿರೋಧ ಒಡ್ಡಲು ಮುಂದಾಗಿದೆ

– ದಿನೇಶ್ ಅಮಿನ್ ಮಟ್ಟು

ಹಿಂದೂಗಳು ಕಷ್ಟದಲ್ಲಿರುವುದು ನರೇಂದ್ರ ಮೋದಿ ಈ ದೇಶದ ಪ್ರಧಾನಿ ಆಗಿರುವುದರಿಂದ.

ರಾವಣ ಸೀತೆಯನ್ನು ಅಪಹರಿಸಲು ಕೇಸರಿ ವಸ್ತ್ರವನ್ನೇ ತೊಟ್ಟು ಬಂದಿದ್ದನು. ಕೇಸರಿ ವಸ್ತ್ರ ತೊಡುವವರು ಎಲ್ಲರೂ ರಾಮಭಕ್ತನಾಗಿರುವುದಿಲ್ಲ. ಅವರಲ್ಲಿ ನಾಥೂರಾಮನ ಭಕ್ತರೂ ಇರುತ್ತಾರೆ ಎಂಬುದನ್ನು ಮರೆಯಬಾರದು. ಯೋಗಿ ಆದಿತ್ಯನಾಥನ ಕೇಸರಿ ಬೇಕೋ, ಸ್ವಾಮಿ ಅಗ್ನಿವೇಶನ ಕೇಸರಿ ಬೇಕೋ ಎಂಬುದನ್ನು ಜನತೆ ಅರ್ಥಮಾಡಿಕೊಳ್ಳಬೇಕು.

– ಕನ್ನಯ್ಯ ಕುಮಾರ್

ನೀವೆಷ್ಟೇ ಪೆನ್ನುಗಳನ್ನು ಮುರಿದು ಹಾಕಿ. ನಾವು ಬೆರಳಿನ ರಕ್ತವನ್ನೇ ಶಾಯಿಯಾಗಿ ಬಳಸಿ ಬರೆಯುತ್ತೇವೆ. ಗೌರಿ ಅವರ ಮೌಲ್ಯಗಳನ್ನು ಉಳಿಸುತ್ತೇವೆ.

– ಜಿಗ್ನೇಶ್ ಮೆವಾನಿ

1925ರಿಂದ ಇಲ್ಲಿಯವರೆಗೆ ಅದೆಷ್ಟೋ ಎಳೆಯ ಮನಸ್ಸುಗಳಿಗೆ ಸಂಘ ಪರಿವಾರ ವಿಷ ತುಂಬಿಸಿರಬಹುದು. ಈಗಲೂ ಅದು ನಡೆಯುತ್ತಲೇ ಇದೆ. ಇಂತಹ ವಿಷತುಂಬಿದ ಮನಸ್ಸುಗಳಿಗೆ ಸತ್ಯವನ್ನು ತಿಳಿಸಲು ನಾವು ಮನೆ ಮನಗಳನ್ನು ತಲುಪಬೇಕು.

– ಸ್ವಾಮಿ ಅಗ್ನಿವೇಶ್

ನನ್ನ ಮೇಲೆ ನಡೆದ ಗುಂಡಿನ ದಾಳಿಗೆ ಬಂದೂಕು ತೆಗೆದುಕೊಂಡು ಬಂದಿದ್ದ ಆ ಇಬ್ಬರು ವ್ಯಕ್ತಿಗಳು ಹೊಣೆಯಲ್ಲ. ಈ ಕೇಂದ್ರ ಸರಕಾರ, ಸರಕಾರದ ವಕ್ತಾರರು, ರಾತ್ರಿ ಬಂದು 'ನೇಶನ್ ವಾಂಟ್ಸ್ ಟು ನೋ' ಎನ್ನುವ ಸುದ್ದಿವಾಹಿನಿಗಳ ಆಂಕರ್ ಗಳು ಅದಕ್ಕೆ ಹೊಣೆ.

– ಉಮರ್ ಖಾಲಿದ್

ಪೆಟ್ರೋಲ್-ಡೀಸೆಲ್-ರೂಪಾಯಿ: ಪ್ರತಿದಿನ ಹೊಸ 'ದಾಖಲೆಗಳು', 'ಇತಿಹಾಸ ನಿರ್ಮಾಣ'!



ಪೆಟ್ರೋಲ್-ಡೀಸೆಲ್ ಬೆಲೆಗಳು ಪ್ರತಿದಿನ ಏರುತ್ತಲೇ ಇವೆ ಮತ್ತು ಡಾಲರಿಗೆ ಎದುರಾಗಿ ರೂಪಾಯಿ ಮೌಲ್ಯ ಇಳಿಯುತ್ತಲೇ ಇದೆ -ಇವು ಪ್ರತಿದಿನ ಹೊಸ ಹೊಸ ದಾಖಲೆಗಳನ್ನು ನಿರ್ಮಿಸುತ್ತಿವೆ. ಕಳೆದ ಹನ್ನೊಂದು ದಿನಗಳಲ್ಲಿ ಬೆಂಗಳೂರಿನಲ್ಲಿ ಒಂದು ಲೀಟರಿಗೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಮತ್ತು ಒಂದು ಡಾಲರಿಗೆ ರೂಪಾಯಿ ಮೌಲ್ಯಗಳನ್ನು ನೋಡಿ:

ದಿನಾಂಕ	ಪೆಟ್ರೋಲ್		ಡೀಸೆಲ್
ರೂಪಾಯಿ			
ಆಗಸ್ಟ್ 28	ರೂ. 80.58	71.84	70.11
ಆಗಸ್ಟ್ 29	ರೂ. 80.72	71.99	70.62
ಆಗಸ್ಟ್ 30	ರೂ. 80.84	72.17	70.75
ಆಗಸ್ಟ್ 31	ರೂ. 81.07	72.46	71.00
ಸಪ್ಟೆಂಬರ್ 1	ರೂ. 81.27	72.71	
ಸಪ್ಟೆಂಬರ್ 2	ರೂ. 81.40	73.03	
ಸಪ್ಟೆಂಬರ್ 3	ರೂ. 81.72	73.44	71,22
ಸಪ್ಟೆಂಬರ್ 4	ರೂ. 81.89	73.63	71.58
ಸಪ್ಟೆಂಬರ್ 5	ರೂ. 81.89	73.63	71.75
ಸಪ್ಟೆಂಬರ್ 6	ರೂ. 82.03	73.79	71.96
ಸಪ್ಟೆಂಬರ್ 7	ರೂ. 82.60	74.39	

ಸಪ್ಟೆಂಬರ್ 7ರಂದು ರೂಪಾಯಿ ಮೌಲ್ಯ 72.04 ಕ್ಕೆ ಇಳಿದು ನಂತರ ತುಸು ಸುಧಾರಿಸಿಕೊಂಡಿದೆ ಎಂದು ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ವರದಿಯಾಗಿದೆ.

ಕಳೆದ ತಿಂಗಳ ಆರಂಭದಲ್ಲಿ, ಆಗಸ್ಟ್ 1ರಂದು ಪೆಟ್ರೋಲ್ ಬೆಲೆ ರೂ.78.77 ಮತ್ತು ಡೀಸೆಲ್ ಬೆಲೆ ರೂ. 69.97 ಇದ್ದವು. ಅಂದರೆ ಒಂದು ತಿಂಗಳಲ್ಲಿ ಪೆಟ್ರೋಲ್ ಬೆಲೆಗಳಲ್ಲಿ ಸುಮಾರು 4ರೂ. ಮತ್ತು ಡೀಸೆಲ್ ಬೆಲೆಗಳಲ್ಲಿ 4ರೂ.ಗಿಂತಲೂ ಹೆಚ್ಚು ಏರಿಕೆಯಾಗಿದೆ.

ಕಳೆದ ವರ್ಷ ಜೂನ್ ವರೆಗೆ ಪ್ರತಿತಿಂಗಳ ಒಂದನೇ ಮತ್ತು 16ನೇ ತಾರೀಕಿನಂದು ಬೆಲೆ ಪರಿಷ್ಕರಣ ಮಾಡಲಾಗುತ್ತಿತ್ತು. ಆದರೆ ಈಗ ಪ್ರತಿದಿನ ಪರಿಷ್ಕರಣೆ(ಅಂದರೆ ಈಗಂತೂ ಏರಿಕೆಯೇ) ಮಾಡಲಾಗುತ್ತಿದೆ.

ಈ ಸತತ ಏರಿಕೆಗೆ ಡಾಲರಿಗೆ ಎದುರಾಗಿ ರೂಪಾಯಿ ಬೆಲೆ ಇಳಿಮುಖವಾಗುತ್ತಿರುವುದು ಕಾರಣ ಎನ್ನಲಾಗುತ್ತಿದೆ.

ರೂಪಾಯಿ ಮೌಲ್ಯ ಇಳಿಮುಖವಾಗುತ್ತಿರುವುದು ದೇಶದ ಆರ್ಥಿಕ ಸಮಸ್ಯೆಗಳಿಂದಾಗಿ ಅಲ್ಲ, ಬದಲಾಗಿ ಇದು ಜಾಗತಿಕ ವಿದ್ಯಮಾನ ಎಂದು ಹಣಕಾಸು ಮಂತ್ರಿಗಳು ಸಮಜಾಯಿಷಿ ನೀಡಿದ್ದಾರೆ. ಆದರೆ ಇದರಿಂದಾಗಿ ಏರಿರುವ ಪೆಟ್ರೋಲ್-ಡೀಸೆಲ್ ಬೆಲೆಗಳನ್ನು ಜನಸಾಮಾನ್ಯರೇ ತೆರಬೇಕು ತಾನೇ? ಈ ಬೆಲೆಯೇರಿಕೆಗಳಿಂದ ಸರಕಾರದ ಖಜಾನೆಗೆ ಸೇರುವ ತೆರಿಗೆಯ ಮೊತ್ತವೂ ಹೆಚ್ಚುತ್ತಿದೆಯಲ್ಲ, ಆ ಹೆಚ್ಚುವರಿಯನ್ನಾದರೂ ಬಿಟ್ಟುಕೊಟ್ಟು ಜನಸಾಮಾನ್ಯರ ಮೇಲಿನ ಹೊರೆಯನ್ನು ತುಸು ತಗ್ಗಿಸುವ ಬಗ್ಗೆ ಮಾತ್ರ ಈ ಅಚ್ಛೇದಿನ್ ಸರಕಾರ ಯೋಚಿಸುತ್ತಲೂ ಇಲ್ಲ. ಏಕೆ?

ಈ ಹಿಂದೆ ಇದೇ ಅಚ್ಛೇ ದಿನ್ ಮುಖಂಡರುಗಳು ಪೆಟ್ರೋಲ್-ಡೀಸೆಲ್ ಬೆಲೆಗಳು ಏರುತ್ತಿದ್ದಾಗ, ರೂಪಾಯಿ ಬೆಲೆ ಇಳಿಯುತ್ತಿದ್ದಾಗ ಏನು ಹೇಳುತ್ತಿದ್ದರು ಎಂಬುದನ್ನು ಎಲ್ಲರೂ ನೆನಪಿಸಿಕೊಳ್ಳುತ್ತಿದ್ದಾರೆ. ಮುಖ್ಯವಾಗಿ ಆಗ ಮುಖ್ಯಮಂತ್ರಿಗಳಾಗಿದ್ದ ಈಗಿನ ಪ್ರಧಾನ ಮಂತ್ರಿಗಳ ಉದ್ಗಾರವನ್ನು ನೆನಪಿಸಿಕೊಳ್ಳುತ್ತಿದ್ದಾರೆ. "ಕೇಂದ್ರ ಸರಕಾರದ ಉನ್ನತ ಹುದ್ದೆಗಳಲ್ಲಿ ಇರುವವರು ಭ್ರಷ್ಟರಾಗಿರುವಾಗ ರೂಪಾಯಿ ದುರ್ಬಲವಾಗುತ್ತದೆ" ಎಂಬ ಅವರ ಸಿದ್ಧಾಂತ ಈಗಲೂ ಅಷ್ಟೇ ನಿಜವಿರಬಹುದಲ್ಲವೇ? ನಿಜವಲ್ಲ ಎಂದೇನೂ ಅವರು ಇದುವರೆಗೆ ಹೇಳಿಲ್ಲ.

ಏನೇ ಆಗಲಿ, ಯಾವುದೇ ಅರ್ಥದಲ್ಲಾಗಲೀ, ಐದನೇ ವರ್ಷ ಮುಗಿಯುತ್ತಿರುವಂತೆ ಈ ಸರಕಾರ 'ಇತಿಹಾಸ ನಿರ್ಮಿಸು'ತ್ತಿರುವುದಂತೂ ನಿಸ್ಸಂದೇಹ.

ವಾಲ್‌ಮಾರ್ಟ್ -ಫ್ಲಿಪ್‌ಕಾರ್ಟ್ ವ್ಯವಹಾರವನ್ನು ರದ್ದು ಮಾಡಿ ಮೋದಿ ಸರಕಾರಕ್ಕೆ ಬೆಂಬಲಿಗ ವ್ಯಾಪಾರಸ್ಥರ ಸಂಘದ ಆಗ್ರಹ!

ಅಖಿಲ ಭಾರತ ವ್ಯಾಪಾರಸ್ಥರ ಮಹಾಒಕ್ಕೂಟ(ಸಿಎಐಟಿ) ಸಾಮಾನ್ಯವಾಗಿ ಬಿಜೆಪಿಯನ್ನು ಮತ್ತು ಅದರ ರಾಜಕೀಯವನ್ನು ಬೆಂಬಲಿಸುವ ಸಂಘಟನೆ ಎಂದು ಎಲ್ಲರೂ ಹೇಳುತ್ತಾರೆ. ಈಗ ಅದೇ ಸಂಘಟನೆ ವಾಲ್‌ಮಾರ್ಟ್-ಫ್ಲಿಫ್‌ಕಾರ್ಟ್ ವ್ಯವಹಾರಕ್ಕೆ ಮೋದಿ ಸರಕಾರ ಪ್ರೋತ್ಸಾಹ ನೀಡುತ್ತಿದೆ ಎಂದು' ಕುಪಿತಗೊಂಡಿದೆ. ಸಪ್ಟಂಬರ್ 15ರಿಂದ 90 ದಿನಗಳ ರಾಷ್ಟ್ರವ್ಯಾಪಿ ಪ್ರತಿಭಟನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ವ್ಯವಹಾರವನ್ನು ರದ್ದು ಮಾಡಬೇಕೆಂದು ಅದು ಮೋದಿ ಸರಕಾರವನ್ನು ಅಗ್ರಹಿಸುತ್ತಿದೆ.

ಈ ಮೂರು ತಿಂಗಳಲ್ಲಿ ದೇಶಾದ್ಯಂತ ಪ್ರತಿಭಟನಾ ಪ್ರದರ್ಶನಗಳು, ಮನೆ-ಮನೆ ಪ್ರಚಾರ, ಸಮ್ಮೇಳನಗಳು, ಶಿಬಿರಗಳು ಈ ಪ್ರತಿಭಟನಾ ಕಾರ್ಯಕ್ರಮದಲ್ಲಿ ಸೇರಿವೆಯಂತೆ.

ಈ ನಡುವೆ ಸಪ್ಟಂಬರ್ 28ರಂದು 'ಭಾರತ್ ಟ್ರೇಡ್ ಬಂದ್' ನಡೆಸಲು ಕೂಡ ಅದು ನಿರ್ಧರಿಸಿದೆಯಂತೆ.

ಈ ವ್ಯವಹಾರ ಅಮೆರಿಕನ್ ದೈತ್ಯ ಕಂಪನಿಗೆ ಹಿಂಬಾಗಿಲ ಪ್ರವೇಶವಲ್ಲದೆ ಬೇರೇನೂ ಅಲ್ಲ, ಇದು ದೇಶೀ ಚಿಲ್ಲರೆ ವ್ಯಾಪಾರವನ್ನು, ವಿಶೇಷವಾಗಿ ಸಣ್ಣ ವ್ಯಾಪಾರಿಗಳನ್ನು ಅಳಿಸಿ ಹಾಕುತ್ತದೆ, ಇದರಿಂದ ಚಿಲ್ಲರೆ ವ್ಯಾಪಾರ ಕೆಲವೇ ಕೈಗಳಲ್ಲಿ ಸೇರಿಕೊಂಡು ಗುತ್ತೇದಾರಿಕೆಗೆ ಮತ್ತು ಚಮಚಾ ಬಂಡವಾಳಶಾಹಿಗೆ ದಾರಿ ಮಾಡಿಕೊಡುತ್ತದೆ ಎಂದೂ ಈ ಬಿಜೆಪಿ-ಪರ ಸಂಘಟನೆ ಹೇಳುತ್ತಿದೆ.

'ಸಮಾನ ಸ್ಪರ್ಧಾ ಕಣ'! ತೂತ್ತುಕುಡಿ 'ಖ್ಯಾತಿ'ಯ ವೇದಾಂತಕ್ಕೆ 41, ಪ್ರಖ್ಯಾತ ಒಎನ್‌ಜಿಸಿಗೆ ಕೇವಲ 2 ತೈಲ ಬ್ಲಾಕ್!

ಅಚ್ಛೇ ದಿನ್‌ಗಳಲ್ಲಿ ಹೆಚ್ಚು 'ಉದಾರೀಕರಿಸಿದ' ತೈಲ ನಿಕ್ಷೇಪಗಳ ಹರಾಜು ಪ್ರಕ್ರಿಯೆ ಆಗಸ್ಟ್ 28ರಂದು ಮುಗಿದಿದೆ. ಇದರಲ್ಲಿ 55 ತೈಲ ನಿಕ್ಷೇಪಗಳ ಬ್ಲಾಕ್‌ಗಳು ಹರಾಜಿಗಿದ್ದವು. ಒಟ್ಟು 9 ಕಂಪನಿಗಳು ಇದರಲ್ಲಿ ಭಾಗವಹಿಸಿದವು. ಅವುಗಳಲ್ಲಿ 5 ಸಾರ್ವಜನಿಕ ಕ್ಷೇತ್ರದ್ದು. ಆದರೆ ಇದರಲ್ಲಿ 41 ನ್ನು ವೇದಾಂತ ಪಡೆದಿದೆ. ಹೌದು, ಇತ್ತೀಚೆಗೆ ತೂತುಕುಡಿಯಲ್ಲಿ ಸುದ್ದಿಯಾದ ಅದೇ ಕಾರ್ಪೊರೇಟ್. ಪರಿಸರ, ಕಾರ್ಮಿಕ ಕಾನೂನುಗಳು ಸೇರಿದಂತೆ ಎಲ್ಲವನ್ನೂ ಉಲ್ಲಂಘಿಸಿಯೂ ಅದನ್ನು ಅರಗಿಸಿಕೊಳ್ಳಬಲ್ಲ 'ಖ್ಯಾತಿ'ಯ ವಿದೇಶಿ ಕಾರ್ಪೊರೇಟ್.

ದೇಶದ 70ಶೇ. ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲವನ್ನು ಉತ್ಪಾದಿಸುವ, ದೇಶದ ಇಂಧನ ಭದ್ರತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಸಾರ್ವಜನಿಕ ಕ್ಷೇತ್ರದ ಕಂಪನಿ ಒಎನ್‌ಜಿಸಿ(ತೈಲ ಮತ್ತು ನೈಸರ್ಗಿಕ ಅನಿಲ ನಿಗಮ)ಗೆ ದಕ್ಕಿದ್ದು ಕೇವಲ 2 ಬ್ಲಾಕ್‌ಗಳು. ಅದು 37 ಬ್ಲಾಕ್‌ಗಳಿಗೆ ಅರ್ಜಿ ಹಾಕಿತ್ತು.

ವೇದಾಂತ 'ಆಕ್ರಾಮಕ'ವಾಗಿ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಿತು, ಅಂದರೆ ತೈಲ ಸಂಶೋಧನೆಯ ಆದಾಯದಲ್ಲಿ ಸರಕಾರದೊಂದಿಗೆ ಉಳಿದವರಿಗಿಂತ ಹೆಚ್ಚಿನ ಪಾಲು ಕೊಡುವ ಬಿಡ್ ಸಲ್ಲಿಸುವ 'ರಿಸ್ಕ್' ತಗೊಂಡಿತು, ಒಎನ್‌ಜಿಸಿ ಆ 'ರಿಸ್ಕ್' ತಗೊಂಡಿಲ್ಲ, ಆದ್ದರಿಂದಲೇ ಅದಕ್ಕೆ ದಕ್ಕಿದ್ದು ಎರಡೇ ಬ್ಲಾಕ್ ಎಂದು ಸರಕಾರೀ ಪ್ರತಿನಿಧಿಯೊಬ್ಬರು ಟಿಪ್ಪಣಿ ಮಾಡಿದರಂತೆ. ಒಎನ್‌ಜಿಸಿ ಅಧಿಕಾರಿಗಳನ್ನು ಸರಕಾರ ಇದಕ್ಕಾಗಿ ತರಾಟೆಗೆ ತಗೊಂಡಿತು ಎಂದೂ ಹೇಳಲಾಗಿದೆ.

ಇದು ಹಾಸ್ಯಾಸ್ಪದ ಟಿಪ್ಪಣಿ ಎನ್ನುತ್ತಾರೆ ಒಬ್ಬರು ವಿಶೇಷಜ್ಞರು(ಪ್ರಣೀತಾ ಝಾ, ನ್ಯೂಸ್‌ಕ್ಲಿಕ್, ಸಪ್ಟಂಬರ್1). ಏಕೆಂದರೆ ಈ ಹಿಂದೆ ಕಾಂಗ್ರೆಸ್ ನೇತೃತ್ವದ ಸರಕಾರ ಹರಾಜು ಪ್ರಕ್ರಿಯೆ ತಂದದ್ದು, ಮತ್ತು ಈಗ ಮೋದಿ ಸರಕಾರ ಅದನ್ನು ಮತ್ತಷ್ಟು 'ಉದಾರೀಕರಿಸಿದ್ದು' ತೈಲ ಸಂಶೋಧನೆಯಲ್ಲಿ ಖಾಸಗಿಯವರಿಗೆ ಹೆಚ್ಚಿನ ಪಾಲು ಸಿಗುವಂತೆ ಮಾಡಲಿಕ್ಕಾಗಿಯೇ. ಈ ಎಲ್ಲ ಸರಕಾರಗಳೂ ಅತ್ಯಂತ ಹೆಚ್ಚು ಲಾಭದಲ್ಲಿರುವ ಒಎನ್‌ಜಿಸಿಯನ್ನು ಖಾಸಗೀಕರಿಸುವ , ಅದು ಸಾಧ್ಯವಾಗದಿದ್ದರೆ ಅದು ದಿವಾಳಿಯಾಗುವಂತೆ ಮಾಡುವ ಕ್ರಮಗಳನ್ನೇ ಕೈಗೊಳ್ಳುತ್ತ ಬಂದಿವೆ ಎನ್ನುತ್ತಾರೆ ಈ ವಿಶೇಷಜ್ಞರು. ಅಚ್ಛೇ ದಿನ್ ಸರಕಾರ ಇದರಲ್ಲಿ ಹಿಂದಿನ ಎಲ್ಲ ಸರಕಾರಗಳನ್ನೂ ಮೀರಿಸಿದೆ.

ಒಎನ್‌ಜಿಸಿ 'ರಿಸ್ಕ್' ತಗೊಳ್ಳಲು ಹಿಂಜರಿದಿದ್ದರೆ, ಅದಕ್ಕೆ ಕಾರಣ ಸರಕಾರವೇ ಹಾಗೆ ಹಿಂಜರಿಯಲು ಹೇಳಿದ್ದು, ಅಥವ ಹಿಂಜರಿಯುವಂತೆ ಮಾಡಿದ್ದು.


ಸರಕಾರ ಕೊಡುತ್ತೇನೆ ಎನ್ನುತ್ತಿರುವ ಇಂಧನ ಸಬ್ಸಿಡಿಯಲ್ಲಿ ಗಮನಾರ್ಹ ಭಾಗವನ್ನು ಈ ಒಎನ್‌ಜಿಸಿ ಯೇ ವಹಿಸುವಂತೆ ಮಾಡಲಾಗಿದೆ. ಸಾಲದ್ದಕ್ಕೆ, ಹಿಂದಿನ ಗುಜರಾತ್ ರಾಜ್ಯಸರಕಾರದ (ಯಾರದ್ದು ಎಂದು ಹೇಳಬೇಕಾಗಿಲ್ಲ) ಕರ್ಮಫಲದಿಂದಾಗಿ ನಷ್ಟದಲ್ಲಿರುವ ಜಿಎಸ್‌ಪಿಸಿ(ಗುಜರಾತ್ ರಾಜ್ಯ ಪೆಟ್ರೋಲಿಯಂ ನಿಗಮ)ವನ್ನೂ ವಹಿಸಿಕೊಳ್ಳುವಂತೆ ಒಎನ್‌ಜಿಸಿಯನ್ನು ಸರಕಾರ ಬಲವಂತ ಮಾಡಿದೆ. ಮೂರನೆಯದಾಗಿ, ಸರಕಾರದ ಹಣಕಾಸು ಕೊರತೆ ಗುರಿ ತಲುಪಲು ಹಿಂದುಸ್ತಾನ್ ಪೆಟ್ರೋಲಿಯಂನಲ್ಲಿನ ಸರಕಾರದ 51.11% ಶೇರುಗಳನ್ನು ಒಎನ್‌ಜಿಸಿ ಖರೀದಿಸುವಂತೆ ಮಾಡಲಾಗಿದೆ. ಇದಕ್ಕಾಗಿ ಒಎನ್‌ಜಿಸಿ ಬ್ಯಾಂಕುಗಳಿಂದ 35,000 ಕೋಟಿ ರೂ. ಸಾಲ ಮಾಡುವಂತಾಗಿದೆ. ಹೀಗಿರುವಾಗ ಒಎನ್‌ಜಿಸಿ 'ರಿಸ್ಕ್' ತಗೊಳ್ಳುವುದಾದರೂ ಹೇಗೆ?

ಇದೀಗ ಖಾಸಗೀಕರಣವಾಲಾಗಳ 'ಸಮಾನ ಸ್ಪರ್ಧಾ ಕಣ'(ಲೆವೆಲ್ ಪ್ಲೇಯಿಂಗ್ ಫೀಲ್ಡ್)ದ ಹೂರಣ!

ಆದ್ದರಿಂದ ವೇದಾಂತಕ್ಕೆ 41 ಬ್ಲಾಕುಗಳು ಸಿಕ್ಕಿದ್ದರೆ, ಅದಕ್ಕೆ ಕಾರಣ ಸರಕಾರ ಈ ಕಾರ್ಪೊರೇಟ್‌ಗಳಿಗೆ ಬಕ್ಷೀಸಿನ ಮೇಲೆ ಬಕ್ಷೀಸನ್ನು ಕೊಡಬಯಸುತ್ತದೆ, ಒಎನ್‌ಜಿಸಿ ಕೇವಲ ಎರಡು ಬ್ಲಾಕ್ ಪಡೆದಿದ್ದರೆ, ಅದಕ್ಕೆ ಕಾರಣ ಸರಕಾರ ಅದನ್ನು ಹಿಂಡಿ ಹಿಪ್ಪೆ ಮಾಡಿ, ಲಾಭದಲ್ಲಿದ್ದ ಈ 'ಮಹಾರತ್ನ' ಕಂಪನಿಯನ್ನು ನಷ್ಟಕ್ಕೆ ತಳ್ಳಿ ಕೊನೆಗೆ ಅದನ್ನು ವೇದಾಂತದಂತಹ ಖಾಸಗಿಯವರಿಗೆ ವಹಿಸಿಕೊಡ ಬಯಸುತ್ತದೆ. ಇದೀಗ ಈ ಸರಕಾರಗಳಿಗೆ ಖಾಸಗೀಕರಣದ ಸುಲಭದ ತಂತ್ರವಾಗುತ್ತಿರುವಂತೆ ಕಾಣುತ್ತಿದೆ ಎನ್ನುತ್ತಾರೆ ಪರಿಣಿತರು.

2018-19ರ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರ 8.2% ಏರಿರುವುದು ಸರಕಾರದ ಆರ್ಥಿಕ ಸುಧಾರಣೆಗಳಿಗೆ ದೊರೆತ ಯಶಸ್ಸು ಎಂದು ಹಣಕಾಸು ಮಂತ್ರಿಗಳು ಹೇಳಿದ್ದಾರೆ- ಒಂದು ಸುದ್ದಿ

ಈ ದರ ಹೆಚ್ಚಳ ಕಳೆದ ವರ್ಷ ಇದೇ ಅವಧಿಯಲ್ಲಿ ಅತ್ಯಂತ ಕಡಿಮೆ ಏರಿಕೆ ದರ ದಾಖಲಿಸಿದುದರಿಂದಾಗಿಯಷ್ಟೇ ಎಂದು ಪರಿಣಿತರು-ಇನ್ನೊಂದು ಸುದ್ದಿ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

'ದಲಿತ' ಎಂಬ ಪದ ಬಳಸಬೇಡಿ-'ಪರಿಶಿಷ್ಟ ಜಾತಿ' ಯೆನ್ನಿ ಮಾಧ್ಯಮಗಳಿಗೆ ಸುದ್ದಿ-ಪ್ರಸಾರ ಮಂತ್ರಾಲಯದ 'ಸಲಹಾ' ಸೂಚನೆ!

ಪರಿಶಿಷ್ಟ ಜಾತಿಗಳ ಜನರ ಬಗ್ಗೆ ಹೇಳುವಾಗ 'ದಲಿತ' ಎಂಬ ಪದ ಬಳಸಬೇಡಿ, 'ಪರಿಶಿಷ್ಟ ಜಾತಿ' (ಎಸ್‌ಸಿ) ಪದವನ್ನೇ ಬಳಸಿ ಮತ್ತು ಸುದ್ದಿ ಮತ್ತು ಪ್ರಸಾರ ಇಲಾಖೆ ಮಾಧ್ಯಮಗಳಿಗೆ 'ಸಲಹಾ' ಪತ್ರ ಕಳಿಸಿದೆ ಎಂದು ವರದಿಯಾಗಿದೆ.

ಜೂನ್ 6ರಂದು ಮುಂಬೈ ಹೈಕೋರ್ಟ್ "ಮಾಧ್ಯಮಗಳು 'ದಲಿತ' ಎಂಬ ಪದವನ್ನು ಬಳಸದಿರಬೇಕು ಎಂದು ಸಲಹೆ ನೀಡಲಾಗಿದೆ" ಎಂದು ಆದೇಶ ನೀಡಿರುವ ಆಧಾರದಲ್ಲಿ ಈ 'ಸಲಹಾಪತ್ರ' ಕಳಿಸಲಾಗಿದೆಯಂತೆ. ಈ ಮೊದಲು ಮಾರ್ಚ್ ತಿಂಗಳಲ್ಲಿ ಇಲಾಖೆ ರಾಜ್ಯ ಸರಕಾರಗಳು ಪರಿಶಿಷ್ಟ ಜಾತಿ ಎಂಬ ಪದವನ್ನು ಮಾತ್ರ ಬಳಸಬೇಕು ಎಂದು ಸಲಹಾ ಪತ್ರ ಕಳಿಸಿತ್ತಂತೆ.

ಸರಕಾರೀ ವ್ಯವಹಾರಗಳಲ್ಲಿ 'ಪರಿಶಿಷ್ಟ ಜಾತಿ' ಪದವನ್ನೇ ಬಳಸಬೇಕು ಎಂದರೆ ಅದನ್ನು ಅರ್ಥಮಾಡಿಕೊಳ್ಳಬಹುದು, ಆದರೆ ಸಾರ್ವಜನಿಕ ಚರ್ಚೆ-ಸಂವಾದಗಳಲ್ಲಿಯೂ 'ಪರಿಶಿಷ್ಟ ಜಾತಿ' ಪದವನ್ನು ಮಾತ್ರ ಬಳಸಬೇಕು ಎನ್ನುವುದು ಹಾಸ್ಯಾಸ್ಪದ, 'ದಲಿತ' ಎಂಬ ಪದದಲ್ಲಿ ರಾಜಕೀಯ ದನಿ ಇರುವುದರಿಂದಾಗಿಯೇ ಅಚ್ಛೆ ದಿನ್‌ಗಳಲ್ಲಿ ಈ ಪದಬಳಕೆಯ ಮೇಲೂ ಕೆಂಗಣ್ಣು ಬಿದ್ದಿದೆ ಎಂದು ಹಲವು ಲೇಖಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ದೌರ್ಜನ್ಯ ತಡೆ ಕಾಯ್ದೆಯನ್ನು ದುರ್ಬಲಗೊಳಿಸುವ ತೀರ್ಪುನೀಡಿದ ನ್ಯಾಯಾಧೀಶರನ್ನು ಅವರು ನಿವೃತ್ತರಾದ ಕೂಡಲೇ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ಅಧ್ಯಕ್ಷರಾಗಿ ನೇಮಕ ಮಾಡಿದ ನಂತರ ಈಗ ಅದೇ ಸರಕಾರದಿಂದ ಈ 'ಸಲಹೆ' ಬಂದಿದೆ ಎಂದು ಮತ್ತೊಬ್ಬರು ಟಿಪ್ಪಣಿ ಮಾಡಿದ್ದಾರೆ.

"ಸಾಮಾಜಿಕ ಮಾಧ್ಯಮದಲ್ಲಿ ಹೊಲಸು ಹರಡಿಸಬೇಡಿ" ಎಂದು ಪ್ರಧಾನಿಗಳು ಹೇಳಿದ್ದಾರೆ.



ವ್ಯಂಗ್ಯಚಿತ್ರ: ಶೇಖರ್ ಗುರೇರ

ನವ-ಉದಾರವಾದದ ಕಾಲಮಾನದಲ್ಲಿ ರೈತ-ಕಾರ್ಮಿಕ ಸಖ್ಯತೆ

ಭಾರತವೂ ಸೇರಿದಂತೆ ಮೂರನೆಯ ಜಗತ್ತಿನ ದೇಶಗಳ ಬದಲಾದ ಪರಿಸ್ಥಿತಿಯಲ್ಲಿ, ದೊಡ್ಡ ಬಂಡವಾಳಗಾರರು ದೊಡ್ಡಜಮೀನ್ದಾರರ ಜೊತೆ ಶಾಮೀಲಾಗುವ ವಾಸ್ತವಿಕ ಅನುಭವದ ಹಿನ್ನೆಲೆಯಲ್ಲಿ ರೈತ-ಕಾರ್ಮಿಕ ಸಖ್ಯತೆಯ ಪರಿಕಲ್ಪನೆಯು ಹಿಂದೆಂದಿಗಿಂತಲೂ ಹೆಚ್ಚಿನ ಸಮಂಜಸತೆ ಪಡೆಯುತ್ತದೆ. ಈಗ ನವ-ಉದಾರವಾದದ ಹೊಸದೊಂದು ಅಂಶವೂ ಇಲ್ಲಿ ಪ್ರವೇಶಿಸಿದೆ. ಹಾಗಾಗಿ, ನವ-ಉದಾರವಾದ ಕಾಲಮಾನದಲ್ಲಿ, ರೈತ-ಕಾರ್ಮಿಕ ಸಖ್ಯತೆಯು ದುಡಿಯುವ ಜನತೆಗೆ ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳಲು ನೆರವಾಗುವ ಒಂದು ಅತ್ಯಾವಶ್ಯಕ ಸಾಧನವೂ ಹೌದು ಮತ್ತು ನಮ್ಮ ಇಂದಿನ ರಾಜಕೀಯ ಗುರಿಯಾಗಿರುವ ಜನತಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ಸಾಕಾರಗೊಳಿಸಲು ನೆರವಾಗುವ ಒಂದು ಅತ್ಯಾವಶ್ಯಕ ಸಾಧನವೂ ಹೌದು. ಈ ನಿಟ್ಟಿನಲ್ಲಿ ಸೆಪ್ಟೆಂಬರ್ 5 ರಂದು ದಿಲ್ಲಿಯಲ್ಲಿ ನಡೆದ ಮಜ್ದೂರ್-ಕಿಸಾನ್ ಸಂಘರ್ಷ್ ರ್‍ಯಾಲಿಯು ಒಂದು ಮೈಲಿಗಲ್ಲು.



ಪ್ರೊ. ಪ್ರಭಾತ್ ಪಟ್ನಾಯಕ್

ಭಾವಾನುವಾದ: ಕೆ.ಎಂ.ನಾಗರಾಜ್

ಇಪ್ಪತನೇ ಶತಮಾನದ ಆರಂಭದ ವರ್ಷಗಳಲ್ಲಿ ರಷ್ಯಾದ ಬೋಲ್ಶೆವಿಕ್ ಪಕ್ಷವು, ಕೆಲವು ಬಂಡವಾಳಶಾಹಿ ದೇಶಗಳಲ್ಲಿದ್ದ ಪರಿಸ್ಥಿತಿ ಮತ್ತು ಅದರ ಕಾರಣಗಳ ಅಧ್ಯಯನದಿಂದ ಪಡೆದ ಒಳನೋಟಗಳ ಮೂಲಕ ತಾನು ಅನುಸರಿಸಬೇಕಾದ ಕಾರ್ಯಕ್ರಮವನ್ನು ರೂಪಿಸಿಕೊಂಡಿತ್ತು.

ಆ ಒಳನೋಟದ ಒಂದು ಪ್ರಮುಖ ಅಂಶ ಹೀಗಿದೆ: ಮಾದರಿ ಬಂಡವಾಳಶಾಹಿ ಕ್ರಾಂತಿ ಎನಿಸಿಕೊಂಡಿರುವ ಚಾರಿತ್ರಿಕ ಫ್ರೆಂಚ್ ಕ್ರಾಂತಿಯು ಪಾಳೇಗಾರಿ ಆಸ್ತಿ ಒಡೆತನಕ್ಕೆ ಮಾರಣಾಂತಿಕ ಪೆಟ್ಟು ಕೊಟ್ಟಿತ್ತು. ಪಾಳೇಗಾರಿ ನೊಗದಲ್ಲಿ ಬಿಗಿದಿದ್ದ ರೈತರನ್ನು ಅದು ಬಿಡುಗಡೆಗೊಳಿಸಿತ್ತು. ಆದರೆ, ಬಂಡವಾಳಶಾಹಿ ಪದ್ಧತಿಗೆ ಸ್ವಲ್ಪ ತಡವಾಗಿ ಬದಲಾದ ದೇಶಗಳಲ್ಲಿ, ಪಾಳೇಗಾರಿ ಆಸ್ತಿ ಒಡೆತನಕ್ಕೆ ಸಂಬಂಧಿಸಿದಂತೆ, ಬೂರ್ಷ್ವಾಗಳು (ದೊಡ್ಡ ಬಂಡವಾಳಗಾರರು) ಜಮೀನ್ದಾರರ ಜೊತೆ ರಾಜಿಮಾಡಿಕೊಂಡಿದ್ದವು. ಏಕೆಂದರೆ, ಬದಲಾದ ಹೊಸ ಪರಿಸ್ಥಿತಿಯಲ್ಲಿ, ಬಂಡವಾಳಶಾಹಿಯು ಪಾಳೇಗಾರಿ ಆಸ್ತಿ (ಭೂಮಿ) ಸಂಬಂಧಗಳ ಮೇಲೆ ಮಾಡುವ ತೀವ್ರ ಬದಲಾವಣೆ ತಮ್ಮ ಆಸ್ತಿಗಳ ಮೇಲೂ ಪುಟಿಯುತ್ತದೆ ಎಂಬ ಭಯ ಅವರನ್ನು ಕಾಡುತ್ತಿತ್ತು. ಆದ್ದರಿಂದ, ಬಂಡವಾಳಶಾಹಿಯು ರೈತರನ್ನು ಪಾಳೇಗಾರಿ ನೊಗದಿಂದ ಕಳಚಲಿಲ್ಲ. ಹಾಗಾಗಿ, ಪ್ರಜಾತಂತ್ರ ಕ್ರಾಂತಿಯ ಮುಂಚೂಣಿಯಲ್ಲಿರುವ ಕಾರ್ಮಿಕ ವರ್ಗವು ರೈತರ ಸಖ್ಯದೊಂದಿಗೆ ಈ ಕೆಲಸವನ್ನು ನಿರ್ವಹಿಸಿ ಪ್ರಜಾತಂತ್ರ ಕ್ರಾಂತಿಯನ್ನು ಪೂರ್ಣಗೊಳಿಸಬೇಕಾಗುತ್ತದೆ. ಈ ಕೆಲಸ ನಿರ್ವಹಿಸಿದ ನಂತರ, ಕಾರ್ಮಿಕ ವರ್ಗ ಅಲ್ಲಿಯೇ ನಿಲ್ಲುವುದಿಲ್ಲ. ಅದು ಸಮಾಜವಾದದತ್ತ ಸಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಕಾರ್ಮಿಕ ವರ್ಗವು ರೈತಾಪಿಯ ಒಳವಿಭಾಗಗಳೊಂದಿಗೆ ಹೊಂದಿರುವ ಸಂಬಂಧ ಬದಲಾಗುತ್ತದೆ.

ಲೆನಿನ್ ವ್ಯಕ್ತಪಡಿಸಿದ ಇಂತಹ ಗಹನವಾದ ಒಳನೋಟವು, ರೈತ-ಕಾರ್ಮಿಕರ ಕ್ರಾಂತಿಕಾರಿ ಪ್ರಜಾಸತ್ತಾತ್ಮಕ ಸರ್ವಾಧಿಕಾರದ ಸ್ಥಾಪನೆಗಾಗಿ ಶ್ರಮಿಸುತ್ತಿದ್ದ ಬೋಲ್ಶೆವಿಕ್ ಪಕ್ಷದ ಕಾರ್ಯಕ್ರಮದ ಅಡಿಪಾಯವಾಗಿತ್ತು. ನಮ್ಮ ಇಂದಿನ ಜನತಾ ಪ್ರಜಾಸತ್ತಾತ್ಮಕ ಸರ್ವಾಧಿಕಾರದ ಪರಿಕಲ್ಪನೆಯ ಹಿಂದಿರುವ ಭಾವನೆಯೂ ಇದೇ ಆಗಿದೆ. ಝಾರ್‌ಶಾಹೀ ರಷ್ಯಾದಲ್ಲಿ ಕೆಲವು ರಾಜಕೀಯ ಪಕ್ಷಗಳು ಕಾರ್ಮಿಕ ವರ್ಗವು ಉದಾರ ಮನೋಭಾವದ ಬೂರ್ಷ್ವಾಗಳೊಂದಿಗೆ ಸಖ್ಯತೆ ಬೆಳಸಿಕೊಳ್ಳಬೇಕೆಂದು ವಾದಿಸುತ್ತಿದ್ದ ಸಂದರ್ಭದಲ್ಲಿ, ಲೆನಿನ್, ಸೋಷಿಯಲ್ ಡೆಮೊಕ್ರಾಟ್‌ಗಳು ರೈತ-ಕಾರ್ಮಿಕ ಸಖ್ಯತೆ ಬೆಳಸಲು ದುಡಿಯಬೇಕೆಂದು ಆಗ್ರಹಿಸಿದ್ದರು. ಇಂತಹ ಸಖ್ಯತೆಯು, ಪ್ರಜಾತಂತ್ರ ಕ್ರಾಂತಿಯ ವ್ಯಾಪ್ತಿಯನ್ನು ಕುಗ್ಗಿಸುವುದಿಲ್ಲ, ಬದಲಾಗಿ ಅದನ್ನು ವಿಸ್ತಾರಗೊಳಿಸುತ್ತದೆ ಎಂಬುದಾಗಿ ಲೆನಿನ್ ಅಭಿಪ್ರಾಯಪಟ್ಟಿದ್ದರು.

ಮಾರ್ಕ್ಸ್‌ವಾದ-ಲೆನಿನ್‌ವಾದದಲ್ಲಿ ಕೇಂದ್ರಸ್ಥವಾಗಿರುವ ಒಂದು ಅತ್ಯಂತ ಮಹತ್ವದ ಅಂಶವೆಂದರೆ ರೈತ-ಕಾರ್ಮಿಕ ಸಖ್ಯತೆಯ ಪರಿಕಲ್ಪನೆ. ಒಟ್ಟಾರೆಯಾಗಿ, ಸಮಾಜವಾದವೇ ಇಂದಿನ ಜಗತ್ತಿನ ಮುಂದಿರುವ ಚಾರಿತ್ರಿಕ ಅಜೆಂಡಾ ಆಗಿರುವ ಪರಿಸ್ಥಿತಿಯಲ್ಲಿ, ಬೂರ್ಷ್ವಾ ಆಸ್ತಿ ಸಂಬಂಧಗಳು ಅದಾಗಲೇ ದಾಳಿಗೆ ಒಳಗಾಗಿರುವ ಪರಿಸ್ಥಿತಿಯಲ್ಲಿ, ಪಾಳೇಗಾರಿ ಭೂ ಸಂಬಂಧಗಳನ್ನು ಅಳಿಸಿ ಹಾಕುವ ತಮ್ಮ ಚಾರಿತ್ರಿಕ ಜವಾಬ್ದಾರಿಯಿಂದ ಪುಕ್ಕಲುತನದ ಬೂರ್ಷ್ವಾಗಳು ಹಿಂಜರಿದ ಹಿನ್ನೆಲೆಯಲ್ಲಿ, ರೈತ-ಕಾರ್ಮಿಕ ಸಖ್ಯತೆಯ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ಮೂರನೆಯ ಜಗತ್ತಿನ ದೇಶಗಳಲ್ಲಿದೆ.

ಭಾರತವೂ ಸೇರಿದಂತೆ ಮೂರನೆಯ ಜಗತ್ತಿನ ದೇಶಗಳ ಬದಲಾದ ಪರಿಸ್ಥಿತಿಯಲ್ಲಿ, ದೊಡ್ಡ ಬಂಡವಾಳಗಾರರು ದೊಡ್ಡಜಮೀನ್ದಾರರ ಜೊತೆ ಶಾಮೀಲಾಗುವ ವಾಸ್ತವಿಕ ಅನುಭವದ ಹಿನ್ನೆಲೆಯಲ್ಲಿ ರೈತ-ಕಾರ್ಮಿಕ ಸಖ್ಯತೆಯು ಪರಿಕಲ್ಪನೆಯು ಹಿಂದೆಂದಿಗಿಂತಲೂ ಹೆಚ್ಚಿನ ಸಮಂಜಸತೆ ಪಡೆಯುತ್ತದೆ. ಈಗ ನವ-ಉದಾರವಾದದ ಹೊಸದೊಂದು ಅಂಶವೂ ಇಲ್ಲಿ ಪ್ರವೇಶಿಸಿದೆ. ಇದು, ರೈತ-ಕಾರ್ಮಿಕರ ಆರ್ಥಿಕ ಸ್ಥಿತಿಗತಿಗಳೊಂದಿಗೆ ನೇರವಾಗಿ ಸಂಬಂಧಿಸಿದೆ. ಅವರನ್ನು ಅಧೋಗತಿಗೆ ತಳ್ಳಿದೆ. ಹಾಗಾಗಿ, ನವ-ಉದಾರವಾದ ಕಾಲಮಾನದಲ್ಲಿ, ರೈತ-ಕಾರ್ಮಿಕ ಸಖ್ಯತೆಯು ದುಡಿಯುವ ಜನತೆಗೆ ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳಲು ನೆರವಾಗುವ ಒಂದು ಅತ್ಯವಶ್ಯಕ ಸಾಧನವೂ ಹೌದು ಮತ್ತು ನಮ್ಮ ಇಂದಿನ ರಾಜಕೀಯ ಗುರಿಯಾಗಿರುವ ಜನತಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ಸಾಕಾರಗೊಳಿಸಲು ನೆರವಾಗುವ ಒಂದು ಅತ್ಯವಶ್ಯಕ ಸಾಧನವೂ ಹೌದು.

ರೈತ-ಕಾರ್ಮಿಕರ ಆರ್ಥಿಕ ಸ್ಥಿತಿಗತಿಗಳು ನವ-ಉದಾರವಾದದೊಂದಿಗೆ ತಳುಕು ಹಾಕಿಕೊಂಡಿರುವ ಕಾರಣ ಹೀಗಿದೆ: ನವ-ಉದಾರವಾದವು ಹಳ್ಳಿಗಾಡಿನಲ್ಲಿ ಬಂಡವಾಳ ಶೇಖರಣೆಯ ಒಂದು ಅನಾಗರಿಕ ಪ್ರಕ್ರಿಯೆಯನ್ನು ಹರಿ ಬಿಟ್ಟಿದೆ. ಅಲ್ಲಿ, ಕಾರ್ಪೊರೇಟ್ ಹಣಕಾಸು ಹಿತಾಸಕ್ತಿಗಳು ಮತ್ತು ಬಹುರಾಷ್ಟ್ರೀಯ ಕಂಪೆನಿಗಳು ರೈತ ಕೃಷಿ ಮತ್ತು ಪಾರಂಪರಿಕ ಕಿರು ಉತ್ಪಾದನಾ ವಲಯಗಳ ಚಟುವಟಿಕೆಗಳನ್ನು ಅತಿಕ್ರಮಿಸಿ, ರೈತರ ಮತ್ತು ಇತರ ಕುಶಲ ಕಸುಬುದಾರರ ಜೀವನವನ್ನು ಯಾತನಾಮಯಗೊಳಿಸಿದೆ. ಈ ಯಾತನೆಯನ್ನು ತಾಳಲಾರದೆ ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ನಮ್ಮ ದೇಶದ ಮೂರು ಲಕ್ಷಕ್ಕೂ ಹೆಚ್ಚು ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಲಕ್ಷ ಲಕ್ಷ ಮಂದಿ ರೈತರು ತಮ್ಮ ಮನೆ ಮಠಗಳನ್ನು ತೊರೆದು ಉದ್ಯೋಗ ಅರಸಿ ಪಟ್ಟಣಗಳಿಗೆ ಗುಳೆ ಹೋಗುತ್ತಿದ್ದಾರೆ. ಅದರ ಜೊತೆಯಲ್ಲಿ, ದೊಡ್ಡ ಬಂಡವಾಳಗಾರರು ಮೂಲ ಸೌಕರ್ಯ ಸೃಷ್ಠಿಸುವ ಹೆಸರಿನಲ್ಲಿ, ಕುರುಡು ಕಾಸಿಗೆ ರೈತರ ಜಮೀನು ಕಿತ್ತುಕೊಂಡು ಅದು ಬಹುತೇಕ ರಿಯಲ್‌ಎಸ್ಟೇಟ್ ಉದ್ದೇಶಗಳಿಗೆ ಬಳಕೆಯಾಗಿರುವ ಕ್ರಮವೂ ಲಕ್ಷಾಂತರ ರೈತರನ್ನು ಅವರ ಜಮೀನಿನಿಂದ ಹೊರದಬ್ಬಿದೆ.

ಈ ವಿದ್ಯಮಾನವನ್ನು ಜನಗಣತಿಯ ದತ್ತಾಂಶಗಳು ಸ್ಪಷ್ಟಪಡಿಸುತ್ತವೆ. 1981 ಮತ್ತು 1991ರ ಜನಗಣತಿಗಳ ನಡುವೆ ಕೃಷಿಕರ (ಉಳುಮೆ ಮಾಡುವವರು) ಸಂಖ್ಯೆಯು 92 ದಶಲಕ್ಷದಿಂದ 110 ದಶ ಲಕ್ಷಕ್ಕೆ ಏರಿತು. ನಂತರ, ಈ ಸಂಖ್ಯೆಯು 2001ರಲ್ಲಿ 103 ದಶಲಕ್ಷಕ್ಕೆ ಮತ್ತು 2011ರಲ್ಲಿ 98.8 ದಶಲಕ್ಷಕ್ಕೆ ಇಳಿಯಿತು. ಅಂದರೆ, 1991ರಲ್ಲಿ ನವ-ಉದಾರವಾದ ಆರಂಭವಾದಂದಿನಿಂದ ಹಿಡಿದು ಇತ್ತೀಚಿನ 2011ರ ಜನಗಣತಿಯ ಅವಧಿಯಲ್ಲಿ ರೈತರ ಸಂಖ್ಯೆಯಲ್ಲಿ ಸುಮಾರು 15 ದಶ ಲಕ್ಷ ಮಂದಿ ಇಳಿಕೆಯಾಗಿರುವುದು ದಿಗ್ಭ್ರಮೆಗೊಳಿಸುವಂತಿದೆ!

ಇದೇ ಅವಧಿಯಲ್ಲಿ, ನಗರಗಳಲ್ಲಿ ಸೃಷ್ಠಿಯಾದ ಉದ್ಯೋಗಗಳ ಸಂಖ್ಯೆ ಬಹಳ ನಿಕೃಷ್ಟವಾಗಿದೆ. ಜಿಡಿಪಿ ಉನ್ನತ ಮಟ್ಟದಲ್ಲಿ ಬೆಳೆಯುತ್ತಿದೆ ಎಂದು ಹೇಳಲಾದ ಈ ಅವಧಿಯಲ್ಲಿ ನಗರಗಳಲ್ಲಿ ಸೃಷ್ಠಿಯಾದ ಉದ್ಯೋಗಗಳ ಸಂಖ್ಯೆಯು, ನಗರವಾಸಿ ಶ್ರಮಿಕರ ಸ್ವಾಭಾವಿಕ ಹೆಚ್ಚಳಕ್ಕೇ ಸಾಕಾಗುವಷ್ಟಿರಲಿಲ್ಲ. ಇನ್ನು ಹಳ್ಳಿಗಳಿಂದ ವಲಸೆ ಬಂದವರಿಗೆ ಉದ್ಯೋಗ ಸಿಗುವ ಮಾತೆಲ್ಲಿ? 2004-05 ಮತ್ತು 2009-10ರಲ್ಲಿ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ನಡೆದ ವರ್ಷಗಳ ನಡುವಿನ ಜಿಡಿಪಿ ಉನ್ನತವಾಗಿ ಬೆಳೆದಿತ್ತು ಎಂದು ಹೇಳಲಾದ ಅವಧಿಯಲ್ಲಿ, ಉದ್ಯೋಗಗಳ ವಾರ್ಷಿಕ ಬೆಳವಣಿಗೆ 0.8% ಇತ್ತು. ಇದು, ಜನಸಂಖ್ಯಾ ಬೆಳವಣಿಗೆಯ ದರ 1.5%ಗಿಂತ ತೀರಾ ಕೆಳಗಿದೆ.

ಪಟ್ಟಣಗಳಿಗೆ ವಲಸೆ ಹೋಗುವ ರೈತರು ಅಲ್ಲಿರುವ ಶ್ರಮಿಕ ಮೀಸಲು ಪಡೆಯು (ಅಂದರೆ, ನಿರುದ್ಯೋಗಿಗಳ ಪಡೆ ಎಂದರ್ಥ) ಮತ್ತಷ್ಟು ದೊಡ್ಡದಾಗುವಂತೆ ಮಾಡುತ್ತಾರೆ. ವಲಸೆಯು ಕಣ್ಣಿಗೆ ಕಾಣುವಂತಹ ನಿರುದ್ಯೋಗವನ್ನು (open unemployment) ಹೆಚ್ಚಿಸುವುದಿಲ್ಲ. ಆದರೆ, ಅರೆ-ಕಾಲಿಕ, ಸಾಂದರ್ಭಿಕ ಮತ್ತು ಆಗೊಮ್ಮೆ ಈಗೊಮ್ಮೆ ದೊರೆಯುವ ಕೆಲಸಗಳು (intermittent employment) ಮತ್ತು ಮರೆ ಮಾಚಿದ ನಿರುದ್ಯೋಗ (disguised unemployment) (ಅಂದರೆ, ಸ್ವಂತದ ಸಣ್ಣ ಪುಟ್ಟ ಚಾಕರಿಗಳು) ಹೆಚ್ಚುತ್ತವೆ. ಈ ರೀತಿಯಾಗಿ ಒಂದಲ್ಲಾ ಒಂದು ರೀತಿಯ ಸಣ್ಣ ಪುಟ್ಟ ಕೆಲಸಗಳು ಸಿಗುವುದರಿಂದ ಹೆಚ್ಚಿನ ಮಂದಿ ಕೆಲಸ ಇಲ್ಲವೇ ಇಲ್ಲ ಎನ್ನುವ ಪರಿಸ್ಥಿತಿಯಲ್ಲಿ ಉಳಿಯುವುದಿಲ್ಲ. ಬದಲಿಗೆ, ಕೆಲಸದ ಮಾಡುತ್ತಿರುವ ಪ್ರತಿ ವ್ಯಕ್ತಿಯೂ ಮಾಡುವ ಕೆಲಸ ಮತ್ತು ಅದರ ಅವಧಿ ಕಡಿಮೆ ಇರುತ್ತದೆ.

ಕೆಲಸಗಳ ಸ್ವರೂಪ ಎಂತದ್ದೇ ಇರಲಿ, ಶ್ರಮಿಕ ಮೀಸಲು ಪಡೆಯ ಗಾತ್ರ ಸಣ್ಣದ್ದಿರಲಿ ಅಥವಾ ದೊಡ್ಡದ್ದಿರಲಿ, ಒಟ್ಟಿನಲ್ಲಿ, ಅದು ನಗರ ದುಡಿಮೆಗಾರರ ಸರಾಸರಿ ಜೀವನ ಮಟ್ಟವನ್ನು ಇಳಿಸುತ್ತದೆ. ಏಕೆಂದರೆ, ಶ್ರಮಿಕ ಮೀಸಲು ಪಡೆಯ ಗಾತ್ರ ದೊಡ್ಡದಾಗುವ ಕಾರಣದಿಂದಾಗಿ, ದುಡಿಮೆಗಾರರ ಕೂಲಿಯ ದರ ಏರುವುದಿಲ್ಲ, ಅವರಿಗೆ ಕಡಿಮೆ ಅವಧಿಯ ಕೆಲಸ ಇರುವುದರಿಂದ ಅವರ ಸರಾಸರಿ ವರಮಾನದ ಮಟ್ಟವೂ ಕೆಳಗಿರುತ್ತದೆ.

ಮೊದಲೇ ಇದ್ದ ಶ್ರಮಿಕ ಮೀಸಲು ಪಡೆಗೆ ಮತ್ತಷ್ಟು ಮಂದಿ ಸೇರಿದ ಪರಿಣಾಮವಾಗಿ ಕಾರ್ಮಿಕರ ಸಂಘಟನೆಗಳು ದುರ್ಬಲಗೊಳ್ಳುತ್ತವೆ. ಕೆಲಸವೇ ಇಲ್ಲದ ಪರಿಸ್ಥಿತಿಯಲ್ಲಿ (open unemployment) ಕಾರ್ಮಿಕರ ಸಂಘಟನೆಗಳು ದುರ್ಬಲಗೊಳ್ಳುವುದಕ್ಕಿಂತಲೂ ಹೆಚ್ಚಾಗಿ; ತಾತ್ಕಾಲಿಕ ಕೆಲಸಗಾರರು ಮತ್ತು ಹೆಚ್ಚುತ್ತಿರುವ ಕೆಲಸಗಳ ಕ್ಯಾಜು?ವಲೈಸೇಷನ್‌ನ ಪರಿಸ್ಥಿತಿಯಲ್ಲಿ ಕಾರ್ಮಿಕರ ಸಂಘಟನೆಗಳು ಹೆಚ್ಚು ದುರ್ಬಲಗೊಳ್ಳುತ್ತವೆ. ಅನೇಕ ವರ್ಷಗಳ ಹಿಂದೆಯೇ ಸಂಘಟಿತರಾಗಿ ಅದಾಗಲೇ ಬಲಶಾಲಿ ಯೂನಿಯನ್‌ಗಳನ್ನು ಕಟ್ಟಿಕೊಂಡು ಕಾರ್ಮಿಕ ವರ್ಗದ ಚಳವಳಿಗಳಲ್ಲಿ ಸಕಿಯವಾಗಿ ಭಾಗವಹಿಸುತ್ತಿರುವ ಅನೇಕ ಬಲಶಾಲಿ ಯೂನಿಯನ್‌ಗಳು ತಮ್ಮನ್ನು ಬಲಹೀನಗೊಳಿಸುವ ಇಂತಹ ಹೊಡೆತಗಳಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಏಕೆಂದರೆ, ಕೆಲಸಗಳ ಹೊರಗುತ್ತಿಗೆ ಮತ್ತು ಕೆಲಸಗಳ ಕ್ಯಾಜು?ವಲೈಸೇಷನ್‌ನ ಹೆಚ್ಚುತ್ತಿವೆ.

ನವ-ಉದಾರವಾದದ ಬಂಡವಾಳ ಶೇಖರಣೆಯ ದಾಹವು ಹಳ್ಳಿಗಾಡಿನ ಕೃಷಿ, ಗುಡಿ ಕೈಗಾರಿಕೆಗಳನ್ನು ನಾಶಪಡಿಸಿದೆ. ಮೂಲ ಸೌಕರ್ಯದ ಹೆಸರಿನಲ್ಲಿ ಕುರುಡು ಕಾಸಿಗೆ ರೈತರ ಜಮೀನು ಕಿತ್ತುಕೊಂಡು ಅವರನ್ನು ಹೊರದಬ್ಬಿದೆ. ಪರಿಣಾಮವಾಗಿ ಅವರು ಹೇಳತೀರದ ಸಂಕಷ್ಟಕ್ಕೊಳಗಾಗಿದ್ದಾರೆ. ನೋವು ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಉದ್ಯೋಗ ಅರಸಿ ಪಟ್ಟಣಗಳಿಗೆ ಗುಳೆ ಹೋಗುತ್ತಿದ್ದಾರೆ. ಈ ಎಲ್ಲವೂ ಕೃಷಿ ಕೂಲಿಕಾರರ ಜೀವನವನ್ನು ದುರ್ಭರಗೊಳಿಸಿವೆ. ಹಾಗಾಗಿ, ನವ-ಉದಾರವಾದ ನೀತಿಗಳು ಉಂಟುಮಾಡಿರುವ ರೈತರ ಸಂಕಷ್ಟಗಳ ಒಟ್ಟಾರೆ ಪರಿಣಾಮವು ನಗರಗಳ ದುಡಿಯುವ ಜನತೆಯ ಹೋರಾಡುವ ಶಕ್ತಿಯನ್ನು ಅಗೋಚರವಾಗಿ ಕುಂದಿಸಿದೆ ಮತ್ತು ಅವರ ಜೀವನ ಮಟ್ಟ ಕುಸಿಯುವಂತೆ ಮಾಡಿದೆ. ಇದಷ್ಟೇ ಅಲ್ಲದೆ, ದುಡಿಯುವ ಜನತೆಯ ಹೋರಾಡುವ ಶಕ್ತಿ ಕುಂದಿಸುವ ಅನೇಕ ಮಾರ್ಗಗಳಲ್ಲಿ ಸಾರ್ವಜನಿಕ ವಲಯದ ಖಾಸಗೀಕರಣ ಪ್ರಮುಖವಾದದ್ದು. ಒಟ್ಟಿನಲ್ಲಿ, ದುಡಿಯುವ ಜನತೆಯ ಹೋರಾಡುವ ಶಕ್ತಿ ಕುಂದಿಸುವ ಪ್ರವೃತ್ತಿ ಹೆಚ್ಚುತ್ತಿದೆ.

ಈ ಎಲ್ಲ ಕಾರಣಗಳಿಂದಾಗಿ, ನವ-ಉದಾರ ಬಂಡವಾಳಶಾಹಿಯ ಎದುರು ಹೋರಾಡಲು ರೈತ-ಕಾರ್ಮಿಕರ ಸಖ್ಯತೆಯು ಒಂದು ಅತ್ಯಂತ ಮಹತ್ವದ ಸಾಧನವಾಗುತ್ತದೆ. ವರ್ತಮಾನ ಕಾಲಘಟ್ಟದಲ್ಲಿ ಕಾರ್ಪೊರೇಟ್-ಕುಬೇರರ ಬೆಂಬಲದೊಂದಿಗೆ ಕೋಮುವಾದಿ-ಸರ್ವಾಧಿಕಾರಿ ಪ್ರವೃತ್ತಿ ಭೂತದಂತೆ ಬೆಳೆದು ಬರಲು ನವ-ಉದಾರವಾದವು ಕಾರಣವಾಗಿರುವುದರಿಂದ, ಈ ಕೋಮುವಾದಿ-ಸರ್ವಾಧಿಕಾರಿ ಭೂತ ಬಿಡಿಸುವ ಹೋರಾಟದಲ್ಲಿಯೂ ರೈತ-ಕಾರ್ಮಿಕರ ಸಖ್ಯತೆಯು ಒಂದು ಅತ್ಯಂತ ಮಹತ್ವದ ಸಾಧನವಾಗುತ್ತದೆ.

ನವ-ಉದಾರವಾದದ ಹಾವಳಿಯಿಂದ ಪಡೆದ ಅನುಭವಗಳು ಅದರ ವಿರುದ್ಧ ಹೋರಾಡಲು ಕಾರ್ಮಿಕರ, ರೈತರ ಮತ್ತು ಕೃಷಿಕೂಲಿಕಾರರ ಸಖ್ಯತೆಯ ಒಂದು ಹೋರಾಟದ ವೇದಿಕೆ ನಿರ್ಮಿಸಲು ಬೇಕಾಗುವ ವಸ್ತುನಿಷ್ಠ ಪರಿಸ್ಥಿತಿ ಉಂಟಾಗಿದೆ. ಅದನ್ನು ಸಾಕಾರಗೊಳಿಸುವ ಕಾಯಕದಲ್ಲಿ ನಿರತರಾಗಬೇಕು. ಅಂತಹ ಒಂದು ಸಖ್ಯತೆಯು (ಹೋರಾಟದ ವೇದಿಕೆ) ತನ್ನಷ್ಟಕ್ಕೆ-ತಾನೇ ಒಂದು ಸಖ್ಯತೆ ಎಂಬುದರಿಂದ ತನಗಾಗಿ-ಒಂದು ಸಖ್ಯತೆ ಎಂಬುದಾಗಿ ಪರಿವರ್ತನೆಯಾಗಬೇಕು. ಈ ಸಖ್ಯತೆಯು ಹೋರಾಟದ ಒಂದು ವಸ್ತುನಿಷ್ಠ ಸಾಧ್ಯತೆಯ ಮಟ್ಟದಿಂದ ಅಗತ್ಯವಿರುವವರ ಸಹಾಯಕ್ಕೆ ಧಾವಿಸುವ ಒಂದು ಮಾಧ್ಯಮವಾಗಿ ಪರಿವರ್ತನೆಯಾಗಬೇಕು.

ತನ್ನಷ್ಟಕ್ಕೆ-ತಾನೇ ಒಂದು ಸಖ್ಯತೆ ಎಂಬ ಪರಿಕಲ್ಪನೆಯಿಂದ ತನಗಾಗಿ-ಒಂದು ಸಖ್ಯತೆ ಎಂಬುದಾಗಿ ಪರಿವರ್ತನೆಗೊಳ್ಳುವ ಸಂಕೀರ್ಣ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. ಈ ಪರಿವರ್ತನೆಯ ಹಾದಿಯಲ್ಲಿ, ಐದು ತಿಂಗಳ ಹಿಂದೆ ಮಹಾರಾಷ್ಟ್ರದಲ್ಲಿ ನಡೆದ ಕಿಸಾನ್ ಲಾಂಗ್ ಮಾರ್ಚ್ ಒಂದು ಮೊದಲ ಹೆಜ್ಜೆಯಾದರೆ, ಸೆಪ್ಟೆಂಬರ್ 5 ರಂದು ದಿಲ್ಲಿಯಲ್ಲಿ ನಡೆದ ಮಜ್ದೂರ್-ಕಿಸಾನ್ ಸಂಘರ್ಷ್ ರ್‍ಯಾಲಿಯು ಒಂದು ಮೈಲಿಗಲ್ಲು.

ಇಲ್ಲಿಯವರೆಗೆ, ಕಾರ್ಮಿಕರ, ರೈತರ ಮತ್ತು ಕೃಷಿ ಕಾರ್ಮಿಕರ ರ್‍ಯಾಲಿಗಳು ಪ್ರತ್ಯೇಕವಾಗಿ ನಡೆಯುತ್ತಿದ್ದವು. ಈ ಮೂರೂ ವರ್ಗಗಳು ಜಂಟಿಯಾಗಿ ನಡೆಸಿದ ಪ್ರಥಮ ರ್‍ಯಾಲಿಯೇ ಸೆಪ್ಟೆಂಬರ್ 5ರ ದಿಲ್ಲಿ ಮಜ್ದೂರ್-ಕಿಸಾನ್ ಸಂಘರ್ಷ್ ರ್‍ಯಾಲಿ. ಈ ರ್‍ಯಾಲಿಯ ತಕ್ಷಣದ ಬೇಡಿಕೆಗಳು ಆರ್ಥಿಕ ಪರಿಹಾರಕ್ಕೆ ಸಂಬಂಧಿಸಿದ್ದರೂ, ಕೋಮುವಾದಿ-ಸರ್ವಾಧಿಕಾರಶಾಹಿ ಭೂತ ಮತ್ತು ಅದನ್ನು ಹುಟ್ಟುಹಾಕಿದ ನವ-ಉದಾರವಾದದ ವಿರುದ್ಧ ಹೋರಾಡಲು ಕಾರ್ಮಿಕರ, ರೈತರ ಮತ್ತು ಕೃಷಿಕೂಲಿಕಾರರ ಈ ಸಖ್ಯತೆಗಿರುವ ಸಾಮರ್ಥ್ಯ ಅಪಾರ. ಕೋಮುವಾದಿ-ಸರ್ವಾಧಿಕಾರಶಾಹಿ ತನ್ನ ಕೆನ್ನಾಲಗೆ ಚಾಚುತ್ತಿರುವ ಸಂದರ್ಭದಲ್ಲಿ, ಭಿನ್ನಾಭಿಪ್ರಾಯಗಳನ್ನು ಅಡಗಿಸುವ ಉದ್ದೇಶದಿಂದ ಆಗಸ್ಟ್ 28 ರಂದು ಐದು ಮಂದಿ ಮಾನವ ಹಕ್ಕುಗಳು ಮತ್ತು ನಾಗರಿಕ ಹಕ್ಕುಗಳ ಕಾರ್ಯಕರ್ತರನ್ನು ಸುಳ್ಳು ಆರೋಪಗಳ ಮೇಲೆ ಬಂಧಿಸಿರುವ ಹಿನ್ನೆಲೆಯಲ್ಲಿ, ಕಾರ್ಮಿಕರ-ರೈತರ-ಕೃಷಿಕೂಲಿಕಾರರ ಸಖ್ಯತೆಯು ಇನ್ನೂ ಹೆಚ್ಚಿನ ಮಹತ್ವ ಪಡೆಯುತ್ತದೆ. ●

ತ್ರಿಪುರಾದಲ್ಲಿ ಬಿಜೆಪಿ 'ಪಲ್ಟಾಯಿ': ಆರು ತಿಂಗಳಲ್ಲೇ ಸಂಬಳ-ಪೆನ್ಶನ್‌ಗಳಿಗೆ ದುಡ್ಡಿಲ್ಲ!

ಆರು ತಿಂಗಳ ಹಿಂದೆ ತ್ರಿಪುರಾದಲ್ಲಿ ವಿಧಾನಸಭಾ ಚುನಾವಣೆಗಳ ಪ್ರಚಾರದ ಸಮಯದಲ್ಲಿ ಸ್ವತಃ ಪ್ರಧಾನ ಮಂತ್ರಿಗಳು ಸಾಮಾಜಿಕ ಪೆನ್ಶನ್ 2000ರೂ.ಗೆ ಏರಿಸುವುದಾಗಿ ಹೇಳಿದ್ದರು. ಸ್ಕೀಮ್ ನೌಕರರಿಗೆ ಅವರ ಕೆಲಸಗಳನ್ನು ನಿಯಮಿತಗೊಳಿಸುವುದಾಗಿ ಹೇಳಿದ್ದರು. ಅವು ಈಡೇರಿಲ್ಲ ಎಂಬುದೇನೂ ಬಹುಶಃ ಈಗ ಸುದ್ದಿಯಲ್ಲ.

ಆದರೆ ರಾಜ್ಯದಲ್ಲಿ 'ಚಲೋ ಪಲ್ಟಾಯಿ'(ಬನ್ನಿ, ಬದಲಾಯಿಸಿ) ಎಂದ ಬಿಜೆಪಿ ನೇತೃತ್ವದ ಸರಕಾರ ಬದಲಾವಣೆಯನ್ನಂತೂ ತಂದಿದೆ. 25 ವರ್ಷಗಳಲ್ಲಿ ಮೊತ್ತಮೊದಲ ಬಾರಿಗೆ ಬಹಳಷ್ಟು ಸರಕಾರೀ ನೌಕರರಿಗೆ ಮತ್ತು ಪಿಂಚಣಿದಾರರಿಗೆ ಈ ತಿಂಗಳ ಮೊದಲ ತಾರೀಕಿನಂದು ಸಂಬಳ ಸಿಗಲಿಲ್ಲ ಎಂದು ವರದಿಯಾಗಿದೆ.

ಆಗಸ್ಟ್ 28ರಂದು ರಾಜ್ಯದ ಖಜಾನೆಯಲ್ಲಿ ಇದ್ದದ್ದು 607 ಕೋಟಿ ರೂ. ವಿವಿಧ ಟ್ರೆಜರಿಗಳ ಮೂಲಕ ರಾಜ್ಯದ ದಿನದ ವೆಚ್ಚ 25 ಕೋಟಿ ರೂ. ಮಾಸಿಕ ಸಂಬಳಗಳು ಮತ್ತು ಪಿಂಚಣಿಗಳಿಗೆ ಸರಕಾರಕ್ಕೆ ಬೇಕಾಗಿರುವುದು 585 ಕೋಟಿ ರೂ. ಆದ್ದರಿಂದಾಗಿ ಆಗಸ್ಟ 31ರಂದು ಸಂಬಳಗಳು ಮತ್ತು ಪಿಂಚಣಿಗಳನ್ನು ಕೊಡಲು ಸರಕಾರದ ಬಳಿ ಹಣವಿರಲಿಲ್ಲ. ರಿಝರ್ವ್ ಬ್ಯಾಂಕಿನಿಂದ ಓವರ್ ಡ್ರಾಫ್ಟ್‌ಗಾಗಿ ಅಂಗಲಾಚಬೇಕಾಯಿತು ಎಂದು ವರದಿಯಾಗಿದೆ.

ಎಡರಂಗ ಸರಕಾರ ಕಳೆದ 25 ವರ್ಷಗಳಲ್ಲಿ ಒಂದು ಬಾರಿಯೂ ಸಂಬಳ/ಪಿಂಚಣಿಗಳಿಗಾಗಿ ರಿಝರ್ವ್ ಬ್ಯಾಂಕಿನಿಂದ ಓವರ್ ಡ್ರಾಫ್ಟ್ ಕೇಳಿರಲಿಲ್ಲ. ಎಂಬುದನ್ನು ಇಲ್ಲಿ ಗಮನಿಸಬಹುದು.

ಎಡರಂಗ ಸರಕಾರ ಅಧಿಕಾರದಿಂದ ಇಳಿದಾಗ ರಾಜ್ಯದ ಖಜಾನೆಯಲ್ಲಿ 1400 ಕೋಟಿ ರೂ.ಗಳಿದ್ದವು. ಪ್ರತಿತಿಂಗಳು ತ್ರಿಪುರಾಕ್ಕೆ ಕೇಂದ್ರದಿಂದ 1100 ಕೋಟಿ ರೂ. ಬರುತ್ತದೆ. ಜಿಎಸ್‌ಟಿಯ ಪಾಲಾಗಿ ಇನ್ನೂ 200 ಕೋಟಿ ರೂ. ಬರುತ್ತದೆ. ಅದು ಆಗಸ್ಟ್ 28ರಂದು ಕೇವಲ 607 ಕೋಟಿ ರೂ.ಗೆ ಹೇಗೆ ಇಳಿಯಿತು ಎಂದು ಎಡರಂಗದ ಮುಖಂಡರು ಕೇಳುತ್ತಿದ್ದಾರೆ.

ನೌಕರರು ತಮ್ಮ ಜಿಪಿಎಫ್‌ನಿಂದ ಹಣ ಹಿಂದಕ್ಕೆ ಪಡೆಯಬಾರದು ಎಂದು ಮೌಖಿಕ ಆದೇಶವನ್ನು ಕೊಡಲಾಗಿದೆಯಂತೆ. ಇಂತಹ ಪರಿಸ್ಥಿತಿ ಏಕೆ ಬಂತು ಎಂಬುದು ಸಹಜವಾಗಿ ಏಳುವ ಪ್ರಶ್ನೆ.

ಮುಖ್ಯಮಂತ್ರಿಗಳು ತಮ್ಮ ನಿವಾಸದಿಂದ ಕೇವಲ 15 ಕಿ.ಮೀ. ದೂರದಲ್ಲಿರುವ ರಕ್ತದಾನ ಶಿಬಿರಕ್ಕೆ ಭೇಟಿ ನೀಡಲು ಹೆಲಿಕಾಪ್ಟರ್ ಬಳಸುತ್ತಾರೆ. ಅವರ ನಿವಾಸದ ಅಲಂಕರಣಕ್ಕೆ 1 ಕೋಟಿ ರೂ.ಗಳಿಗಿಂತಲೂ ಹೆಚ್ಚು ಖರ್ಚು ಮಾಡಲಾಗಿದೆಯಂತೆ. ಬಹುಶಃ ಖಜಾನೆಯ ದುಸ್ಥಿತಿಗೆ ಇಲ್ಲಿ ಉತ್ತರದ ಸಂಕೇತ ಸಿಗುತ್ತದೆ.

ಸಪ್ಟಂಬರ್ 2ರಂದು ಅಂಗನವಾಡಿ ನೌಕರರ ರಾಜ್ಯ ಮಟ್ಟದ ಸಭೆ ಕರೆಯಲಾಗಿತ್ತು. ಅಂದು ಸಾಮಾಜಿಕ ಪೆನ್ಶನ್ ರೂ. 2000 ಮಾಡುವ ಪ್ರಕಟಣೆ ಮಾಡುತ್ತಾರೆಂಬ ನಿರೀಕ್ಷೆ ಹಲವರಲ್ಲಿತ್ತು. ಆದರೆ ಎರಡು ಗಂಟೆ ತಡವಾಗಿ ಬಂದ ಮುಖ್ಯಮಂತ್ರಿಗಳು 67000 ಫಲಾನುಭವಿಗಳ ರೇಶನ್ ಕಾರ್ಡುಗಳು ಖೋಟಾ ಎಂಬ ಅನುಮಾನವಿದೆ, ಅದ್ದರಿಂದ ಪೆನ್ಶನ್ ಹೆಚ್ಚಳಕ್ಕೆ ಇನ್ನೂ ಸ್ವಲ್ಪ ಸಮಯ ಕಾಯಬೇಕಾಗುತ್ತದೆ ಎಂದರಂತೆ. ಇನ್ನೂ 20ರಿಂದ 30 ಸಾವಿರ ರೇಶನ್ ಕಾರ್ಡಗಳು ಖೋಟಾ ಎಂದು ಗುರುತಿಸಲ್ಪಡುವ ಸಾಧ್ಯತೆ ಇದೆ ಎಂದೂ ಹೇಳಿದರು. ಇದಕ್ಕೆ ಆಧಾರಗಳೇನನ್ನೂ ಅವರು ತಿಳಿಸಲಿಲ್ಲ. ಅಂತೂ ಒಂದು ಲಕ್ಷದಷ್ಟು ಮಂದಿ ಫಲಾನುಭವಿಗಳ ಪಟ್ಟಿಯಿಂದ ಹೊರ ಹೋಗುವ ಸಂಭವ ಇದೆ. ಇನ್ನು ಪೆನ್ಶನ್ ಹೆಚ್ಚಿಸುವ ಮಾತಿಗೇನರ್ಥ?



ಮಣಿಪುರ ಸರಕಾರಕ್ಕೆ ಎಐಕೆಎಸ್ ಎಚ್ಚರಿಕೆ

ಮಣಿಪುರ್ ಲೌಮಿ ಮರುಪ್ ಅಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ಗೆ ಸಂಯೋಜಿತವಾದ ರೈತ ಸಂಘಟನೆ. ಮಣಿಪುರದ ಬಿಜೆಪಿ ನೇತೃತ್ವದ ಸರಕಾರದ ಪೋಲಿಸರು ಆಗಸ್ಟ್ 31ರಂದು ಲೌಮಿ ಮರುಪ್ ಕಚೇರಿಗೆ ಬಂದು ಸಂಘಟನೆಯ ಜಂಟಿ ಕಾರ್ಯದರ್ಶಿ ಹೈಕ್ರುಜಂ ಇಬೊಹಲ್ ರನ್ನು ಪ್ರಶ್ನಿಸಲಾರಂಭಿಸಿದರು.

ಈ ರೈತ ಸಂಘ ಹಿಂದಿನ ದಿನ ಅದರ ಅಧ್ಯಕ್ಷರ ಹೆಸರಿನಲ್ಲಿ ಒಂದು ಪತ್ರಿಕಾ ಹೇಳಿಕೆ ನೀಡಿತ್ತು. ಅದು ಆಗಸ್ಟ್31ರ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಸಪ್ಟಂಬರ್ 5ರ ದಿಲ್ಲಿ ರ್‍ಯಾಲಿಗೆ ರಾಜ್ಯದಿಮದ ರೈತರು ಮತ್ತು ಕಾರ್ಮಿಕರ ಒಮದು ತಂಡ ಹೋಗಲಿದೆ ಎಂದು ಅದರಲ್ಲಿ ಹೇಳಲಾಗಿತ್ತು. ಸಂಘದ ಕಚೇರಿಗೆ ಬಂದ ಪೊಲಿಸ್ ತಂಡ ಜಂಟಿ ಕಾರ್ಯದರ್ಶಿಯನ್ನು ಇಂಫಾಲ್ ಪೋಲೀಸ್ ಠಾಣೆಗೆ ಒಯ್ದು ಎರಡು ಗಂಟೆಗಳ ಕಾಲ ವಿಚಾರಣೆ ನಡೆಸಿತು. ದಿಲ್ಲಿಗೆ ಹೋಗುವವರ ಹೆಸರುಗಳನ್ನು ಕೊಡಬೇಕು ಎಂದು ಹೇಳಲಾಯಿತು. ಅಲ್ಲದೆ ಈ ರ್‍ಯಾಲಿಯಲ್ಲಿ ಭಾಗವಹಿಸಲು ಪ್ರಯಾಣ ಮಾಡಬಾರದು, ಮಾಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದೂ ಬೆದರಿಸಲಾಯಿತು.

ಅಖಿಲ ಭಾರತ ಕಿಸಾನ್ ಸಭಾ ಇದನ್ನು ಬಲವಾಗಿ ಖಂಡಿಸಿದೆ. ಇದು ಸರ್ವಾಧಿಕಾರಶಾಹಿ ನಡೆ, ಇದನ್ನು ನಾವು ಒಪ್ಪುವುದಿಲ್ಲ ಎಂದು ಅದು ಮಣಿಪುರ ರಾಜ್ಯಸರಕಾರವನ್ನು ಎಚ್ಚರಿಸಿದೆ.

ಜಮ್ಮು ಮತ್ತು ಕಾಶ್ಮೀರ: ರಾಜ್ಯಪಾಲರ ಮತ್ತು ಪೋಲಿಸ್ ಮುಖ್ಯಸ್ಥರ ಬದಲಾವಣೆ

ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಹೊಸ ರಾಜ್ಯಪಾಲರನ್ನು ನೇಮಿಸಲಾಗಿದೆ. ಬಿಹಾರದ ರಾಜ್ಯಪಾಲರಾಗಿದ್ದ ಸತ್ಯಪಾಲ್ ಮಲಿಕ್ ಈಗಾಗಲೇ ಅಧಿಕಾರ ವಹಿಸಿಕೊಂಡಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ನಿವೃತ್ತ ಐಎಎಸ್ ಮತ್ತಿತರ ಉನ್ನತ ಹುದ್ದೆಗಳಲ್ಲಿ, ಸೇನಾಪಡೆಗಳಲ್ಲಿ ಅಥವ ಬೇಹುಗಾರಿಕೆ ಪಡೆಗಳಲ್ಲಿ ಉನ್ನತ ಸ್ಥಾನದಲ್ಲಿದ್ದು ನಿವೃತ್ತರಾಗಿದ್ದವರನ್ನು ಈ ಗಡಿ ರಾಜ್ಯಕ್ಕೆ ರಾಜ್ಯಪಾಲರನ್ನು ನೇಮಿಸಲಾಗುತ್ತಿತ್ತು. ಈಗ ಒಬ್ಬ ರಾಜಕಾರಣಿಯನ್ನು ನೇಮಿಸಿರುವುದು ಹಲವರಿಗೆ ಆಶ್ಚರ್ಯ ತಂದಿದೆಯಂತೆ.

ಇದು ಈ ರಾಜ್ಯದಲ್ಲಿ ಕೊಸದೊಂದು ಸಂಪೂರ್ಣವಾಗಿ ತನ್ನ ಹತೋಟಿಯಲ್ಲಿರುವ ಸರಕಾರವನ್ನು ತರುವ ಬಿಜೆಪಿಯ ಹುನ್ನಾರದ ಭಾಗ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಿದ್ದಾರೆ. ಕಳೆದ ಹತ್ತು ವರ್ಷಗಳಿಂದ ರಾಜ್ಯಪಾಲರಾಗಿದ್ದ ಎನ್.ಎನ್.ವೋರಾ ಸಂವಿಧಾನದ ಕಲಮು 35ಎ ಗೆ ಸುಪ್ರಿಂ ಕೋರ್ಟಿನಲ್ಲಿ ಸವಾಲು ಹಾಕಿರುವ ಅರ್ಜಿಯ ಬಗ್ಗೆ ಕೇಂದ್ರ ಸರಕಾರದ ನಿಲುವಿನ ಬಗ್ಗೆ ಅಸಮಾಧಾನ ಹೊಂದಿದ್ದರು ಎನ್ನಲಾಗಿದೆ: ಈ ಕಲಮನ್ನು ರದ್ದು ಮಾಡುವುದಕ್ಕೆ ರಾಜ್ಯದಲ್ಲಿ ತೀವ್ರವಾದ ಆತಂಕ ಇರುವುದರಿಂದ ಇಲ್ಲಿ ಒಂದು ಚುನಾಯಿತ ಸರಕಾರ ಬರುವ ವರೆಗೆ ಅದರ ವಿಚಾರಣೆಯನ್ನು ಮುಂದೂಡುವಂತೆ ಸರಕಾರ ಪ್ರಯತ್ನಿಸಬೇಕು ಎಂಬುದು ಅವರ ಅಭಿಪ್ರಾಯ ಎನ್ನಲಾಗಿದೆ. ಅಲ್ಲದೆ ಇಲ್ಲಿ ಪಿಡಿಪಿ ಪಕ್ಷವನ್ನು ಒಡೆದು ಮತ್ತೆ ಸರಕಾರ ರಚಿಸುವ ಬಿಜೆಪಿ ಪ್ರಯತ್ನಗಳ ಬಗ್ಗೆಯೂ ಅವರು ಅಸಮಾಧಾನ ವ್ಯಕ್ತಪಡಿಸಿದ್ದರು ಎನ್ನಲಾಗಿದೆ. ಈ ಕಾರಣಕ್ಕೆ ಅವರ ಅಧಿಕಾರಾವಧಿ ಮುಗಿಯುತ್ತಿದ್ದಂತೆಯೇ ಅವರ ಸ್ಥಾನದಲ್ಲಿ ಮಲಿಕ್ ಅವರನ್ನು ನೇಮಿಸಲಾಗಿದೆ.

ಮಲಿಕ್ ಅವರು ಸಂಘ ಪರಿವಾರದ ಹಿನ್ನೆಲೆಯವರಲ್ಲ, ಸೋಶಲಿಸ್ಟ್ ಪಕ್ಷದ ಹಿನ್ನೆಲೆಯವರು. ಆದರೆ 2004ರಲ್ಲಿ ಬಿಜೆಪಿ ಸೇರಿ ಅದರ ಉಪಾಧ್ಯಕ್ಷರೂ ಆದವರು, ರಾಜ್ಯದಲ್ಲಿನ ಬಿಜೆಪಿ ಮುಖಂಡರು ಈತ 'ತಮ್ಮವ' ಎಂದು ಹೇಳುತ್ತಿದ್ದಾರಂತೆ.

ಅದೇನೆ ಇರಲಿ, ಇದುವರೆಗೆ ಬಿಜೆಪಿ ಲೆಕ್ಕಾಚಾರಗಳು ಫಲ ಕೊಡುವಂತೆ ಕಾಣುತ್ತಿಲ್ಲ. ಕಲಮು 35ಎ ಮೇಲೆ ವಿಚಾರಣೆಯನ್ನು ಸುಪ್ರಿಂ ಕೋರ್ಟ್ ಮುಂದಿನ ಜನವರಿ ತಿಂಗಳ ವರೆಗೆ ಮುಂದೂಡಿದೆ.

ಡಿಜಿಪಿ ಬದಲಾವಣೆ

ಸಪ್ಟಂಬರ್ 7ರಂದು ರಾಜ್ಯದ ಪೋಲೀಸ್ ಮಹಾನಿರ್ದೇಶಕ ಎಸ್.ಪಿ.ವೈದ್ಯರನ್ನು ಸಾರಿಗೆ ಆಯುಕ್ತರಾಗಿ ವರ್ಗಾವಣೆ ಮಾಡಲಾಗಿದೆ. ಅವರ ಸ್ಥಾನದಲ್ಲಿ ಬೇರೆಯವರನ್ನು ರಾಜ್ಯದ ಪೋಲೀಸ್ ಮುಖ್ಯಸ್ಥರಾಗಿ ನೇಮಿಸಿಲ್ಲ. ಸದ್ಯ ಡಿಜಿಪಿ(ಪ್ರಿಸನ್ಸ್) ಅವರ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುತ್ತಾರೆ ಎನ್ನಲಾಗಿದೆ. ಅವರನ್ನು ವರ್ಗಾವಣೆ ಮಾಡುವ ತುರ್ತಾದರೂ ಏನಿತ್ತು ಎಂದು ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲ ಕೇಳಿದ್ದಾರೆ. ಕಥುವ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಎಸ್ ಪಿ ವೈದ್ಯರವರ ದೃಢ ನಿಲುವಿನಿಂದ ಬಿಜೆಪಿ ಮುಖಂಡರು ಕುಪಿತರಾಗಿದ್ದರು ಎನ್ನಲಾಗಿದೆ. ಈ ಪ್ರಕರಣದ ನ್ಯಾಯಪೂರ್ಣ ವಿಚಾರಣೆ ನಡೆಸಲಾಗುವುದು ಎಂದು ಮತ್ತೆ-ಮತ್ತೆ ಆಶ್ವಾಸನೆ ನೀಡಿದ್ದ ವೈದ್ಯ ಅವರು ತನಿಖೆಯನ್ನು ಕ್ರೈಮ್ ಬ್ರಾಂಚ್‌ಗೆ ವಹಿಸಿದ್ದರು.

ಕಾರ್ಗಿಲ್‌ನಲ್ಲೂ ವಿಭಜನಕಾರಿ ರಾಜಕೀಯಕ್ಕೆ ತಿರಸ್ಕಾರ

ತಮ್ಮ 'ಕಾರ್ಗಿಲ್ ವಿಜಯ'ದ ಬಗ್ಗೆ ಬಿಜೆಪಿ ಬಹಳವಾಗಿ ಮಾತಾಡುತ್ತಿದ್ದರೂ ಅಲ್ಲಿಯ ಜನಗಳೂ ಅದರ ಕೋಮುವಾದಿ ವಿಭಜನಕಾರಿ ರಾಜಕೀಯವನ್ನು ತಿರಸ್ಕರಿಸಿರುವಂತೆ ಕಾಣುತ್ತದೆ. ಕಾರ್ಗಿಲ್ ಪ್ರದೇಶದ ಆಡಳಿತ ನಡೆಸುವ ಲಡಾಖ್ ಸ್ವಾಯತ್ತ ಗುಡ್ಡಗಾಡು ಅಭಿವೃದ್ಧಿ ಮಂಡಳಿಯ 30 ಸೀಟುಗಳ ಚುನಾವಣೆಗಳಲ್ಲಿ ಅದು ಕೇವಲ ಒಂದು ಸೀಟಿನಿಂದಲೇ ತೃಪ್ತಿ ಪಟ್ಟುಕೊಳ್ಳಬೇಕಾಗಿ ಬಂದಿದೆ.

ನಿಜ ಈ ಹಿಂದೆ ಅದು ಒಂದು ಸೀಟನ್ನೂ ಪಡೆದಿರಲಿಲ್ಲ. ಆದರೆ ಈ ಬಾರಿ ಗಮನಾರ್ಹ ಸಂಖ್ಯೆಯಲ್ಲಿ ಸೀಟುಗಳನ್ನು, ಅದರಲ್ಲೂ ಬೌದ್ಧರ ಪ್ರಾಬಲ್ಯ ಇರುವ ಲೇಹ್ ಪ್ರದೇಶದಲ್ಲಿ ಗಳಿಸುವ ನಿರೀಕ್ಷೆಯನ್ನು ಅದು ಹೊಂದಿತ್ತು ಎನ್ನಲಾಗಿದೆ. ಇತ್ತೀಚೆಗೆ ಪಿಡಿಪಿ ತ್ಯಜಿಸಿ ಪಕ್ಷೇತರ ಶಾಸಕನ ಜತೆ ಮೈತ್ರಿ ಮಾಡಿಕೊಂಡದ್ದೂ ಅದಕ್ಕೆ ಪ್ರಯೋಜನಕ್ಕೆ ಬರಲಿಲ್ಲ.

ಜಮ್ಮು ಮತ್ತು ಕಾಶ್ಮೀರದಲ್ಲಿ ಪಿಡಿಪಿ ಬೆನ್ನಮೇಲೇರಿ ಅಧಿಕಾರ ಪಡೆದ ನಂತರ ಭಾಗಶಃ ಬೌದ್ಧರ ಪ್ರಾಬಲ್ಯವಿರುವ ಲಡಾಖ್ ಪ್ರದೇಶದಲ್ಲಿ ಕಾಲೂರಲು ಶತಪ್ರಯತ್ನ ನಡೆಸುತ್ತ ಬಂದಿದೆ. ಪ್ರಧಾನ ಮಂತ್ರಿಗಳೂ ಸೇರಿದಂತೆ ಹಲವು ಉನ್ನತ ಬಿಜೆಪಿ ಮುಖಂಡರು ಹಲವು ಬಾರಿ ಈ ಪ್ರದೇಶಕ್ಕೆ ಭೇಟಿ ನೀಡಿದರು, ಹಲವು ಕಲ್ಯಾಣ ಕಾರ್ಯಕ್ರಮಗಳ ಮೂಲರಚನೆ ಪ್ರಾಜೆಕ್ಟ್‌ಗಳ ಆಶ್ವಾಸನೆಗಳನ್ನು ನೀಡಲಾಗಿತ್ತು. ಆದರೂ ಈ ಫಲಿತಾಂಶ ಅದಕ್ಕೆ ತೀವ್ರ ನಿರಾಸೆ ತಂದಿದೆ ಎನ್ನಲಾಗಿದೆ. ಅದರ ಒಂಭತ್ತು ಅಭ್ಯರ್ಥಿಗಳು ಮೂರಂಕಿ ಮತಗಳನ್ನೂ ಪಡೆಯಲಾರದೆ ಠೇವಣಿ ಕಳಕೊಂಡರು ಎಂದು ವರದಿಯಾಗಿದೆ.

2*2 ಒಪ್ಪಂದ ಭಾರತವನ್ನು ಅಮೆರಿಕನ್ ಹಿತಗಳಿಗೆ ಕಟ್ಟಿ ಹಾಕುತ್ತದೆ

ರಾಷ್ಟ್ರೀಯ ಸಾರ್ವಭೌಮತೆಯನ್ನು ಮಾರಾಟಕ್ಕಿಡುವುದನ್ನು ನಿಲ್ಲಿಸಬೇಕು: ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ಭಾರತ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳ ವಿದೇಶಾಂಗ ಮತ್ತು ರಕ್ಷಣಾ ಮಂತ್ರಿಗಳ ಮೊದಲ ಎರಡು+ಎರಡು ಸಭೆ ಅಮೆರಿಕಾದೊಂದಿಗೆ ಭಾರತದ ಸಾಮರಿಕ ಮೈತ್ರಿಯನ್ನು ಸಾಂಸ್ಥಿಕಗೊಳಿಸಿರುವುದನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕಿಸಿದೆ.

"ಸಂಪರ್ಕಗಳು, ಸಾಂಗತ್ಯ, ಭದ್ರತಾ ಒಪ್ಪಂದ"(ಸಿಒಎಂಸಿಎಎಸ್‌ಎ) ಹೇಗೆ ಮೋದಿ ಸರಕಾರ ಭಾರತೀಯ ಸಶಸ್ತ್ರ ಪಡೆಗಳನ್ನು ಪೆಂಟಗೊನ್‌ನೊಂದಿಗೆ ಹೊಸೆದುಕೊಳ್ಳುವಂತೆ ಅಮೆರಿಕನ್ ಸರಕಾರ ಮಾಡುತ್ತಿದೆ ಎಂಬುದರ ಉದಾಹರಣೆ. ರಕ್ಷಣಾ ವ್ಯವಸ್ಥೆಗಳಲ್ಲಿ ಬಳಸಲು ಭಾರತಕ್ಕೆ ಒದಗಿಸುವ ಸಂಪರ್ಕ ಸಾಧನವನ್ನು ಅಮೆರಿಕಾ ಪರಿವೀಕ್ಷಿಸುತ್ತದೆ. ಇದು ಭಾರತದ ರಕ್ಷಣಾ ಸಂಪರ್ಕ ಜಾಲವನ್ನು ಅಭದ್ರಗೊಳಿಸುತ್ತದೆ ಮತ್ತು ಭಾರತ ಇನ್ನು ಮುಂದೆ ರಕ್ಷಣಾ ಉಪಕರಣಗಳನ್ನು ಅಮೆರಿಕಾದಿಂದ ಮಾತ್ರವೇ ಖರೀದಿಸುವಂತೆ ಮಾಡುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಒಪ್ಪಂದವನ್ನು ವಿಶ್ಲೇಷಿಸುತ್ತ ಹೇಳಿದೆ.

ಮೋದಿ ಸರಕಾರ 2016ರಲ್ಲಿ 'ಸಾಗಾಣಿಕೆ ಬೆಂಬಲ ಒಪ್ಪಂದ'(ಎಲ್‌ಎಸ್‌ಎ)ದ ನಂತರ ಈ ಎರಡನೇ ಒಪ್ಪಂದವನ್ನು ಮಾಡಿಕೊಂಡಿದೆ. ಇದು ಅಮೆರಿಕನ್ ವೈಮಾನಿಕ ಪಡೆ ಮತ್ತು ನೌಕಾಪಡೆಗಳಿಗೆ ಭಾರತಿಯ ಸೌಕರ್ಯಗಳನ್ನು ಬಳಸಲು ಅವಕಾಶ ಮಾಡಿ ಕೊಡುತ್ತದೆ.

ಅಮೆರಿಕ ಸಂಯುಕ್ತ ಸಂಸ್ಥಾನಗಳೊಡನೆ ಮಿಲಿಟರಿ ಮತ್ತು ವ್ಯೂಹಾತ್ಮಕ ಮೈತ್ರಿ ಭಾರತದ ಸಾಮರಿಕ ಸ್ವಾಯತ್ತತೆಗೆ ಮತ್ತು ಸ್ವತಂತ್ರ ವಿದೇಶಾಂಗ ಧೋರಣೆಯ ನಿರ್ಣಯಗಳನ್ನು ಕೈಗೊಳ್ಳುವಲ್ಲಿ ಬಾಧಕವಾಗಲಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಮೋದಿ ಸರಕಾರ ಇಂತಹ ಮಿಲಿಟರಿ ಒಪ್ಪಂದಗಳನ್ನು ಮಾಡಿಕೊಳ್ಳುವುದನ್ನು ಮತ್ತು ಭಾರತದ ರಾಷ್ಟ್ರೀಯ ಸಾರ್ವಭೌಮತೆಯನ್ನು ಮಾರಾಟಕ್ಕೆ ಇಡುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದೆ.

ಸೆಕ್ಷನ್ 377 ರದ್ದು

ಸಿಪಿಐ(ಎಂ) ಸ್ವಾಗತ

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 377 ನ್ನು ರದ್ದು ಮಾಡಿ ಆಮೂಲಕ ವಯಸ್ಕರ ನಡುವೆ ಸಲಿಂಗ ಸಮ್ಮತಿಯ ಸಂಬಂಧಗಳನ್ನು ಅಪರಾಧಮುಕ್ತಗೊಳಿಸಿರುವ ಸುಪ್ರಿಂ ಕೋರ್ಟ್ ತೀರ್ಪನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸ್ವಾಗತಿಸಿದೆ.

ಇದು ಪ್ರತಿಗಾಮಿ ಶಕ್ತಿಗಳಿಂದ ಅವಮಾನ, ಮತಾಂಧತೆ ಮತ್ತು ಹಿಂಸಾಚಾರವನ್ನೂ ಅನುಭವಿಸಬೇಕಾಗಿ ಬಂದಿರುವ ಎಲ್‌ಜಿಬಿಟಿ ಸಮುದಾಯಗಳಿಗೆ ಒಂದು ಚಾರಿತ್ರಿಕ ವಿಜಯವಾಗಿದೆ ಎಂದಿರುವ ಪೊಲಿಟ್‌ಬ್ಯುರೊ ಸಿಪಿಐ(ಎಂ) ಸದಾ ಈ ಸೆಕ್ಷನ್ 377 ರ ವಿರುದ್ಧ ಹೋರಾಟಗಳನ್ನು ಬೆಂಬಲಿಸಿಕೊಂಡು ಬಂದಿದೆ, ಈ ಸೆಕ್ಷನ್ ಅವಿಚಾರಿ ಮತ್ತು ಪಕ್ಷಪಾತಪೂರ್ಣ ಎಂದು ಸುಪ್ರಿಂ ಕೋರ್ಟ್ ಹೇಳಿರುವುದು ಸರಿಯಾಗಿಯೇ ಇದೆ ಎಂದಿದೆ.

ಅಮೆರಿಕನ್ ಮಿಲಿಟರಿ ಆಕ್ರಾಮಕತೆಯಿಂದಾಗಿ
ಮನುಕುಲದ ಸರ್ವನಾಶದಿಂದ ಕೇವಲ 2 ಮಿನಿಟು ದೂರದಲ್ಲಿ

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಇಂದು ಅಮೆರಿಕವು ಎಬಿಎಂ ಒಪ್ಪಂದದಿಂದ ಹೊರಗೆ ಬಂದಿದೆ. START-II ಒಪ್ಪಂದ 2021 ರಲ್ಲಿ ಕೊನೆಗೊಳ್ಳುತ್ತದೆ. ಮತ್ತು ಇಂಟರ್ ಮೀಡಿಯೆಟ್-ರೇಂಜ್ ನ್ಯೂಕ್ಲಿಯರ್ ಪೋರ್ಸ್ಸ್ ಟ್ರೀಟಿ (INF) 2019 ರಲ್ಲಿಯೇ ಕೊನೆಯಾಗಲಿದೆ. ಆದರೆ, ಪರಮಾಣು ನಿರಸ್ತ್ರೀಕರಣದ ಬಗ್ಗೆ ಯಾವುದೇ ರೀತಿಯ ಹೊಸ ಮಾತುಕತೆಗಳು ನಡೆಯುತ್ತಿಲ್ಲ. ಜಗತ್ತು ಒಂದು ಹೊಸ ಪರಮಾಣು ಶಸ್ತ್ರಾಸ್ತ್ರಗಳ ಪೈಪೋಟಿಯತ್ತ ಓಟ ಆರಂಭಿಸಿದೆ ಮತ್ತು ಅದು ಮನುಕುಲದ ಪೂರ್ಣ ವಿನಾಶದತ್ತ ಓಟ ಎಂಬುದರ ಅರಿವು ಅವರಲ್ಲಿ ಇನ್ನೂ ಮೂಡಿಲ್ಲ ಎಂಬುದು ಆತಂಕಕಾರಿ. ಪರಮಾಣು ಶಸ್ತ್ರಾಸ್ತ್ರಗಳ ರಾಷ್ಟ್ರ ಗಳು ಸೇರಿದಂತೆ ಇಡೀ ಜಗತ್ತಿನ ಜನರು ಶಾಂತಿ ಪ್ರಕ್ರಿಯೆಗಾಗಿ ಪರಮಾಣು ನಿರಸ್ತ್ರೀಕರಣಕ್ಕಾಗಿ ವಿಶಾಲವಾದ ಚಳುವಳಿಯೊಂದನ್ನು ಕಟ್ಟಿದ ಹೊರತು, ಮನುಕುಲ ಸರ್ವನಾಶದ ಅಪಾಯದಿಂದ ಕೇವಲ 2 ಮಿನಿಟು ದೂರದಲ್ಲಿದೆ.

ಇತ್ತೀಚೆಗಷ್ಟೇ ಹಿರೋಷಿಮಾ-ನಾಗಾಸಾಕಿ ದಿನಗಳನ್ನು ಆಚರಿಸಿ ಅಣ್ವಸ್ತ್ರಗಳ ಬಳಕೆಯ ಭೀಕರ ಪರಿಣಾಮಗಳ ಬಗ್ಗೆ ಮತ್ತು ಅಣ್ವಸ್ತ್ರಗಳ ಬಳಕೆ ಎಂದೂ ಆಗದಂತೆ ತಡೆಯುವುದು ಹೇಗೆ ಎಂಬುದರ ಬಗ್ಗೆ ಜಗತ್ತಿನಾದ್ಯಂತ ಸಂವಾದ ಪ್ರಚಾರಾಂದೋಲನಗಳು ನಡೆದಿದ್ದವು. ಹಿರೋಷಿಮಾ-ನಾಗಾಸಾಕಿಯಲ್ಲಿ ಅಣ್ವಸ್ತ್ರಗಳ ಬಳಕೆಯ ಭೀಕರತೆ ವಿಜ್ಞಾನ-ತಂತ್ರಜ್ಞಾನದ ದುರ್ಬಳಕೆ ಬಗ್ಗೆ ವಿಜ್ಞಾನಿಗಳಲ್ಲಿ (ಅದರಲ್ಲೂ ಅಣುವಿಜ್ಞಾನಿಗಳಲ್ಲಿ) ತೀವ್ರ ಆತಂಕ ಮತ್ತು ಪ್ರಜ್ಞೆ ಮೂಡಿಸಿತ್ತು. ಆ ಹಿನ್ನೆಲೆಯಲ್ಲಿ 1949ರಲ್ಲಿ "ಬುಲೆಟಿನ್ ಆಫ್ ದಿ ಆಟಾಮಿಕ್ ಸೈಂಟಿಸ್ಟ್ಸ್" ಅಣ್ವಸ್ತ್ರಗಳ ಬಳಕೆಯಾದರೆ ಮನುಕುಲ ಸರ್ವನಾಶವಾಗಲು ಎಷ್ಟು ಸಮಯ ಬೇಕು ಎಂಬುದನ್ನು ತಿಳಿಸಲು ಒಂದು 'ಅಣು ಕ್ಲಾಕ್' ವಿನ್ಯಾಸ ಮಾಡಿತ್ತು. ಸರ್ವನಾಶದ ಸಮಯವನ್ನು ಮಧ್ಯರಾತ್ರಿಯೆಂದು ಕರೆದು ಅದಕ್ಕೆ ಎಷ್ಟು ಸಮಯ ಬೇಕು ಎಂಬುದನ್ನು ಅಳೆಯುತ್ತಿತ್ತು. ಇದಕ್ಕೆ ಒಟ್ಟು ಅಣ್ವಸ್ತ್ರಗಳು, ಅಣ್ವಸ್ತ್ರ ಪೈಪೋಟಿಯ ಮಟ್ಟ, ಅದರ ಮಾರಕ ಸಾಧ್ಯತೆ, ಅವುಗಳ ಬಳಕೆಗೆ ಇರುವ ಅಂತರಾಷ್ಟ್ರೀಯ ಒಪ್ಪಂದಗಳು, ರಾಜಕೀಯ ತಾಂತ್ರಿಕ ನಿಯಂತ್ರಣಗಳು ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಂಡಿತ್ತು. ಇದು ಆ ಕರಾಳ ಮಧ್ಯರಾತ್ರಿಯ ಹತ್ತಿರ ಬಂದಿದ್ದು, ಅಂದರೆ ಕೇವಲ ಎರಡು ಮಿನಿಟು ದೂರದಲ್ಲಿ ಇದ್ದಿದ್ದು, 1962ರ ಕ್ಯೂಬನ್ ಕ್ಷಿಪಣಿ ಬಿಕ್ಕಟ್ಟು ಸಂದರ್ಭದಲ್ಲಿ. ಈಗ ಅದರ ನಂತರ ಪುನಃ ಅಷ್ಟೇ ದೂರದಲ್ಲಿ ಅಂದರೆ ಎರಡು ಮಿನಿಟು ದೂರದಲ್ಲಿದೆ ಎನ್ನಲಾಗಿದೆ. ಈ ನಡುವಿನ ದಶಕಗಳಲ್ಲಿ ಯು.ಎಸ್-ಸೋವಿಯೆಟ್ ಹಾಗೂ ಆ ಮೇಲೆ ಯು.ಎಸ್.-ರಶ್ಯಾಗಳ ನಡುವೆ ಪರಮಾಣು ಶಸ್ತ್ರಾಸ್ತ್ರ ನಿಯಂತ್ರಣ ಒಪ್ಪಂದಗಳ ಬಗ್ಗೆ ಸಾಕಷ್ಟು ಪ್ರಗತಿಯಾಗಿದ್ದರೂ ಯಾಕೀ ಸ್ಥಿತಿ?

ಪರಮಾಣು ಶಸ್ತ್ರಾಸ್ತ್ರ ಪೈಪೋಟಿ

ಇದಕ್ಕೆ ಮುಖ್ಯ ಕಾರಣ 1990 ರ ನಂತರ ಅಮೆರಿಕವು ಶೀತಲ ಸಮರವನ್ನು ಗೆದ್ದಿದ್ದೇನೆ, ರಶ್ಯಾವನ್ನು ಸೋತ ದೇಶವಾಗಿ ಅಡಿಯಾಳಾಗಿಸಬಹುದು ಎಂದು ಭಾವಿಸಿದ್ದು. ಆದರೆ, ರಷ್ಯಾದ ನಾಯಕರುಗಳಾದ ಗೋರ್ಬಚೇವ್, ಯೆಲ್ಸಿನ್ ಮತ್ತು ಈಗಿನ ಪುತಿನ್ ಕೂಡಾ, ರಷ್ಯಾ ದ ಭವಿಷ್ಯ ಯುರೋಪಿಯನ್ ರಾಷ್ಟ್ರ ಗಳೊಂದಿಗೆ ಇದ್ದು, ಅದಕ್ಕೆ ಸಮ ಪಾಲುದಾರಿಕೆ ಸಿಗಬೇಕು ಎಂದು ಭಾವಿಸಿದ್ದರು. ಮಾತ್ರವಲ್ಲದೆ, ಅಮೆರಿಕ ಮತ್ತು ನ್ಯಾಟೋ ಮೈತ್ರಿ ಕೂಟಗಳು ಪೂರ್ವದ ಕಡೆ ತಮ್ಮ ಅಣ್ವಸ್ತ್ರ ಗಳನ್ನು ವಿಸ್ತರಣೆ ಮಾಡುವುದಿಲ್ಲ ವೆಂದೂ ಕೂಡಾ ನಂಬಿದ್ದರು. ಆದರ ಬದಲಾಗಿ, ಅಮೆರಿಕ ಮತ್ತು ನಾಟೋ ಮೈತ್ರಿಕೂಟ, ರಷ್ಯಾ ಎರಡನೇ ದರ್ಜೆಯ ಒಂದು ಪ್ರಾದೇಶಿಕ ಶಕ್ತಿ ಮಾತ್ರವೆಂದು ಗುರುತಿಸಿದರು. ಆದ್ದರಿಂದ ಅದನ್ನು ಬಗ್ಗುಬಡಿಯಬೇಕು ಎಂದುಕೊಂಡರು. ಇಂತಹ ತಿಳುವಳಿಕೆ ಯೊಂದಿಗೆ, ಅಮೆರಿಕ ಮತ್ತು ನಾಟೋ ಮೈತ್ರಿಕೂಟಗಳು ಒಂದೊಂದಾಗಿ ಶಸ್ತ್ರಾಸ್ತ್ರ ಒಪ್ಪಂದಗಳಿಂದ ಹೊರಗೆ ಬರಲಾರಂಭಿಸಿದವು.

ಬಹು ಪ್ರಮುಖವಾದ ಆಂಟಿ-ಬ್ಯಾಲಿಸ್ಟಿಕ್ ಕ್ಷಿಪಣಿ (ಎಬಿಎಂ) ಒಪ್ಪಂದ ದಿಂದ 2002 ರಲ್ಲಿ ಹೊರ ಬಂದರು. ಅಣ್ವಸ್ತ್ರ ಯುದ್ಧಗಳನ್ನು ಗೆಲ್ಲಲು ಅಸಾಧ್ಯ ಎಂಬ ಅರಿವು ಎಬಿಎಂ ಒಪ್ಪಂದಕ್ಕೆ ಮುಖ್ಯ ಕಾರಣವಾಗಿತ್ತು. ಯಾವುದೇ ಒಂದು ರಾಷ್ಟ್ರವು ಅಣ್ವಸ್ತ್ರ ಹೊಂದಿರುವ ವಿರೋಧಿಗಳ ಮೇಲೆ ಅಣ್ವಸ್ತ್ರಗಳನ್ನು ಪ್ರಯೋಗಿಸಿದರೆ ಆ ದೇಶವೂ ವಾಪಸು ಕ್ಷಿಪಣಿ ದಾಳಿ ಮಾಡಬಲ್ಲುದು, ಅದರಲ್ಲೂ ವಿಶೇಷವಾಗಿ ಎಬಿಎಂ-ವಿರೋಧಿ ಗುರಾಣಿ ಗಳನ್ನು ವಿರೋಧಿ ದೇಶ ಹೊಂದಿದ್ದರೆ. ಅದರ ಪ್ರತಿದಾಳಿಯಲ್ಲಿ ತಮ್ಮ ಅಣ್ವಸ್ತ್ರಗಳ ನಾಶ ಸಾಧ್ಯ. ಆದ್ದರಿಂದ ಯಾವುದೇ ದೇಶ ಅಣ್ವಸ್ತ್ರ ಯುದ್ಧ ಗೆಲ್ಲುವುದು ಕಷ್ಟ. ಆದರೆ ಈ ಪರಿಸ್ಥಿತಿ ಎದುರಿಸಲು ಶಸ್ತ್ರಾಸ್ತ್ರಗಳ ಸಂಖ್ಯೆಯನ್ನು ಹೆಚ್ಚಿಸಿ ಕೊಳ್ಳಲು ಈ ದೇಶಗಳು ಮುಂದಾಗಿದ್ದವು. ಇದನ್ನೇ ಶೀತಲ ಸಮರವೆಂದು ಭಾವಿಸಲಾಗುವುದು. ಈ ಶೀತಲ ಸಮರದ ಹಿನ್ನೆಲೆಯಲ್ಲಿಯೇ, ಅಮೆರಿಕ ಮತ್ತು ಸೋವಿಯತ್ ಯೂನಿಯನ್ ಸುಮಾರು 60 ಸಾವಿರ ಪರಮಾಣು ಶಸ್ತ್ರಾಸ್ತ್ರಗಳ ಸಿಡಿತಲೆಗಳನ್ನು ಶೇಖರಿಸಿ ಕೊಂಡಿದ್ದವು.

ಇಂತಹ ಎಷ್ಟೇ ಅಣ್ವಸ್ತ್ರ ಪೈಪೋಟಿ ನಡೆಯುತ್ತಿದ್ದರೂ ಸಹ, ಅಣ್ವಸ್ತ್ರ ಯುದ್ಧ ಗೆಲುವುದು ಅಸಾಧ್ಯವೆಂಬ ವಾಸ್ತವ ಪ್ರಜ್ಞೆಯಿಂದಾಗಿ, ಯಾವುದೇ ಅನಾಹುತಕ್ಕೆ ಮುಂದಾಗಬಾರದೆಂಬ ತೀರ್ಮಾನಕ್ಕೆ ಬರಲಾಗಿತ್ತು. ಆದ್ದರಿಂದ ಈ ಅನಾಹುತದ ಅಪಾಯ ಕಡಿಮೆ ಮಾಡಲು, ಎಬಿಎಂ-ವಿರೋಧಿ ಗುರಾಣಿ ಮತ್ತು ಅದು ಪ್ರಚೋದಿಸಬಹುದಾದ ಶಸ್ತ್ರಾಸ್ತ್ರಗಳ ಸಂಖ್ಯೆಗೆ ಮಿತಿ ವಿಧಿಸುವ ಮಾತುಕತೆಗಳು ಆರಂಭವಾದವು. ಹಾಗಾಗಿ, ಅಣ್ವಸ್ತ್ರ ಮಿತಿಗೊಳಿಸುವ ಸ್ಟ್ರಾಟೆಜಿಕ್ ಆರ್ಮ್ಸ್ ಲಿಮಿಟೇಶನ್ ಟ್ರೀಟಿಸ್ (SALT) ಗಳನ್ನು ಆರಂಭಿಸಲಾಯಿತು. ಆನಂತರದಲ್ಲಿ, ಇದು ಅಣ್ವಸ್ತ್ರ ಕಡಿತಗೊಳಿಸುವ ಸ್ಟ್ರಾಟೆಜಿಕ್ ಆರ್ಮ್ಸ್ ರಿಡಕ್ಷನ್ ಟ್ರೀಟೀಸ್ (START) ಆಗಿ ಮುಂದುವರೆಯಿತು.



ಇದರಿಂದಾಗಿಯೇ ಪರಮಾಣು ದಾಸ್ತಾನುಗಳು ಈ ಎರಡು ದೇಶಗಳಲ್ಲಿ 60 ಸಾವಿರದಿಂದ ದಿಂದ ಇದೀಗ ಸುಮಾರು 14.5 ಸಾವಿರಕ್ಕೆ ಇಳಿಕೆಯಾಗಿದೆ. ಆದರೆ ಈ ಸಂಖ್ಯೆ ಕೂಡಾ 40 ಬಾರಿ ಭೂಮಿಯ ಮೇಲಿರುವ ಎಲ್ಲಾ ಜೀವಿಗಳನ್ನು ಸರ್ವನಾಶ ಮಾಡುವಷ್ಟು ಸಾಮರ್ಥ್ಯವನ್ನು ಹೊಂದಿದ್ದು, ಅರ್ಥಹೀನವಾದುದ್ದು.

ಸರ್ವನಾಶದ ಕಡೆಗೆ ಓಟ

ಇಂದು ಅಮೆರಿಕವು ಎಬಿಎಂ ಒಪ್ಪಂದದಿಂದ ಹೊರಗೆ ಬಂದಿದೆ. START-II ಒಪ್ಪಂದ 2021 ರಲ್ಲಿ ಕೊನೆಗೊಳ್ಳುತ್ತದೆ. ಮತ್ತು ಇಂಟರ್ ಮೀಡಿಯೆಟ್-ರೇಂಜ್ ನ್ಯೂಕ್ಲಿಯರ್ ಪೋರ್ಸ್ಸ್ ಟ್ರೀಟಿ (INF) 2019 ರಲ್ಲಿಯೇ ಕೊನೆಯಾಗಲಿದೆ. ಆದರೆ, ಪರಮಾಣು ನಿರಸ್ತ್ರೀಕರಣದ ಬಗ್ಗೆ ಯಾವುದೇ ರೀತಿಯ ಹೊಸ ಮಾತುಕತೆಗಳು ನಡೆಯುತ್ತಿಲ್ಲ. 1967 ರಲ್ಲಿ ಅಣ್ವಸ್ತ್ರ ಹೊಸ ದೇಶಗಳಿಗೆ ಹರಡದಂತೆ ನ್ಯೂಕ್ಲಿಯರ್ ನಾನ್ ಪ್ರೊಲಿಫರೇಷನ್ ಒಪ್ಪಂದದ (NPT) ಸಂದರ್ಭದಲ್ಲಿ ಈ ಬಗ್ಗೆ ಕೊಟ್ಟ ಆಶ್ವಾಸನೆಗಳನ್ನೆಲ್ಲಾ ಗಾಳಿಗೆ ತೂರಲಾಗುತ್ತಿದೆ. ಬದಲಿಗೆ ಈಗಾಗಲೇ, ಅಮೆರಿಕ ಒಬಾಮ ಆಡಳಿತದಲ್ಲಿ ಪರಮಾಣು ಅಸ್ತ್ರಗಳ ಆಧುನಿಕೀಕರಣಕ್ಕೆ ಟ್ರಿಲಿಯನ್ ಡಾಲರ್ ಯೋಜನೆಯನ್ನು ಆರಂಬಿಸಲಾಗಿದೆ. ಇದೀಗ ಟ್ರಂಪ್ 2018 ರ. ಅಣ್ವಸ್ತ್ರ ಯುದ್ಧ ವ್ಯೂಹದ ವಿಮರ್ಶೆಯಲ್ಲಿ, ವ್ಯೂಹಾತ್ಮಕವಲ್ಲದ ಪರಮಾಣುಗಳ ಶಸ್ತ್ರಾಸ್ತ್ರಗಳ ಬಳಕೆ ಮತ್ತು ಪರಮಾಣು ಅಸ್ತ್ರವಿಲ್ಲದ ದೇಶಗಳ ಮೇಲೆ ದಾಳಿಯನ್ನು ಸೇರಿಸಲಾಗಿದೆ. ಈ ಎರಡೂ ಅಂಶಗಳು ಹಿಂದೆ ನಿಷಿದ್ಧವಾಗಿದ್ದು, ಪರಮಾಣು ಶಸ್ತ್ರಾಸ್ತ್ರಗಳ ಬಳಕೆಯ ಅಪಾಯವನ್ನು ಹೆಚ್ಚಿಸಿವೆ. ರಷ್ಯಾದ ಗಡಿಯಲ್ಲಿ ಅಣು ಗುರಾಣಿ ಗಳನ್ನು ಸ್ಥಾಪಿಸುವುದರ ಜೊತೆಗೆ ಅಮೆರಿಕವು, ರೊಮೇನಿಯಾ ಮತ್ತು ಪೋಲೆಂಡ್ ಪ್ರದೇಶಗಳಲ್ಲಿ ತನ್ನ ಕ್ಷಿಪಣಿ ನೆಲೆಗಳನ್ನು ಸ್ಥಾಪಿಸಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ ರಷ್ಯಾವು ಕೂಡ ಪರಮಾಣು ಶಸ್ತ್ರಾಸ್ತ್ರಗಳ ವಿವಿದ ಅಭಿವೃದ್ಧಿ ಪ್ರಕ್ರಿಯೆ ಯಲ್ಲಿ ತೊಡಗಿಸಿಕೊಂಡಿದೆ. ಈಗ ಎರಡು ರಾಷ್ಟ್ರ ಗಳು ಕ್ಷಿಪಣಿ ಗುರಾಣಿ ಗಳಿಂದ ತಪ್ಪಿಸಿಕೊಳ್ಳುವ ತಂತ್ರಜ್ಞಾನ ಅಭಿವೃದ್ಧಿಯ ನಿಟ್ಟಿನಲ್ಲಿ ಸಜಾಗುತ್ತಿವೆ. ಪರಮಾಣು ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಬದಲು, ಹೊಸ ಪರಮಾಣು ಶಸ್ತ್ರಾಸ್ತ್ರಗಳ ಪೈಪೋಟಿಯತ್ತ ಮತ್ತು ಮನುಕುಲದ ಪೂರ್ಣ ವಿನಾಶದತ್ತ ಓಟ ಆರಂಭವಾಗಿದೆ ಎಂಬ ಆತಂಕ ಜಗತ್ತನ್ನು ಆವರಿಸಿದೆ.

ಜನವರಿ 2018 ರಲ್ಲಿ, ಜಗತ್ತಿನ ಪರಮಾಣು ಶಕ್ತಿ ರಾಷ್ಟಗಳು ಯಾವುವೆಂಬ ಮಾಹಿತಿಯನ್ನು, SIPRI (ಎಸ್.ಐ.ಪಿ.ಆರ್.ಐ-ಸಿಪ್ರಿ) 2018 ರ ವಾರ್ಷಿಕ ಪುಸ್ತಕ ಒದಗಿಸಿದೆ. ಅದರಂತೆ, ಅಮೆರಿಕ 6,450 ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿದೆ, ರಷ್ಯಾ 6850 ಹೊಂದಿದೆ. ಆನಂತರದ ಸ್ಥಾನ ಗಳಲ್ಲಿ, ಫ್ರಾನ್ಸ್ (300), ಯುಕೆ (215), ಚೀನಾ (280), ಇಸ್ರೇಲ್ (80), ಇಂಡಿಯಾ (130-140), ಪಾಕಿಸ್ತಾನ (140-150), ಉತ್ತರ ಕೊರಿಯಾ (10-20) ಬರುತ್ತವೆ. ಒಟ್ಟು 14,465 ಕ್ಷಿಪಣಿ ಗಳನ್ನು ಈ ಎಲ್ಲಾ ದೇಶಗಳು ಹೊಂದಿವೆ ಎಂಬ ಮಾಹಿತಿಯನ್ನು ಒದಗಿಸಲಾಗಿದೆ.

ರಷ್ಯಾವು ಎಬಿಎಂ ಗುರಾಣಿ ಗಳನ್ನು ಸೋಲಿಸಲು ಹೊಸ ಹೊಸ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಪ್ರಕ್ರಿಯೆಯು ಸಾಕಷ್ಟು ಅಪಾಯಕಾರಿಯಾಗಿದೆ. ಎಬಿಎಂ ಗುರಾಣಿ ಗಳ ರಾಡಾರಿನ ಕೆಳಭಾಗದಲ್ಲಿ ಹಾರಲು ಸಿದ್ದವಿರುವ ಸುದೀರ್ಘ ಶ್ರೇಣಿಯ ಕ್ರೂಸ್ ಕ್ಷಿಪಣಿ ಗಳು, ನೀರೊಳಗಿನ ಡ್ರೋನ್ ಗಳು, ಹೈಪೋಸೋನಿಕ್ ಕ್ಷಿಪಣಿಗಳು, 200 ಟನ್ ಉದ್ದದ ಅಂತರ ಖಂಡಾಂತರ ಕ್ಷಿಪಣಿ ಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಯಾವುದೇ ದಿಕ್ಕಿನಿಂದ ಅಮೆರಿಕ ವನ್ನು ಹೊಡೆಯಲು ಸಿದ್ದವಿರುವ ಕ್ಷಿಪಣಿ ಗಳು, ಅಲಾಸ್ಕಾದಲ್ಲಿ ರುವ ಅಮೆರಿಕದ ಗುರಾಣಿಯನ್ನು ನಿಷ್ಪ್ರಯೋಜಕಗೊಳಿಸಲಿವೆ ಎನ್ನಲಾಗಿದೆ. ಅಧ್ಯಕ್ಷ ಪುತಿನ್ ಹೊಸ ಶಸ್ತ್ರಾಸ್ತ್ರಗಳ ಘೋಷಣೆಯನ್ನು ಮಾಡುತ್ತಾ, 'ರಷ್ಯಾವು ದುರ್ಬಲವಾಗಿಲ್ಲ. ಮಾತುಕತೆ ಮಾಡಿ' ಎಂದರು. ಆದರೆ ಯು.ಎಸ್, ನಾಟೋ ದೇಶಗಳ ನಾಯಕತ್ವಕ್ಕೆ ಇದು ಕೇಳಿಸುತ್ತಿಲ್ಲ. ಜಗತ್ತು ಒಂದು ಹೊಸ ಪರಮಾಣು ಶಸ್ತ್ರಾಸ್ತ್ರಗಳ ಪೈಪೋಟಿಯತ್ತ ಓಟ ಆರಂಭಿಸಿದೆ ಮತ್ತು ಅದು ಮನುಕುಲದ ಪೂರ್ಣ ವಿನಾಶದತ್ತ ಓಟ ಎಂಬುದರ ಅರಿವು ಅವರಲ್ಲಿ ಇನ್ನೂ ಮೂಡಿಲ್ಲ ಎಂಬುದು ಆತಂಕಕಾರಿ.

ರಶ್ಯಾ ಆಕ್ರಾಮಕವೇ ಅಥವಾ ಯು.ಎಸ್./ನಾಟೋ ?

ಇಂದು ಜಾಗತಿಕ ಮಾಧ್ಯಮವನ್ನು ನಿಯಂತ್ರಿಸುವ ಅಮೆರಿಕ ದ ಮಾಧ್ಯಮಗಳು ರಷ್ಯಾದ ಪುತಿನ್ ಆಕ್ರಮಣಕಾರಿ ಮತ್ತು ಅಪಾಯಕಾರಿ ಎಂಬ ಕಥನವನ್ನು ಹುಟ್ಟಿಹಾಕುತ್ತಿದ್ದಾರೆ. ನಾಟೋದ ಪೂರ್ವದ ವಿಸ್ತರಣೆ, ನಾಟೋ-ರಷ್ಯಾ ದೇಶಗಳ ತುಲನಾತ್ಮಕ ರಕ್ಷಣಾ ಖರ್ಚುಗಳನ್ನು ಮಾತ್ರ ಅವು ಬಚ್ಚಿಡುತ್ತಿವೆ. ನಾಟೋ ಮಿತ್ರ ರಾಷ್ಟಗಳು ರಕ್ಷಣಾ ವಲಯಕ್ಕೆ ಹೆಚ್ಚು ಖರ್ಚು ಮಾಡಬೇಕೆಂದು ಅಧ್ಯಕ್ಷ ಟ್ರಂಪ್ ಒತ್ತಾಯಿಸಿದ ಹಿನ್ನೆಲೆಯಲ್ಲಿ, ವಿವಿಧ ರಾಷ್ಟಗಳ ರಕ್ಷಣಾವೆಚ್ಚ ಗಳನ್ನು ನೋಡೋಣ. ಸಿಪ್ರಿ ಪ್ರಕಾರ, 2017ರಲ್ಲಿ ನಾಟೋ 957 ಶತಕೋಟಿ ಡಾಲರ್ ಖರ್ಚು ಮಾಡಿದೆ. ಆದರೆ ರಷ್ಯಾವು 66.3 ಶತಕೋಟಿ ಡಾಲರ್ ಮಾತ್ರ ಖರ್ಚು ಮಾಡಿದೆ. ಅಂದರೆ ನಾಟೋ ದ ರಕ್ಷಣಾ ಬಜೆಟ್ ರಷ್ಯಾಕಿಂತ ಸುಮಾರು 15 ಪಟ್ಟು ಹೆಚ್ಚಾಗಿದೆ. ಅಮೆರಿಕ ಒಂದೇ 686 ಶತಕೋಟಿ ಡಾಲರ್ ನಷ್ಟು ಖರ್ಚು ಮಾಡಿದೆ. ಅದೇ ರಷ್ಯಾದ ರಕ್ಷಣಾ ವೆಚ್ಚಕ್ಕಿಂತ 10 ಪಟ್ಟು ಹೆಚ್ಚು. ಟ್ರಂಪ್ ತನ್ನ ಮಿತ್ರ ರಾಷ್ಟಗಳಿಗೆ ಹೆಚ್ಚು ಖರ್ಚು ಮಾಡಬೇಕೆಂದು ಒತ್ತಾಯ ಮಾಡುತ್ತಲೇ ಇದ್ದಾರೆ. ಆದರೆ ಆಗಲೇ ನಾಟೋ ಮಿತ್ರ (ಅಮೆರಿಕ ಹೊರತು ಪಡಿಸಿ ಇತರ) ರಾಷ್ಟಗಳು ರಷ್ಯಾಕ್ಕಿಂತ ನಾಲ್ಕು ಪಟ್ಟು ಹೆಚ್ಚು ಖರ್ಚನ್ನು ಮಾಡಿದ್ದಾರೆ. ಈಗ ಹೇಳಿ ರಶ್ಯಾ ಆಕ್ರಾಮಕವೇ ಯು.ಎಸ್ ಮತ್ತು ಅದರ ಯುರೋ ಮಿತ್ರರಾಷ್ಟ್ರಗಳು ಆಕ್ರಾಮಕವೇ?

2017 ರಲ್ಲಿ ಒಟ್ಟು ಜಾಗತಿಕ ವೆಚ್ಚದಲ್ಲಿ, ಶೇ.55 ರಷ್ಟು ಪಾಲನ್ನು ನಾಟೋ ಮಿತ್ರ ರಾಷ್ಟಗಳು ಮಾಡಿವೆ. ಪಶ್ಚಿಮ ಏಷ್ಯಾದ ನಾಟೋ ಮಿತ್ರರಾಷ್ಟ್ರ ಸೌದಿ ಅರೇಬಿಯಾ, 69.3 ಶತಕೋಟಿ ಖರ್ಚು ಮಾಡಿದೆ. ಅದು ರಷ್ಯಾದ ರಕ್ಷಣಾ ಖರ್ಚಿಗಿಂತ ಹೆಚ್ಚಾಗಿದೆ. ಸೌದಿ ಅರೇಬಿಯಾ ಕ್ಕೆ ಹೋಲಿಸಿದಾಗ, ಇರಾನ್ 14 ಶತಕೋಟಿ ಖರ್ಚು ಮಾಡಿದೆ. ಇದು ಸೌದಿ ಅರೇಬಿಯಾದ ರಕ್ಷಣಾ ಬಜೆಟ್ ಗಿಂತ ಐದನೇ ಒಂದು ಭಾಗದಷ್ಟು ಕಡಿಮೆ ಇದೆ. ಆದರೂ ಇರಾನ್ ಸಹ ಆಕ್ರಾಮಕ ಅಪಾಯಕಾರಿ ಎನ್ನಲಾಗುತ್ತಿದೆ. 2017 ರಲ್ಲಿ, ಪರಮಾಣು ಶಸ್ತ್ರಾಸ್ತ್ರಗಳ ನ್ನು ನಿಷೇಧಿಸುವ ಅಂತರಾಷ್ಟ್ರೀಯ ಅಭಿಯಾನಕ್ಕೆ ನೋಬೆಲ್ ಪ್ರಶಸ್ತಿಯನ್ನು ನೀಡಲಾಯಿತು. ಆದರೆ ಜುಲೈ 2017 ರಲ್ಲಿ ಪರಮಾಣು ಶಸ್ತ್ರಾಸ್ತ್ರಗಳ ನಿಷೇಧದ ಒಪ್ಪಂದವನ್ನು, ಅಳವಡಿಸಿ ಕೊಳ್ಳಲು 122 ವಿಶ್ವಸಂಸ್ಥೆಯ ಸದಸ್ಯ ರಾಷ್ಟ ಗಳನ್ನು ಒಪ್ಪಿಸಲು ವಕಾಲತ್ತನ್ನು ವಹಿಸಿತ್ತು. ಆದರೆ 9 ಅಣ್ವಸ್ತ್ರ ರಾಷ್ಟಗಳಲ್ಲಿ ಯಾವುದೇ ರಾಷ್ಟ ಇದರಲ್ಲಿ ಒಳಗೊಂಡಿರಲಿಲ್ಲವೆಂಬುದು ವಿಪರ್ಯಾಸವೇ ಸರಿ.

ಮನುಕುಲ ಸರ್ವನಾಶದಿಂದ ಕೇವಲ 2 ಮಿನಿಟು ದೂರದಲ್ಲಿ

ಇಂದು ಜಗತ್ತು ಕವಲು ದಾರಿಯಲ್ಲಿದೆ. 1967 ರಲ್ಲಿ ಬಹುಪಾಲು ರಾಷ್ಟ್ರ ಗಳು ಎನ್.ಪಿ.ಟಿ.ಗೆ ಸಹಿ ಹಾಕಿದಾಗ, ಅಮೆರಿಕ ಮಾತ್ರ ಪರಮಾಣು ಅಣ್ವಸ್ತ್ರ ಗಳನ್ನು ಮುಂದುವರೆಸುವ ಅವಶ್ಯಕತೆಗಳ ಬಗ್ಗೆ ವಾದಿಸಿತ್ತು. ಮೊದಲು ಅಣ್ವಸ್ತ್ರ ಗಳನ್ನು ಬಳಸಬಾರದೆಂಬ ಪ್ರತಿಜ್ಞೆ ಗೆ ಒಪ್ಪಿಗೆಯನ್ನು ಸೂಚಿಸಲು ನಿರಾಕರಿಸಿತ್ತು. ಅಥವಾ ವಿಶ್ವಸಂಸ್ಥೆಯ ಅನುಮತಿಯಿಲ್ಲದೆ ಯಾರೂ ಕೂಡ ಅಣ್ವಸ್ತ್ರ ದ ಬಳಕೆಯನ್ನು ಯಾವ ದೇಶದ ಮೇಲೂ ಆಕ್ರಮಣ. ಮಾಡಬಾರದೆಂಬ ವಿಶ್ವಸಂಸ್ಥೆಯ ಒಪ್ಪಂದವನ್ನು ಪಾಲಿಸುವುದಿಲ್ಲವೆಂದಿತ್ತು. ಈ ಹಿನ್ನೆಲೆಯಲ್ಲಿ, ಪರಮಾಣು ಶಸ್ತ್ರಾಸ್ತ್ರಗಳ ರಾಷ್ಟ್ರ ಗಳು ಸೇರಿದಂತೆ ಇಡೀ ಜಗತ್ತಿನ ಜನರು ಶಾಂತಿ ಪ್ರಕ್ರಿಯೆಗಾಗಿ ಪರಮಾಣು ನಿರಸ್ತ್ರೀಕರಣಕ್ಕಾಗಿ ವಿಶಾಲವಾದ ಚಳುವಳಿಯೊಂದನ್ನು ಕಟ್ಟಿದ ಹೊರತು, ಮನುಕುಲ ಸರ್ವನಾಶದ ಅಪಾಯದಿಂದ ಕೇವಲ 2 ಮಿನಿಟು ದೂರದಲ್ಲಿದೆ. ●

JANASHAKTHI KANNADA VARA PATRIKE SEP 10-16, 2018 Price: Rs. 10/- Date of Publication: 7 SEPTEMBER 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಅರ್ಥಪೂರ್ಣ 'ಗೌರಿ ದಿನ'

'ಮೋದಿ ಮೋದಿ ಮೋದಿ, ಯಾರದು ಮುಂದಿನ ಸರದಿ'





ಗಾಂಧಿಯವರನ್ನು ಕೊಂದವರೇ ಗೌರಿಯನ್ನು ಕೊಂದಿದ್ದಾರೆ
ಗೌರಿಯನ್ನು ಕೊಂದವರೇ ಕಲ್ಬುರ್ಗಿಯವರನ್ನು ಕೊಂದಿರುವುದು ಸ್ಪಷ್ಟವಿದೆ
ಹಂತಕರ ಬಂಧನ ಮಾತ್ರವಲ್ಲ, ಹುನ್ನಾರ ರೂಪಿಸಿದವರನ್ನು ಬಂಧಿಸಿ
ಕೊಲೆಗಾರರನ್ನು ಮಾತ್ರವಲ್ಲ, ಕೊಲೆಗಡುಕ ಸಂಘಟನೆಗಳನ್ನೂ ನಿಷೇಧಿಸಿ

ಈ ಘೋಷಣೆಗಳು ಸೆಪ್ಟೆಂಬರ್ 5ರಂದು ಆಚರಿಸಲಾದ 'ಗೌರಿ ದಿನ'ದಂದು ಆಹ್ವಾನ ಪತ್ರಿಕೆಯಿಂದ ಘೋಷಣೆಗಳಲ್ಲಿ ಬ್ಯಾನರುಗಳಲ್ಲಿ ಮಾರ್ದನಿಸಿದವು. ಗೌರಿ ಲಂಕೇಶ್ ಅವರ ಹತ್ಯೆಯ ವಾರ್ಷಿಕವಾಗಿತ್ತು ಈ ಸೆಪ್ಟೆಂಬರ್ 5. ಈ ಒಂದು ವರ್ಷದ ಮತ್ತು ಇತ್ತೀಚಿನ ಘಟನಾವಳಿಗಳ ಹಿನ್ನೆಲೆ ಸ್ವಾಭಾವಿಕವಾಗಿಯೇ ಈ ಆಚರಣೆಯ ಪ್ರಸ್ತುತತೆಯನ್ನು ಹೆಚ್ಚಿಸಿದ್ದವು. ಗೌರಿ ಹಂತಕರ ಮತ್ತು ಅದರ ಹಿಂದಿರುವ ಗ್ಯಾಂಗಿನ ಬಂಧನ, ಕಲ್ಬುರ್ಗಿ ಮತ್ತು ಇತರ ಚಿಂತಕರ ಹತ್ಯೆಗಳಿಗೆ ಸಂಬಂಧ,



ಇತ್ತೀಚಿನ ಸರಣಿ ಲಿಂಚಿಂಗುಗಳು ಮತ್ತು ಮಾನವ ಹಕ್ಕು ಹೋರಾಟಗಾರರ ಹಠಾತ್ ಬಂಧನ ಇವೆಲ್ಲ =ದರ ಹಿನ್ನೆಲೆಯಲ್ಲಿ 'ಗೌರಿ ದಿನ'ದ ಆಚರಣೆ 'ಅಭಿವ್ಯಕ್ತಿ ಹತ್ಯೆ ವಿರೋಧಿ ಸಪ್ತಾಹ'ದ ಸಮಾರೋಪವಾಗಿತ್ತು. 'ಗೌರಿ ದಿನವನ್ನು ಹಲವು ಕಾರ್ಯಕ್ರಮಗಳ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಬೆಳಿಗ್ಗೆ ಗೌರಿ ಸಮಾಧಿಯ ಬಳಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಅವರ ನೇತೃತ್ವದಲ್ಲಿ 'ಶ್ರದ್ಧಾಂಜಲಿ ಸಭೆ' ನಡೆಸಲಾಯಿತು. ಸುಮಾರು 10.30ಕ್ಕೆ 'ಮೋದಿ ಮೋದಿ ಮೋದಿ ಯಾರದು ಮುಂದಿನ ಸರದಿ' ಘೋಷಣೆಯೊಂದಿಗೆ ಮೌರ್ಯ ಹೋಟೆಲಿನ ಬಳಿ ಇರುವ ಗಾಂಧಿ ಪ್ರತಿಮೆಯಿಂದ 'ರಾಜಭವನ ಚಲೋ'ವನ್ನು ಸಂಘಟಿಸಲಾಗಿತ್ತು. ಇದಕ್ಕೆ ಸ್ವಾಮಿ ಅಗ್ನಿವೇಶ್ ಚಾಲನೆ ನೀಡಿದರು. ಇದಕ್ಕೆ ಮೊದಲು ಗಾಂಧಿ ಪ್ರತಿಮೆಯೆದುರು ಜಿ.ವಿ.ಶ್ರೀರಾಮರೆಡ್ಡಿ, ಜಿ.ಕೆ. ಗೋವಿಂದ ರಾವ್, ವಿಜಯಮ್ಮ, ಬಿ.ಟಿ.ಲಲಿತಾ ನಾಯಕ್, ರಹಮತ್ ತರಿಕೆರೆ ಮುಂತಾದವರು ಮಾತನಾಡಿದರು.

ಬೆಂಗಳೂರು ವಿ.ವಿ.ಯ ಜ್ಞಾನಜ್ಯೋತಿ ಸಭಾಂಗಣದಲ್ಲಿ ಮಧ್ಯಾಹ್ನದಿಂದ ತಡ ಸಂಜೆಯವರೆಗೆ ನಡೆದ 'ಅಭಿವ್ಯಕ್ತಿ ಸ್ವಾತಂತ್ರ್ಯ ಸಮಾವೇಶ'ದಲ್ಲಿ ಹಲವು ಗೋಷ್ಟಿಗಳಿದ್ದವು. 'ದನಿ–ಲೇಖನಿ'ಯೆಂದು ಹೆಸರಿಸಲಾಗಿದ್ದ ಉದ್ಘಾಟನಾ ಸಮಾರಂಭದಲ್ಲಿ ಪ್ರಸಿದ್ಧ ಪತ್ರಕರ್ತ 'ದಿ ವೈರ್' ಸಂಪಾದಕ ಸಿದ್ಧಾರ್ಥ ವರದರಾಜನ್ 'ನ್ಯಾಯ ಪಥ'ಎಂಬ ಹೆಸರಿನಲ್ಲಿ ಗೌರಿ ಪತ್ರಿಕೆ ಬಿಡುಗಡೆ ಮಾಡಿದರು. ಗೌರಿ ಹೆಸರಿನ ಲೇಖನಿಯನ್ನು ಚಂಪಾ ಮತ್ತು ಕವಿತ ಲಂಕೇಶ್ ಬಿಡುಗಡೆ ಮಾಡಿದರು. ಎ.ಕೆ. ಸುಬ್ಬಯ್ಯ ಅಧ್ಯಕ್ಷತೆ ವಹಿಸಿದ್ದರು. ಬೊಳುವಾರು, ಡಾ. ಕೆ. ಮರುಳಸಿದ್ದಪ್ಪ ಮುಂತಾದವರು ಭಾಗವಹಿಸಿದ್ದರು. ಪ್ರೊ. ವಿ.ಎಸ್.ಶ್ರೀಧರ್ ಆಶಯ ನುಡಿಗಳನ್ನಾಡಿದರು.

ಮೊದಲನೆಯ ಗೋಷ್ಟಿ 'ಸನಾತನವಾದಿ ಭಯೋತ್ಪಾದನೆ, ಎಚ್ಚರ, ಎಚ್ಚರಿಕೆ' ಮೇಲಾಗಿತ್ತು. ಪ್ರಸನ್ನ ಆಶಯ ನುಡಿಗಳನ್ನಾಡಿದರು. ತೀಸ್ತಾ ಸೆಟಲ್ ವಾಡ್ ಅಧ್ಯಕ್ಷತೆ ವಹಿಸಿದ್ದರು. ಎರಡನೇ ಗೋಷ್ಟಿಯನ್ನು 'ಕಗ್ಗತ್ತಲ ಕಾಲದ ಕೋಲ್ಮಿಂಚುಗಳು' ಎಂದು ಕರೆಯಲಾಗಿತ್ತು. ದಿನೇಶ

ಪುಟ 11 ಕ್ಕೆ

'ಸಹಿಷ್ಣುತೆಗಾಗಿ ಸಾಹಿತ್ಯ ಸಮಾವೇಶ' ಸಮಾರೋಪ



'ಸಹಿಷ್ಣುತೆಗಾಗಿ ಸಾಹಿತ್ಯ ಸಮಾವೇಶ' ಸಮಾರೋಪದಲ್ಲಿ ಸಮಾವೇಶವನ್ನು ನಡೆಸಿಕೊಟ್ಟ ಅಧ್ಯಕ್ಷೀಯ ಮಂಡಳಿ ಬೊಳುವಾರ ಮಹಮ್ಮದ್ ಕುಂಞ, ಡಾ. ವಿಜಯಮ್ಮ, ಮೂಡ್ನಾಕೂಡು ಚಿನ್ನಾಸ್ವಾಮಿ, ಗೀತಾ ಹರಿಹರನ್ ಮತ್ತು ಡಾ॥ ಕೆ. ಮರಳು ಸಿದ್ದಪ್ಪ

ಪ್ರತಿಜ್ಞೆ

ನಮ್ಮ ಗೌರಿಯ ...ಅದಮ್ಯ ಚೈತನ್ಯ.ದ ಮೇಲಾಣೆ.
ಕಲಬುರ್ಗಿ, ಧಾಬೋಲ್ಕರ್, ಪನ್ಸಾರೆಯವರ ಸತ್ಯ ಮಾರ್ಗದ ಮೇಲಾಣೆ.
ಜನಜೀವಿತದ ಜೀವಾತ್ಮದ ಮೇಲಾಣೆ
ನಲಗುತಿಹ ಈ ನೆಲದ ಸಾರದ ಮೇಲಾಣೆ.

ಹಬ್ಬುತ್ತಿಹ ವಿಷರೋಗದ ಕಂಡು ಮಂಡಿ ಊರಲಾರೆವು ನಾವು
ನರಬಲಿಯ ಪಂಥಕ್ಕೆ ಶಿರಬಾಗಿ ನಿಲ್ಲಲಾರೆವು ನಾವು
ನಮ್ಮುಸಿರ ಹಿಸುಕುವುದ ಕಣ್ಣುಮುಚ್ಚಿ ಸಹಿಸುವುದಿಲ್ಲ ನಾವು
ಆಕಾಶವ ಹೊಸಕುವುದ ಸಹಿಸುತ್ತಾ ಸುಮ್ಮನಿರಲಾರೆವುವ ನಾವು

ನಮ್ಮಿಂದದು ಸಾಧ್ಯವಿಲ್ಲ ನಾವೆಂದೂ ಅದನ್ನು ಮಾಡುವುದಿಲ್ಲ
ನಮ್ಮಿಂದದು ಸಾಧ್ಯವಿಲ್ಲ ನಾವೆಂದೂ ಅದನ್ನು ಮಾಡುವುದಿಲ್ಲ

ನೆತ್ತರ ಮಿಡಿಯುವ ಹೃದಯಗಳಲಿ ಭರವಸೆಯ ಚಿಲುಮೆ ಹರಿಸುವೆವು ನಾವು
ಬೆಳೆಯುತಿಹ ಎಳೆಯ ಮನಸುಗಳಲಿ ನ್ಯಾಯದ ಬೀಜ ಬಿತ್ತುವೆವು ನಾವು
ಕಾರುಣ್ಯ ಮತ್ತು ಕೆಚ್ಚದೆಯ ಜೊತೆ ಜೊತೆಗೂಡಿ ಎದ್ದು ನಿಲ್ಲುವೆವು ನಾವು
ಹೊಸ ಪಸರಿನ ಜೊತೆ ಭೂತಾಯ ಅಪ್ಪಿಕೊಳ್ಳುವೆವು ನಾವು

ಇದು
ಜೀವ ವಸಂತದ ಮೇಲಾಣೆ ನಲ್ಮೆಯ ನಮ್ಮ ಗೌರಿಯ ಮೇಲಾಣೆ

ಅಭಿವ್ಯಕ್ತಿ ಮರುಹುಟ್ಟು..



JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**